ಚೇರ್ಮನ್.—ಆಯಿತು ಮುಗಿಸಿ. ಈಗ ಬೇಡಿಕೆಯ ಮೇಲೆ ಚರ್ಚೆ ಮುಗಿದಿದೆ.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೆ, ನಮಗೆ ಎರಡು ನಿಮಿಷ ಅವಕಾಶ ಕೊಡಿ.

ಚೇರ್ಮನ್.—ಆಗುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ಈಗ ೬೯ನೇ ನಿಯಮದ ಮೇರೆಗೆ ಅಲ್ಪಕಾಲಾವಧಿ ಚರ್ಚೆ. ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡಬೇಕು.

ಅಲ್ಪ ಕಾಲಾವಧಿ ಚರ್ಚೆ

ನವ ಮಂಗಳೂರು ಬಂದರು ಪ್ರದೇಶಕ್ಕೆ ಕರ್ನಾಟಕ ಸರ್ಕಾರದ ಪೋಲೀಸರು ಅಕ್ರಮವಾಗಿ ಪ್ರವೇಶಮಾಡಿ ಹಲವು ಅಕೃತ್ಯಗಳನ್ನು ನಡೆಸಿರುವ ಬಗ್ಗೆ.

ಶ್ರೀ ಎಂ, ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು ಮತ್ತು ಅನೇಕ ಸ್ನೇಹಿತರು ನವ ಮಂಗಳೂರು ಬಂದರು ಪ್ರದೇಶಕ್ಕೆ ಕರ್ನಾಟಕ ಸರ್ಕಾರದ ಪೋಲೀಸರು ಅಕ್ರಮವಾಗಿ ಪ್ರವೇಶ ಮಾಡಿ ಹಲವು ಅಕೃತ್ಯಗಳನ್ನು ಅಮಾನುಷವಾದ ರೀತಿಯಲ್ಲಿ ನಡೆಸಿದ ಬಗ್ಗೆ ವಿಷಯ ಪ್ರಸ್ತಾಪ ಮಾಡಿದ್ದಾರೆ. ನವ ಮಂಗಳೂರು ಬಂದರಿನಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಯವರ ಮೇಲೆ ಪೋಲೀಸರು ವರ್ತಿಸಿದಂಥ ವಿಚಾರದಲ್ಲಿ ಒಂದು ಚರ್ಚೆಯನ್ನು ಎತ್ತಿದ್ದಾರೆ. ಇದೊಂದು ಬಹಳ ದುರಾದೃಷ್ಟಕರವಾದ ಪ್ರಸಂಗ, ಈ ನಡವಳಿಕೆ ಈ ಸದನದಲ್ಲಿ ಪ್ರಸ್ತಾಪವಾಗತಕ್ಕ ಪರಿಸ್ಥಿತಿ ನಿರ್ಮಾಣವಾಗಬಾರದಾಗಿತ್ತು. ಪೋಲೀಸರು ಜನರಿಗೆ ರಕ್ಷಣೆಯನ್ನು ಕೊಡಬೇಕು. ಕಾನೂನಿನ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗತಕ್ಕ ಜವಾಬ್ದಾರಿ ಅವರ ಮೇಲಿದೆ. ಯಾವುದೇ ಆಸ್ತಿ ಆಗಿರಲಿ, ಕೇಂದ್ರ ಸರ್ಕಾರದ ಒಂದು ಆಸ್ತಿ ಇರಬಹುದು, ರಾಜ್ಯ ಸರ್ಕಾರದ ಆಸ್ತಿ ಇರಬಹುದು, ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಸರ್ಕಾರಿ ಸಿಬ್ಬಂದಿಗಳಿರಬಹುದು, ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂಥ ಸಿಬ್ಬಂದಿ ಇರಬಹುದು ಅವರನ್ನು ಕಾಪಾಡಬೇಕು. ಮೂಲಭೂತವಾಗಿ ನಾಗರೀಕರ ಪ್ರಶ್ನೆ ಬಂದಾಗ ಕೂಡ ನಿಷ್ಪಕ್ಷಪಾತವಾಗಿ, ನ್ಯಾಯವಾಗಿ ಒಂದು ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಬೇಕಾದ ಜವಾಬ್ದಾರಿ ಪೋಲೀಸರಿಗೆ ಇದೆ. ಇಂಥ ಒಂದು ಸಾಮಾನ್ಯ ವ್ಯವಸ್ಥೆಗೆ ಭಂಗ ಬರತಕ್ಕ ವಿಚಾರ ಈ ತಿಂಗಳ ೨೮ನೇ ತಾರೀಖು ರಾತ್ರಿ ಸುಮಾರು ಹತ್ತೂವರೆ ಗಂಟೆಯಲ್ಲಿ ನವ ಮಂಗಳೂರು ಬಂದರಿನಲ್ಲಿ ನಡೆದಿದೆ. ಇದರ ವಿಚಾರ ನಾವು ಹಿಂದೆ ಪ್ರಸ್ತಾಪ ಮಾಡಿದಾಗ ಈ ಬಗ್ಗೆ ಚರ್ಚೆ ಅಗತ್ಯ ಎಂಬುದನ್ನು ಮನಗಂಡು ಇದಕ್ಕೆ ನಮ್ಮ ಗೃಹ ಸಚಿವರೂ ಒಪ್ಪಿಕೊಂಡಿದ್ದಾರೆ. ಈ ವಿಚಾರ ಅಂಥ ಒಂದು ಗಂಭೀರತೆಯನ್ನು ಇವತ್ತು ಪಡೆದಿದೆ. ಇದಕ್ಕೆ ನಾನಾ ಬಣ್ಣಗಳನ್ನು ನಾವು ಕಟ್ಟಬಹುದು ಅಥವಾ ಇವತ್ತು ಅಧಿಕಾರದಲ್ಲಿದ್ದಂಥ ಪಕ್ಷದವರು ಕಟ್ಟಬಹುದು, ಅಥವಾ ಗೃಹ ಸಚಿವರು ಕಟ್ಟಬಹುದು. ಒಂದೊಂದೇ ಮುಖದ, ಬೇರೆ ಬೇರೆ ಸಮಸ್ಯೆಯ ವ್ಯಾಪ್ತಿಯ ಒಂದೊಂದು ತುಣುಕನ್ನು ಹೆಕ್ಕಿ ಮಾತನಾಡುವುದು ಸುಲಭ. ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಕೆಲವು ವಿಚಾರಗಳನ್ನು ಹೇಳಬಹುದು. ಆದರೆ ಸಮಗ್ರ ದೃಷ್ಟಿಯಿಂದ ವಿಚಾರವನ್ನು ನೋಡಬೇಕಾಗಿದೆ. ಅದಕ್ಕಾಗಿ ಗಂಭೀರತೆಯ ಸ್ವರೂಪವನ್ನು ಈ ವಿಚಾರ ತಳೆದಿದೆ. ನಾವು ಇವತ್ತು ಹೇಳುತ್ತೇವೆ. ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಕೇಂದ್ರದ ಇನ್‌ವೆಸ್ಟ್‌ಮೆಂಟ್ ಆಗಬೇಕು ಎಂದು. ಯಾವುದೇ ಇನ್‌ವೆಸ್ಟ್ ಆಗಬೇಕಾದರೆ ಬಂದರು ಬಹಳ ಪ್ರಾಮುಖ್ಯ. ಇಡೀ ಕರ್ನಾಟಕ ರಾಜ್ಯದಲ್ಲಿ ಅಂತರ ರಾಷ್ಟ್ರೀಯ ವ್ಯವಹಾರವನ್ನು ನಡೆಸುವುದಕ್ಕೆ, ಸಾಗಾಣಿಕೆ ಮಾಡುವುದಕ್ಕೆ ಇರತಕ್ಕದ್ದು ಒಂದೇ ಒಂದು ಬಂದರು. ನಮಗೆ ಇರತಕ್ಕ ನವ ಮಂಗಳೂರು ಬಂದರಿನಲ್ಲೇ ಸಾಗಾಣಿಕೆಗೆ ತೊಂದರೆ ಬಂದರೆ, ತಡೆ ಬಂದರೆ ಯಾವ ರಾಜ್ಯದಲ್ಲಿ ಮಂಗಳೂರು ಬಂದರು ಇದೆ ಆ ರಾಜ್ಯದಲ್ಲಿರತಕ್ಕ ಸರ್ಕಾರವೇ ಇವತ್ತು ರಕ್ಷಣೆಯನ್ನು ಮಾಡದೇ ಹೋದರೆ ಪರಿಸ್ಥಿತಿ ಎಲ್ಲಿಗೆ ತಲುಪುತ್ತದೆ. ರಕ್ಷಣೆ ಮಾಡುವುದು ಬಿಟ್ಟು ತಟಸ್ಥವಾಗಿ ಇರುವುದು ಬಿಡಿ. ಇವತ್ತು ಈ ಪೋಲೀಸ್ ಇಲಾಖೆಯ ಸಿಬ್ಬಂದಿ ನವ ಮಂಗಳೂರು ಬಂದರಿನ ಸೆಕ್ಯೂರಿಟಿ ವಲಯಕ್ಕೆ ನುಗ್ಗಿ, ಹಡಗಿನ ವಿಚಾರವಲ್ಲಿ ಬಂದರಿನ ವಿಚಾರದಲ್ಲಿ ನೋಡಿಕೊಳ್ಳುತ್ತಿರುವ ಭದ್ರತಾಪಡೆಗಳು ಏನು ಬಂದರಿನಲ್ಲಿವೆ ಅಂಥ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್‌ಗೆ ಹೊಡೆದು ಬಡಿದಿದ್ದಾರೆ. ಇಂಥ ಪ್ರಸಂಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಥವಾ ಯಾವುದೇ ರಾಜ್ಯದಲ್ಲಿ ಅನ್‌ಪ್ರೆಸಿಡೆಂಟೆಡ್ ಅಂಥ ಒಂದು ದೌರ್ಜನ್ಯ ಅಲ್ಲಿ ನಡೆದಿದೆ ಎಂದರೆ ಉತ್‌ಪ್ರೇಕ್ಷೆ ಎಂದು ಯಾರೂ

ದಯಮಾಡಿ ತಿಳಿದುಕೊಳ್ಳಬಾರದು, ನಮ್ಮ ಪಕ್ಷದ ಸಂಘಟನೆ ಮೇಲೆ ಸಾಕಷ್ಟು ವಿಷಯಗಳಿವೆ. ಜನಗಳಲ್ಲಿ ನಮ್ಮ ಪಕ್ಷದ ಚಟುವಟಿಕೆ ಬಗ್ಗೆ ಒಳ್ಳೆಯ ಭಾವನೆಯನ್ನು ಹುಟ್ಟಿಸಿ ನಮ್ಮ ಪಕ್ಷದ ನೆಲವನ್ನು ಹಸನು ಮಾಡಬೇಕಾಗಿದೆ ಇವತ್ತು ಜ್ವಾಲಾಮುಖಿ ಎಬ್ಬಿಸಿ ಭೂಮಿಯನ್ನು ಒಡೆದು ನಮ್ಮ ಪಕ್ಷದ ಸೌಧವನ್ನು ಕಟ್ಟುತ್ತೇವೆ ಎಂದರೆ ಅದರಿಂದ ಸಾಧ್ಯವಾಗುವುದಿಲ್ಲ. ಆ ರೀತಿಯಾಗಿ ಮಾಡುವುದಕ್ಕೆ ಯಾವ ಪಕ್ಷವೂ ಹೋಗಬಾರದು. ಯಾವ ಸಂಘಟನೆ ಕೂಡ ಇದರಿಂದ ಪೂರಕವಾಗಿ ಬೆಳೆಯುವುದಿಲ್ಲ. ಆ ದೃಷ್ಟಿಯಿಂದ ವಿಚಾರವನ್ನು ತೆಗೆದುಕೊಂಡು ಹೋಗುವುದಕ್ಕೆ ಪೀಠಿಕಾರೂಪವಾಗಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಮಗೆ ಗೊತ್ತಿದೆ, ಕುದುರೆಮುಖ ಕಬ್ಬಿಣದ ಯೋಜನೆ ಏನಿದೆ ಅದಕ್ಕೆ ಮಾರ್ಕೆಟ್ ಇಲ್ಲದೆ, ಇರಾನಿನ ಅಗ್ರಿಮೆಂಟ್ ಇಲ್ಲದೆ ಮೊನ್ನೆಮೊನ್ನೆಯವರೆಗೂ ಸ್ಥಗಿತವಾಗಿತ್ತು ಈಗ ಕುದುರಿದೆ. ಸೆಂಟ್ರಲ್ ಗೌರ್ನಮೆಂಟ್ ಮತ್ತು ಸ್ಟೇಟ್ ಗೌರ್ನಮೆಂಟ್‌ನಿಂದ ಯಾವುದೇ ಕೈಗಾರಿಕೆಗಳನ್ನು ಮಾಡಿದ್ದರೂ ಕೂಡ ಅದನ್ನು ಸಾಗಾಣಿಕೆ ಮಾಡಬೇಕಾದರೆ ಹೊರದೇಶಕ್ಕೆ ರಫ್ತು ಮಾಡಬೇಕಾಗಿದ್ದರೆ ಬಂದರಿನ ಮುಖಾಂತರವೇ ಮಾಡಬೇಕಾಗುತ್ತದೆ.

ಈ ಬಂದರು ಬೆಳೆಯಬಾರದು ಎಂದು ಇಡೀ ದೇಶದಲ್ಲಿ ಒಂದು ಲಾಬಿ ಇರುವುದು ತಮಗೆ ಗೊತ್ತೇ ಇದೆ. ಮಂಗಳೂರು ಬಂದರನ್ನು ಸ್ಥಗಿತ ಮಾಡಬೇಕೆಂದು ಅನೇಕ ಮಂದಿ ನೋಡುತ್ತಿದ್ದಾರೆ. ಇವತ್ತು ಅದರ ಗುಡ್‌ವಿಲ್ ಬಹಳ ಮುಖ್ಯ ಇದೆ, ಬಂದರು ಸ್ಥಗಿತಗೊಂಡರೆ ಅಲ್ಲಿ ಕೋಟ್ಯಾಂತರ ರೂಪಾಯಿ ಸ್ಥಗಿತವಾಗುತ್ತದೆ. ಇವತ್ತು ಅಲ್ಲಿ ಹಡಗು ಹಾಗೆ ನಿಂತರೆ ನಮ್ಮಲ್ಲಿ ಯಾರೂ ಕೂಡಾ ವ್ಯಾಪಾರ ಮಾಡುವುದಕ್ಕೆ ಬರುವುದಿಲ್ಲ. ಆಗ ಮದ್ರಾಸ್ ಅಥವಾ ಗೋವಾ ಅಥವಾ ಬೊಂಬಾಯಿಂದ ರಫ್ತು ಮಾಡತಕ್ಕ ಪ್ರಸಂಗ ಬರುತ್ತದೆ. ಇವತ್ತು ಈ ಒಂದು ಬಂದರಿನ ಗ್ರಾಫ್ ನೋಡಿದರೇ ಅದು ಎಂತಹದ್ದು ಎಂದು ಗೊತ್ತಾಗುತ್ತದೆ. Our country is proud of this new Mangalore port. ಈ ಬಂದರಿನ ಅಧ್ಯಕ್ಷರು ಹಿಂದೆ ಒಬ್ಬರು ಇದ್ದಿರಬಹುದು ಈಗ ಒಬ್ಬರು ಇರಬಹುದು ಅಥವಾ ಮುಂದೆ ಬೇರೊಬ್ಬರು ಬರಬಹುದು. ಇವತ್ತು ಅಲ್ಲಿ ಯಾರು ಛೇರ್ಮನ್ ಇದ್ದಾರೆ ಅವರು ಮುಖ್ಯ ಅಲ್ಲ. ಅಲ್ಲಿನ ಒಂದು ವ್ಯವಸ್ಥೆ ಮುಖ್ಯವಾಗುತ್ತದೆ. ಅಲ್ಲಿ ಆಗಿರತಕ್ಕ ಬೆಳವಣಿಗೆಯನ್ನು ನಾವು ಗ್ರಾಫ್ ಮೂಲಕ ನೋಡಬಹುದು. ಅಲ್ಲಿ ಬಂದರನ್ನು ವಿಸ್ತಾರಗೊಳಿಸಿದ್ದಾರೆ. We may have to pat that Gentleman. We have to sppreciate him. ಆದರೆ ಇವತ್ತು ನಮ ಮಂಗಳೂರು ಬಂದರು ಬೆಳೆದು ಬಂದ ರೀತಿ ನೋಡಿದರೆ, ಅದು ಅದ್ಭುತ ಗಾತ್ರದಲ್ಲಿ ಬೆಳವಣಿಗೆ ಆಗಿರುವುದನ್ನು ನೋಡಿದರೇ ಅದರ ಬೆಳವಣಿಗೆ ಗೊತ್ತಾಗುತ್ತದೆ. ಅಲ್ಲಿ ಅನೇಕ ಬರ್ತ್‌ಗಳನ್ನು ಹೆಚ್ಚು ಮಾಡಲಾಗಿದೆ. ಕೇಂದ್ರದ ಲೋಕಸಭೆಯ ಎಸ್ಟಿಮೇಟು ಕಮಿಟಿಯವರು ಇದರ ಬಗ್ಗೆ ಕೊಟ್ಟಿರುವ ವರದಿಯನ್ನು ತಾವು ನೋಡುವುದಾದರೆ they have appreciated the development of this Mangalore port. ಇದಕ್ಕೆ ಅಪ್ರಿಶಿಯೇಟ್ ಮಾಡುವ ಅಂಶವೇನೆಂದರೆ, ಈಗ ಯಾರು ಅಧ್ಯಕ್ಷರು ಇದ್ದಾರೆ ಅವರ ಅವಧಿಯಲ್ಲಿ ಇದು ವಿಸ್ತೃತಗೊಂಡಿದೆ, ಇವರ ಗ್ರಾಫ್ ಹೆಚ್ಚಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವನ್ನು ತಾವು ಹೇಳುವಾಗ ನಾನು ಅಡ್ಡಿಬರುವುದಿಲ್ಲ. ಕೇಂದ್ರದ ಉದ್ಯಮಗಳು ರಾಜ್ಯಕ್ಕೆ ಬರುವುದರ ಬಗ್ಗೆ ಏನೇನು ರಕ್ಷಣೆಯನ್ನು ಕೊಡಬೇಕೋ ಅದನ್ನು ಕೊಡೋಣ. ಕೇಂದ್ರದ ಅಧಿಕಾರಿ ಯಾರೇ ಇರಲಿ ಅವರು ಉತ್ತಮವಾದ ಕೆಲಸ ಮಾಡುತ್ತಿದ್ದರೆ ಅವರಿಗೆ ಬೆಂಬಲ ಮಾಡೋಣ. ಆದರೆ ಈ ಬಗ್ಗೆ ಕರ್ನಾಟಕಕ್ಕೆ ಅನ್ಯಾಯವಾಗತಕ್ಕ ಅವ್ಯವಹಾರ ನಡೆದರೆ ಅಂತಹ ಹಿತಗಳಿಗೆ ಬೆಂಬಲ ಕೊಡಬಾರದು, ಅದೂ ಕೂಡಾ ಇದರಲ್ಲಿ ಅಡಕವಾಗಿದೆ, ಯಾರ ಮೇಲೆ ತಾವು ಹೇಳುತ್ತಿದ್ದೀರೋ ಅವರ ಮೇಲೆ ಸಿ.ಬಿ.ಐ. ಎನ್‌ಕ್ವೈಯರಿ ನಡೆಯುತ್ತಾ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಶಿಪ್ಪಿಂಗ್ ಮಿನಿಸ್ಟ್ರಿಯ ಜವಾಬ್ದಾರಿ ತೆಗೆದುಕೊಂಡಾಗ ನಾನು ಆ ಬಗ್ಗೆ ಪ್ರಶ್ನೆ ಹಾಕುತ್ತೇನೆ. ಆಗ ಅವರು ಇವಕ್ಕೆ ಉತ್ತರ ಕೊಡಲಿ. I Will ask your certificate when you become the Union Shipping Minister Till such time please do not make such observations. I desist from entering with any controversy as to whether that man is good or bad

I am only referring to the development of the Mangalore portand the certificate issued by the Estimate Committed of the Lokasabha.

SRI S. R. BOMMAI.—Please speak on the subject.

SRI VEERAPPA MOILY,—Don't go with a prejudiced view. I know your intention. Let us not have a prejudiced view on this subject.

ಶ್ರೀ ಜಿ. ನಾರಾಯಣ ಕುಮಾರ್.—ಕನ್ನಡಿಗರಿಗೆ ಅನ್ಯಾಯ ಮಾಡುತ್ತಿರುವ ಅಧಿಕಾರಿ ಬಗ್ಗೆ ತಾವೊಲವು ವಹಿಸಿ ಮಾತನಾಡತಕ್ಕದ್ದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಲ್ಲಿ ಕೆಲವು ಸೀಮಾರೇಖೆಗಳು ಇವೆ. ನಾನು ಆ ಅಧಿಕಾರಿ ಬಗ್ಗೆ ಖಂಡನೆ ಮಾಡುವುದಕ್ಕೆ ಹೋಗುವುದಿಲ್ಲ. ಕಾರಣ ಅವರು ಈ ಸಭೆಯ ಸದಸ್ಯರಲ್ಲ. ಅವರು ಒಬ್ಬ ಅಧಿಕಾರಿಯಾಗಿದ್ದಾರೆ. ಅವರ ವಿಚಾರದ ಬಗ್ಗೆ ಖಂಡನೆಯನ್ನೂ ಮಾಡುವುದಿಲ್ಲ. ಖಂಡನೆ ಮಾಡುವುದಿಲ್ಲವೆಂದಾಗ ಅವರನ್ನು ಹೊಗಳುವುದಕ್ಕೂ ನಾನು ಹೋಗುವುದಿಲ್ಲ. ಆ ವಿಷಯ ಇಲ್ಲಿ ಇಲ್ಲ. I am telling you about the development of the port.

ಛೇರ್ಮನ್.—ಪೋಲೀಸ್ ಆಟ್ರಾಸಿಟೀಸ್ ಬಗ್ಗೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ —ಒಂದು ವಿಷಯವನ್ನು ಹೇಳುತ್ತೇನೆ. ಈ ವಿಷಯವನ್ನು ಲೋಕಸಭೆಯಲ್ಲಿ ಎತ್ತಬೇಕು, ಏಕೆ ಹೇಳುತ್ತಿದ್ದೇನೆಂದರೆ the overall intrest of the State in Trade and Commerce depends upon the only one jewel of this State, *i.e.*, New Mangalore harbour. ಅಂತಹ ಒಂದು ಪ್ರಾಮುಖ್ಯತೆ ಇದೆ ಇವತ್ತು ನಮ್ಮ ಇಡೀ ಕರ್ನಾಟಕದ ರಫ್ತು ವ್ಯಾಪಾರದ ಬಗ್ಗೆ ಮಂಗಳೂರು ಬಂದರು ಜೀವಾಳವಾಗಿದೆ. We are interested in it. ಆದುದರಿಂದ ಅಧ್ಯಕ್ಷರೇ, ಇದರ ಬಗ್ಗೆ ನಾನು ಸೀಮಿತಗೊಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇಂತಹ ಒಂದು ಬಂದರು ಇವತ್ತು ಅಪಾರವಾಗಿ ಬೆಳೆದಿದೆ. ಇದಕ್ಕೆ ಅಧ್ಯಕ್ಷರು ಪ್ರಾಮುಖ್ಯರೋ. ಅಥವಾ ಸೆಕ್ರೆಟರಿ ಪ್ರಾಮುಖ್ಯರೋ, ಚೀಫ್ ಎಂಜಿನಿಯರ್ ಕಾರಣವೋ, ಟ್ರಾಫಿಕ್ ಇನ್ಸ್‌ಪೆಕ್ಟರ್ ಕಾರಣವೋ, ಕ್ಯಾಶುಯಲ್ ವರ್ಕರ್ಸ್ ಕಾರಣರೋ, ವರ್ಕರ್ಸ್ ಕಾರಣವೋ ಎಂದು ವಿಶ್ಲೇಷಣೆ ಮಾಡತಕ್ಕದ್ದು ಚರ್ಚೆಯಲ್ಲ. ಅಂತಹ ವಿಶ್ಲೇಷಣೆಯನ್ನು ತಾವೂ ಕೂಡಾ ಮಂತ್ರಿಯಾಗಿ ಮಾಡುವುದಕ್ಕೆ ಹೋಗಬೇಡಿ. ಇದನ್ನೆಲ್ಲಾ ನೀವು ಹೇಳುವಾಗ ನನಗೆ ಏನು ಕಾಣಿಸುತ್ತಾ ಇದೆ ಎಂದರೆ you have a prejudiced view against that person. ತಮ್ಮ ಸರ್ಕಾರ ಇದೆ. ತಮಗೆ ಶಕ್ತಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಆ ಅಧಿಕಾರಿಯನ್ನು ಬೆಂಬಲಿಸಿ ಹೊಗಳಲಿಕ್ಕೆ ಪ್ರಾರಂಭ ಮಾಡಿದಿರಿ. ನೀವು ಹಾಗೆ ಮಾಡಿದಾಗ ಅದನ್ನು ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಆ ರೀತಿ ಮಾತನಾಡಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಅಧಿಕಾರಿ ಬಗ್ಗೆ ತಮ್ಮಲ್ಲಿ ಇರತಕ್ಕದ್ದು......

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಆ ಅಧಿಕಾರಿ ಬಗ್ಗೆ ಏನು ಮಾತನಾಡುತ್ತೇವೆಂದು ತಾವು ಊಹಿಸಿ ಮಾತನಾಡುತ್ತೀರಾ? ಆ ಬಗ್ಗೆ ನಿಂತು ಹೇಳಬೇಕೆಂದರೆ ನಾನು ಹೇಳುತ್ತೇನೆ

SRI S.R. BOMMAI.—I can speak volume and volumes about this New Mangalore port. I have visited this harbour. As a Minister. I have visited this place. I have got my own reports. I know what officers are doing there.

(Interruption)

SRI VEERAPPA MOILY.—You are creating an evidence against yourself by making such statements.

(Interruption)

SRI M. VEERAPPA MOILY.—please don't put yourself into the shoes of......

(Interruption)

MR. CHAIRMAN.—Please speak on the subject before us.

SRI VEERAPPA MOILY.—Sir, I was perfectly on the mainstream. But the Hon'ble Minister...

SRI VEDANTHA HEMMIGE.—Sir, I rise to a point of order.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇದರಲ್ಲಿ ಕ್ರಿಯೆ ಏನೂ ಇಲ್ಲ. ಬರೀ ಲೋಪ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಸಭಾಧ್ಯಕ್ಷರೆ, ನಿನ್ನೆಯ ದಿವಸ ಟೈಂಸ್ ಪತ್ರಿಕೆಯಲ್ಲಿ......

ಗೊಂದಲ

ಛೇರ್ಮನ್.— ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಸಂಕ್ಷಿಪ್ತವಾಗಿ ಹೇಳಿ.

ಒಬ್ಬ ಮಾನ್ಯ ಸದಸ್ಯರು.— ಅವರು ತಿಳಿಗನ್ನಡದಲ್ಲಿ ಹೇಳುತ್ತಾರೆ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ, ಅವರು ಹೇಳುವುದನ್ನು ನಾವು ಕೇಳಬೇಕು. ನಾವು ಹೇಳುವುದನ್ನು ಅವರು ಕೇಳಬೇಕು. ಮಾನ್ಯ ವಿರೋಧಪಕ್ಷದ ಸದಸ್ಯರಾದ ವೀರಪ್ಪ ಮೊಯ್ಲಿಯವರು ಮಾತನಾಡುವಾಗ ಯಾರೂ ಕೂಡ ಮಾತನಾಡಲಿಲ್ಲ.

ಛೇರ್ಮನ್.— ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನೆಂಬುದನ್ನು ಹೇಳಿ. ಅನಂತರ ನಾನು ತೀರ್ಮಾನ ಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.— ನಿನ್ನೆಯ ದಿವಸ ಟೈಂಸ್ ಪತ್ರಿಕೆಯಲ್ಲಿ ಕರ್ನಾಟಕದಲ್ಲಿ ಇರತಕ್ಕ ಮಂಗಳೂರು ಬಂದರಿನಲ್ಲಿ ಛೇರ್ಮನ್ ಆಗಿರತಕ್ಕ ಐ.ಎ.ಎಸ್. ಅಧಿಕಾರಿಯೊಬ್ಬರು ಕೇಂದ್ರಸರ್ಕಾರಕ್ಕೆ ಒಂದು ಟೆಲೆಕ್ಸ್ ಮೆಸೇಜನ್ನು ಕೊಟ್ಟು ರಾಜ್ಯಸರ್ಕಾರ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪಾಯಿಂಟ್ಆಫ್ ಆರ್ಡರ್ ಏನಿದೆ? ಪೇಪರ್‌ನಲ್ಲಿ ಬಂದಿರುವುದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ಜಿ. ನಾರಾಯಣಕುಮಾರ್.— ಸ್ವಾಮಿ ಪತ್ರಿಕೆಯಲ್ಲಿ ಬಂದಿರುವುದನ್ನು ಅವರು ಹೇಳುತ್ತಿದ್ದಾರೆ. ಅದನ್ನು ಹೇಳುವುದಕ್ಕೆ ಇವರು ಅವಕಾಶವನ್ನು ಕೊಡದಿದ್ದರೆ ಹೇಗೆ?

ಗೊಂದಲ

ಛೇರ್ಮನ್.— ಅವರು ಹೇಳುವುದನ್ನು ಕೇಳದೇ ನಾನು ಯಾವ ರೀತಿ ತೀರ್ಮಾನ ಮಾಡಬೇಕು ಹೇಳಿ?

ಶ್ರೀ ಜಿ. ನಾರಾಯಣಕುಮಾರ್.— ಪತ್ರಿಕೆಯಲ್ಲಿ ಬಂದಿರುವುದು ಇದಕ್ಕೆ ಸಂಬಂಧಪಟ್ಟದ್ದೋ ಅಥವಾ ಅಲ್ಲವೆ ಎಂಬುದನ್ನು ತೀರ್ಮಾನ ಮಾಡುವವರು ತಾವು. ಅವರಲ್ಲ.

ಛೇರ್ಮನ್.— ಮಾನ್ಯ ಹೆಮ್ಮಿಗೆಯವರೆ, ಪತ್ರಿಕೆಯಲ್ಲಿ ಬಂದಿರುವುದನ್ನು ತಾವು ಓದುವುದು ಬೇಡ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ವೇದಾಂತ ಹೆಮ್ಮಿಗೆ.— ಅವರು ಒಂದು ಟೆಲೆಕ್ಸ್ ಮೆಸೇಜನ್ನು ಕೇಂದ್ರ ಸರ್ಕಾರಕ್ಕೆ ಏನು ಕೊಟ್ಟಿದ್ದಾರೆಂದರೆ, ಈ ಸರ್ಕಾರದ ಹತೋಟಿಯಲ್ಲಿ ಪೋಲೀಸ್ ಇಲಾಖೆ ಇಲ್ಲ. ಮಂಗಳೂರಿನಲ್ಲಿ

ಜನರ ಹತೋಟಿ, ಶಾಂತಿ. ಮುಂತಾದ ವಿಷಯಗಳ ಬಗ್ಗೆ ಪೊಲಿಟಿಕಲ್ ಆಗಿ ಬಿಹೇವ್ ಮಾಡುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರದ ರಿಸರ್ವ್ ಪೋಲೀಸರನ್ನು ಕಳುಹಿಸಿ ಕೊಡಬೇಕೆಂದು ಆ ಐ.ಎ.ಎಸ್. ಅಧಿಕಾರಿ, ನಮ್ಮ ಸರ್ಕಾರದ ಸಂಬಳವನ್ನು ತೆಗೆದುಕೊಳ್ಳತಕ್ಕ ನೌಕರ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ. He has sent Telex massage to the Central Government against the democratic norms, against a democratically elected Government.

(*Interruption*)

ಛೇರ್ಮನ್.— ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ ಹೇಳಿ.

ಶ್ರೀ ವೇದಾಂತ ಹೆಮ್ಮಿಗೆ.— ಆದ್ದರಿಂದ ಈ ವಿಷಯವನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳ ತಕ್ಕದ್ದು ಸಾಧುವಲ್ಲವೆಂದು ಹೇಳಬಯಸುತ್ತೇನೆ. That man should be sent out of this place. An I.A.S. Officer has questioned the Validity of the Elected Government. ಈ ರೀತಿ ನಮ್ಮ ಸರ್ಕಾರದ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಟೆಲೆಕ್ಸ್ ಮೆಸೇಜ್ ಕೊಡುವುದಾದರೆ ಈ ಸರ್ಕಾರ ಉಳಿಯುವುದಿಲ್ಲ. He is questioning a democratically elected Government itself.

ಗೊಂದಲ

ಛೇರ್ಮನ್.— ತಾವು ಹೇಳುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಗೊಂದಲ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.— ಸ್ವಾಮಿ ಅಧ್ಯಕ್ಷರೇ, ತಾವು ಎದ್ದು ನಿಂತುಕೊಂಡಿದ್ದರೂ ಅವರು ಕೂತುಕೊಳ್ಳತಕ್ಕ ಸೌಜನ್ಯತೆಯನ್ನು ತೋರಿಸುತ್ತಿಲ್ಲ.

ಗೊಂದಲ

ಶ್ರೀ ವೇದಾಂತ ಹೆಮ್ಮಿಗೆ.— ಅವರು ಹೇಳುವುದನ್ನು ನಾನು ಕೇಳುತ್ತಿದ್ದೇನೆ.

ಛೇರ್ಮನ್.— ತಾವು ಹೇಳಿದ್ದರಲ್ಲಿ ಕ್ರಿಯಾಲೋಪ ಏನೂ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರಾದ ಮೊಯ್ಲಿಯವರು ತಮ್ಮ ಭಾಷಣವನ್ನು ಮುಂದುವರಿಸಬಹುದು. ದಯವಿಟ್ಟು ಚರ್ಚೆಯ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ, ವೃಥಾ ಕಾಲಹರಣ ಮಾಡುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ತಾವು ಎರಡನೇ ಸಾರಿ ಹೇಳುತ್ತಿದ್ದೀರಿ. ಅಲ್ಲಿ ಕೂತುಕೊಂಡು ಮಾತನಾಡುವುದಕ್ಕೆ ತಮಗೆ ಅಧಿಕಾರ ಇದೆ ಅದಕ್ಕೆ ನಾವು ತಲೆಬಾಗುತ್ತೇವೆ. ತಾವು ಎರಡು ಸಾರಿ ಬಹಳ ಸೂಕ್ಷ್ಮವಾಗಿ ಹೇಳಿದ್ದು ನಮಗೆ ಬಹಳ ನೋವಾಗಿದೆ. ವಿಷಯಕ್ಕೆ ಸೀಮಿತವಾಗಿ ಮಾತನಾಡಿ ಎಂದು ಹೇಳುತ್ತಿದ್ದೀರಿ. ಆಕ್ಷೇಪಣೆ ಎತ್ತಿದವರು ಅವರು. ಅವರ ಚರಿತ್ರೆ ಏನಿದೆ ಎಂದು ಹೇಳಿಲ್ಲ. ನಾನು ಹೊಗಳಿದ್ದೂ ಇಲ್ಲ, ತೆಗಳಿದ್ದೂ ಇಲ್ಲ. ಈ ವಿಚಾರಕ್ಕೆ ಬರಬಹುದು ಎಂದು ಊಹೆ ಮಾಡಿ ನನ್ನನ್ನು ತಡೆಯಲಿಕ್ಕೆ ಪ್ರಯತ್ನ ಮಾಡಿದ್ದು ಮಾನ್ಯ ಸಚಿವರು. ಎರಡನೆಯದಾಗಿ ಯಾವುದೇ ಕಾರಣ ಇಲ್ಲದೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೂ ಅವರೇ. ಆದರೆ ವಿಷಯಕ್ಕೆ ಸೀಮಿತವಾಗಿ ಮಾತನಾಡಿ ಎಂದು ತಾವು ನನಗೆ ಹೇಳುತ್ತಿದ್ದೀರಿ. ತಾವು ಹೇಳುವುದಕ್ಕೆ ತಮಗೆ ಅಧಿಕಾರ ಇದೆ. But, I have been seeing the procedure of this House. The Speaker is not present. The Deputy Speaker is not present Panel Chairmen are stting even at the close of the meeting. This is most un-precedented.

(*Interruption*)

SRI M. VEERAPPA MOILY.— We have to suffer this humiliation...

(*Interruption*)

SRI S. R. BOMMAI.— I rise to a point of Order.

(*Interruption*)

ಛೇರ್ಮನ್.— ಮಾನ್ಯ ಸಚಿವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸ್ವಾಮಿ ನನ್ನದೊಂದು ಕ್ರಿಯಾಲೋಪ. ಅವರು ಆರೀತಿ ಹೇಳಬಾರದು. ಸಭೆಯ ಕಾರ್ಯಕಲಾಪಗಳು ನಡೆಯುವಾಗ ಅಧ್ಯಕ್ಷ ಪೀಠದಲ್ಲಿ ಅಧ್ಯಕ್ಷರು ಇರಬಹುದು, ಉಪಾಧ್ಯಕ್ಷರು ಇರಬಹುದು, ಅಥವಾ ಛೇರ್ಮನ್‌ರವರು ಇರಬಹುದು, ಆದರೆ ಆ ಅಧ್ಯಕ್ಷ ಪೀಠದಲ್ಲಿ ಅಧ್ಯಕ್ಷರು ಕೂತಾಗ ಎಷ್ಟು ಗೌರವ ಇರುತ್ತದೋ ಅಷ್ಟೇ ಗೌರವ ಬೇರೆಯವರು ಯಾರೇ ಕೂತಿದ್ದರೂ ಇರುತ್ತದೆ. ಫ್ಲ್ಯಾಗ್ ಎಂಡ್ ದಿ ಡೇ ಛೇರ್ಮನ್‌ರವರು ಕೂತಿದ್ದಾರೆಂದು ಹೇಳಿದ್ದು ಈ ಪೀಠಕ್ಕೆ ಅಗೌರವ ಆಗುತ್ತದೆ. ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. ಅವಶ್ಯಕತೆ ಬಿದ್ದರೆ ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಬ್ರೀಚ್ ಆಫ್ ಪ್ರಿವಿಲೇಜ್ ಹೇಗೆ ಆಗುತ್ತದೆ? ಮೂವ್ ಮಾಡುವುದಾದರೆ ಮಾಡಿ ನೋಡೋಣ......

ಶ್ರೀ ಎಸ್.ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಮುಗಿಸಿಲ್ಲ. ಆ ಸ್ಥಾನದಲ್ಲಿ ಯಾರೇ ಕೂತಿದ್ದರೂ ಆ ಸ್ಥಾನಕ್ಕೆ ನಾವು ಗೌರವ ಕೊಡಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರು ಹದ್ದು ಮೀರಿ ಮಾತನಾಡಿದಂಥ ಮಾತುಗಳು......

ಶ್ರೀ ಎಂ. ವೀರಪ್ಪಮೊಯ್ಲಿ.—ಹದ್ದುಮೀರಿ ಮಾತನಾಡುತ್ತಿರುವವರು ನೀವು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮಾತನಾಡುತ್ತಿಲ್ಲ. ನಾನು ಹದ್ದನ್ನು ಇಟ್ಟುಕೊಂಡೇ ಮಾತನಾಡಿದ್ದೇನೆ. ನಾನು ಅನ್‌ಪಾರ್ಲಿಮೆಂಟರಿ ಪದವನ್ನು ಏನೂ ಉಪಯೋಗ ಮಾಡಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ನಾಲಿಗೆ ಬಿಗಿ ಹಿಡಿದು ಮಾತನಾಡಿ.

ಶ್ರೀ ಜಿ. ನಾರಾಯಣಕುಮಾರ್.—ನಾಲಿಗೆಯನ್ನು ಬಿಗಿ ಹಿಡಿದು ಮಾತನಾಡಿ ಎಂದರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ನನ್ನ ಬಗ್ಗೆ ಟೀಕೆ ಮಾಡಲಿ, ಸರ್ಕಾರದ ಬಗ್ಗೆ ಟೀಕೆ ಮಾಡಲಿ ಆದರೆ ಆ ಸ್ಥಾನದಲ್ಲಿ ಕೂತಿರತಕ್ಕವರು ಯಾವ ವ್ಯಕ್ತಿಯೇ ಇರಲಿ ಅವರಿಗೆ ಗೌರವವನ್ನು ಕೊಡಬೇಕು. ಛೇರ್ಮನ್‌ರವರ ಬಗ್ಗೆ ಆಕ್ಷೇಪವನ್ನು ಮಾಡಿದ್ದು ಸರಿಯಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಅವರಿಗೆ ಏನು ಮರ್ಯಾದೆ ಕೊಡಬೇಕೋ ಅದನ್ನು ಕೊಡುತ್ತಿದ್ದೇವೆ. ಆದರೆ ನಾನು ಕನ್‌ವೆನ್‌ಷನ್‌ನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ತಾವು ರಿಲೆವೆನ್ಸಿ ಬಗ್ಗೆ ಮಾತನಾಡಿದ್ದೀರಿ. ಇವತ್ತು ಚರ್ಚೆಗೆ ಇರತಕ್ಕ ವಿಚಾರ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟದ್ದಲ್ಲ. ಇವತ್ತು ಚರ್ಚೆಗೆ ಬಂದಿರುವ ಮುಖ್ಯ ವಿಚಾರ ಎಂದರೆ ಮಂಗಳೂರು ಬಂದರಿನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಮೇಲೆ, ಮಂಗಳೂರು ಪೋಲಿಸರು ಮಾಡಿದ atrocities on some of the officers belonging to the Union Gov rnment. ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಮಧ್ಯದಲ್ಲಿ ಏನೋ ನಡೆಯುತ್ತಿದೆ ಎಂದು ಹೇಳುವ ರೀತಿಯಲ್ಲಿ ಹೇಳಿದ್ದುದು ಸರಿಯಲ್ಲ. The subject before us is regarding the alleged atrocities by the Police on certain officers belonging to Port office. ಬಂದರಿನ ಅಧಿಕಾರಿಗಳ ಮೇಲೆ ರಾಜ್ಯದ ಕೆಲವು ಪೋಲೀಸ್ ಅಧಿಕಾರಿಗಳು ಅತ್ಯಾಚಾರ ಮಾಡಿದ್ದಾರೆ. ಎನ್ನುವ ಬಗ್ಗೆ ಅಷ್ಟೆ. ಇದನ್ನು ಪ್ರಸ್ತಾಪ ಮಾಡುವುದನ್ನು ಬಿಟ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಧ್ಯೆ ಏನೋ ನಡೆಯುತ್ತಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿ ಹಾಗೂ ಮಾನ್ಯ ಮೊಯ್ಲಿಯವರಲ್ಲಿ ನನ್ನ ಮನವಿ ಇಷ್ಟೆ. ವಿಷಯ ಬಹಳ ಗಂಭೀರವಾದುದು. ನನಗೆ ಎಲ್ಲರೂ ಗೊತ್ತಿರುವವರು. ನಾವು ಇನ್ನೂ ಆ ವಿಷಯದ ಬಗ್ಗೆ ಚರ್ಚೆಗೆ ಬಂದೇ ಇಲ್ಲ. ಇನ್ನೂ ಅದರ ಹಿನ್ನೆಲೆ ಏನು ಎಂಬುದನ್ನು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಮಧ್ಯೆ ತಲೆ ಹಾಕುವುದಾದರೆ ವಿಷಯದ ಗಂಭೀರತೆ ಹೋಗಿ ಈ ರೀತಿ ತಾಪತ್ರಯ ಬರುತ್ತದೆ. ಅವರು ಪೂರ್ತಿ ಮಾತನಾಡಲಿ. ಅನಂತರ ಅದಕ್ಕೆ ಉತ್ತರ ಕೊಡುವುದಕ್ಕೆ ತಮಗೆ ಅಧಿಕಾರ ಇದ್ದೇ ಇದೆ. ಆಗ ಉತ್ತರ ಕೊಡಿ.

ಇನ್ನೊಂದು ವಿಚಾರವನ್ನು ಹೇಳುವುದಾದರೆ ತಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ತಾವು ಅಧ್ಯಕ್ಷ ಪೀಠವನ್ನಲಂಕರಿಸಿದ್ದೀರಿ. ತಮಗೆ ಗೌರವವನ್ನು ಕೊಡಬೇಕಾದುದು ನಮ್ಮ ಪ್ರಥಮ ಕರ್ತವ್ಯ. ಆದರೆ ಒಂದು ಪ್ರಶ್ನೆ ಏನು ಬರುತ್ತದೆ ಎಂದರೆ, ನಾವು ಅನೇಕ ವರ್ಷಗಳಿಂದ ನೋಡುತ್ತಿದ್ದೇವೆ. ಈ ರೀತಿಯ ಜಟಿಲ ಸಮಸ್ಯೆಗಳು ಬಂದಾಗ, ತೊಡಕುಗಳು ಬಂದಾಗ ಅಧ್ಯಕ್ಷ ಪೀಠದಲ್ಲಿ ಅಧ್ಯಕ್ಷರು ಇರುತ್ತಾರೆ, ಇಲ್ಲವೇ ಉಪಾಧ್ಯಕ್ಷರು ಆದರೂ ಇರುತ್ತಾರೆ. ಆದರೆ ಅವರ ಮೈಗೆ ಹುಷಾರಿಲ್ಲ ಎಂದು ತಿಳಿದು ಬಂದಾಗ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇದು ತಮಗೂ ಗೊತ್ತಿದೆ. ಆದರೆ ಇದನ್ನು ಏತಕ್ಕೆ ದೊಡ್ಡದು ಮಾಡಬೇಕು.

ಛೇರ್ಮನ್.—ಈಗ ಆ ವಿಷಯ ಉದ್ಭವಿಸುವುದಿಲ್ಲ. ಯಾರೇ ಛೇರ್ಮನ್‌ರವರು ಅಧ್ಯಕ್ಷ ಪೀಠದಲ್ಲಿ ಕೂತಿದ್ದರೂ ಕೂಡ ಅಧ್ಯಕ್ಷರಿಗೆ ಏನು ಅಧಿಕಾರ ಇರುತ್ತದೋ ಆ ಎಲ್ಲ ಅಧಿಕಾರವೂ ಅಧ್ಯಕ್ಷ ಪೀಠದಲ್ಲಿ ಕೂತವರಿಗೆ ಪೂರ್ತಿಯಾಗಿ ಇರುತ್ತದೆ. ಆದ್ದರಿಂದ ಅಧ್ಯಕ್ಷರು ಕೂತಿಲ್ಲವೆಂದು ಹೇಳುವ ವಿಷಯವನ್ನು ನಾನು ಒಪ್ಪುವುದಿಲ್ಲ. ಯಾರೇ ಆಗಲಿ ಈ ಪೀಠದಲ್ಲಿ ಕುಳಿತಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಅಧ್ಯಕ್ಷರಿಗೆ ಏನು ಅರ್ಹತೆಯಿರುತ್ತದೋ ಅದೆಲ್ಲಾ ಅರ್ಹತೆಗಳು ಇರುತ್ತದೆ. ಅಧ್ಯಕ್ಷರು ಪೀಠವನ್ನು ಅಲಂಕರಿಸಿಲ್ಲವೆನ್ನುವ ಭಾವನೆಯನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಅದರ ಬಗ್ಗೆ ವಾದ ಏನು ಇಲ್ಲ. ಆದರೆ ಕೆಲವು ಸಂಪ್ರದಾಯಗಳ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡದೆ ಹೊರಗೆ ಪ್ರಸ್ತಾಪ ಮಾಡುವುದಕ್ಕೆ ಆಗುತ್ತದೆಯೇ. ನಾನು ಸುಮಾರು ೧೯೭೨ನೇ ಇಸವಿಯಿಂದ ಈ ಮನೆಯ ಸದಸ್ಯನಾಗಿರುತ್ತೇನೆ. At least the Speaker or the Deputy Speaker will be in the cha nbers and whenever there are some complicated questions, they do come here. ಏತಕ್ಕೆಂದರೆ ನಾವು ಇಲ್ಲಿ ಕುಳಿತುಕೊಂಡು ತಮಗೆ ಪ್ರಶ್ನೆ ಕೇಳುವುದಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ರಾಜ್ಯ ಮತ್ತು ಕೇಂದ್ರ ಎನ್ನುವುದು ಬಿಟ್ಟು ವಿಷಯದ ಬಗ್ಗೆ ಮಾತನಾಡಿದ್ದರೆ, ನಾವು ಅದನ್ನು ಬೇಡವೆಂದು ಹೇಳುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ,—ತಾವು ಕುಳಿತುಕೊಂಡು ವ್ಯವಹಾರ ಮಾಡುವಾಗ ಮತ್ತೆ ನಾವು ಕೊಡತಕ್ಕಂಥ ಗೌರವ ಎಷ್ಟರಮಟ್ಟಿಗೆ ಇರಬೇಕು ಎನ್ನುವ ಬಗ್ಗೆ ಕೆಲವು ಪರಂಪರೆಯ ವಿಚಾರದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ, it is question of certain norms which have been maintained. I am not just mentioning. Incidentally I mentioned here. This has been talked about even outside. Many important persons have also talked about. Some intellectuals have also talked about. ಅದನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. There are certain norms and conventions.

ಛೇರ್ಮನ್.—ವಿಷಯದ ಮೇಲೆ ಮಾತನಾಡಿ ಎಂದು ನಾನು ಮೊದಲೇ ಹೇಳಿದ್ದೇನೆ.

SRI M. VEERAPPA MOILY.—It is not personally against you. Please do not think like that. I have to explain my position. In fact, I have said this because one hour back, some intellectuals have also discussed this.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಸದಸ್ಯರು ಕನ್ನಡದಲ್ಲಿಯೇ ಮಾತನಾಡಿದರೆ ನಮಗೂ ಅರ್ಥವಾಗುತ್ತದೆ. ಅವರು ಇಂಗ್ಲೀಷ್‌ನಲ್ಲಿಯೇ ಏತಕ್ಕೆ ಮಾತನಾಡುತ್ತಾರೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆದ್ದರಿಂದ ತಾವು ವೈಯಕ್ತಿಕವಾಗಿ ಮಾತನಾಡಿದ್ದಾರೆಂದು ತಿಳಿದುಕೊಳ್ಳಬಾರದು. ಸದನದ ವಿಚಾರದಲ್ಲಿ ಒಂದು ಸಮಗ್ರವಾದ ದೃಷ್ಟಿಯನ್ನು ಇಟ್ಟುಕೊಂಡು ಮಾತನಾಡಬೇಕು.

ಈಗ ವಿಷಯ ಇಷ್ಟೇ, ತಮಗೆ ಅಪ್ಯಾಯಮಾನವಾಗಿ ಮಾತನಾಡಬೇಕೆಂಬುದು ತಮ್ಮ ಇಷ್ಟ. ಆದರೆ ಆರೀತಿ ಮಾತನಾಡಿದರೂ ತಾಪತ್ರಯ ಬರುತ್ತದೆ. ಏತಕ್ಕೆಂದರೆ ಏನೋ ಮಾತನಾಡಬೇಕೆಂದ ಬಂದಿದ್ದಾರೆಂದು ಭಾವಿಸಿಕೊಂಡರೆ ಅದು ಬಹಳ ತಪ್ಪಾಗುತ್ತದೆ. ಒಂದು ರಾಜ್ಯದ ಹಿತದೃಷ್ಟಿಯನ್ನು ಇಟ್ಟುಕೊಂಡು ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ. ಮಂಗಳೂರು ಬಂದರಿನಲ್ಲಿ ೨೪ನೇ ತಾರೀಖು ಆಗಸ್ಟ್ ಸುಮಾರು ಹತ್ತೂವರೆ ಗಂಟೆಯಲ್ಲಿ ಒಂದು ಘಟನೆ ನಡೆಯಿತು. ಈ ಘಟನೆಯ ಬಗ್ಗೆ ಇದ್ದ ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ, ಈ ಘಟನೆ ನಡೆದಾಗ ಕೆಲವು ಲಿಸ್ಟೆಡ್ ವರ್ಕ್‌ಸರ್ಸ್ ಒಳಗು ಕೆಲಸ ಮಾಡತಕ್ಕಂಥವರು ಮತ್ತು ಸೆಕೆಂಡ್ ಶಿಫ್ಟ್‌ನಲ್ಲಿ ರೆಗ್ಯುಲರ್ ಎಂಪ್ಲಾಯಿಸ್ ೪೩೩ ಮಂದಿ ರಾತ್ರಿ ಕೆಲಸ ಮಾಡುತ್ತಿದ್ದರು. ಅವರ ಜೊತೆಗೆ ಅಸಿಸ್ಟೆಂಟ್ ಟ್ರಾಫಿಕ್ ಇನ್‌ಸ್ಪೆಕ್ಟರ್, ವಾಚ್ ಅಂಡ್ ವಾರ್ಡ್ ಮಂಗಳೂರು ಬಂದರಿಗೆ ಸಂಭಂಧಪಟ್ಟವರು ಕೂಡ ಕೆಲಸ ಅಲ್ಲಿ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ನಡೆದಂಥ ಘಟನೆ ಇದು ಅದನ್ನು ತಾವು ವಿಚಾರ ಮಾಡಬೇಕು. ಗೃಹ ಸಚಿವರಾಗಿ ಘನವಾದ ವಿಚಾರವನ್ನು ಯಾವುದೇ ಪಕ್ಷದ ದೃಷ್ಟಿಯಿಂದ ವಿಚಾರಮಾಡದೆ ಒಂದು ಕಾರ್ಮಿಕ ಸಂಘದ ಮಧ್ಯದಲ್ಲಿ ಇರತಕ್ಕಂಥ ವೈಶಮ್ಯವನ್ನು ಸಮಾಧಾನದ ದೃಷ್ಟಿಯಿಂದ ವಿಚಾರ ಮಾಡಬೇಕಾಗಿತ್ತು. ಈ ಸಂದರ್ಭದಲ್ಲಿ ಪಣಂಬೂರ್ ಪೋಲೀಸ್ ಸ್ಟೇಷನ್‌ಗೆ ಸಂಬಂಧಪಟ್ಟ ಸಬ್‌ಇನ್ಸ್‌ಸ್ಪೆಕ್ಟರ್ ಅವರು ಪ್ರವೇಶ ಮಾಡಿದರು. ಅವರು ಪ್ರವೇಶ ಮಾಡುವಾಗ ಯೂನಿಫಾರಮ್ ಹಾಕದೆ ಒಮ್ಮೆ ಒಳಗೆ ಬಂದರು. ಅವರ ಜೊತೆಯಲ್ಲಿ ಒಬ್ಬ ವ್ಯಕ್ತಿ ಇದ್ದ. ಯೂನಿಯನ್ನಿನ ವೈಸ್ ಪ್ರೆಸಿಡೆಂಟ್ ಇದ್ದ. ಜನರಲ್ ವರ್ಕರ್ಸ್ ಉಪಾಧ್ಯಕ್ಷ ಸೀರಜ್ ಎಂದು ಹೇಳಿ, ಅವರು ಮತ್ತೆ ಸಬ್‌ಇನ್ಸ್‌ಸ್ಪೆಕ್ಟರ್ ಅಲ್ಲಿಗೆ ಬಂದರು. ಅವರು ಬಂದಮೇಲೆ ದಾಳಿ ಪ್ರಾರಂಭವಾಯಿತು. ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಮತ್ತಿತರ ಮೂರು ಜನರು ಏನು ಇದ್ದರು ಅವರ ಮೇಲೆ ಮತ್ತು ಕೆಲವು ಲಿಸ್ಟೆಡ್ ವರ್ಕರ್ಸ್‌ಮೇಲೆ ದಾಳಿ ಮಾಡಿದರು. ಆಮೇಲೆ ಪೋಲೀಸ್ ಫೋರ್ಸ್‌ನ್ನು ಒಳಗಡೆಗೆ ಕರೆಸಿದರು. ಡಿ. ವೈ. ಎಸ್. ಪಿ ಯವರು ಅನೇಕ ಲಿಸ್ಟೆಡ್ ವರ್ಕರ್ಸ್ ಮತ್ತು ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜನರ್ ಇವರೆಲ್ಲರನ್ನು ಹೊಡೆದರು. ಅವಾಚ್ಯ ಶಬ್ದಗಳಿಂದ ಬೈದರು. ಯಾವುದು ಸೆಕ್ಯೂರಿಟಿ ವಲಯವೆಂದು ನವ ಮಂಗಳೂರು ಹಾರ್‌ಬರ್‌ನಲ್ಲಿದೆ ಆ ಜಾಗದಲ್ಲಿ ಈರೀತಿಯಾದಂಥ ಘಟನೆ ನಡೆಯಿತು. ಅಲ್ಲಿಗೆ ಪೋಲೀಸ್ ಸಿಬ್ಬಂದಿಯನ್ನು ಕರೆದುಕೊಂಡು ಹೋಗಿದ್ದರು. ಹಲ್ಲೆಗೆ ಒಳಗಾದ ವಿನಯ್ ರವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಈ ಬಗ್ಗೆ ಕಂಪ್ಲೈಂಟ್ಸ್‌ನ್ನು ಪೋಲೀಸ್‌ನವರು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಏತಕ್ಕೆಂದರೆ ಅಲ್ಲಿ ಪಣಂಬೂರು ಪೋಲೀಸ್ ಸ್ಟೇಷನ್ನಿನವರು ದಾಳಿ ಮಾಡಿದ್ದಾರೆ. ಡಿ.ವೈ.ಎಸ್.ಪಿ. ಗೆ ಮತ್ತು ಎಸ್ ಪಿ. ಗೆ ೨೫ನೇ ತಾರೀಖು ಕಂಪ್ಲೈಂಟ್‌ನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಸ್ಪಷ್ಟವಾಗಿ ಕಾಣಿಸಿದ್ದಾರೆ.

"...... I was on duty in wharf area during the second shift. At about 22.30 hrs. the Sub-Inspector of Police, Panambur Police Station, Mr. Ramananda Rai and the Dy. S. P. Mr. Damodar Nadival along with a large number of police have entered through the Main gate to the wharf area. At that time myself and other Asst. Traffic Managers on duty namely S/Shri B. Akkari Shetty, Sundara Raman, Ranjan Kumar were standing in front of the Traffic building and discharging our duties. The said police officers and the police have approached us and abused us in filthy language.

The Sub-Inspector of Police, Mr. Ramananda Rai beat Mr. Ranjan Kumar with his lathy. The police have caught hold of my collar and dragged me upto ths police van. There I was beaten up and pushed into the van. Thereafter I was taken to th Panambur Police Station. There the police have made me to remove my dress and put me into the lock-up room. The police officials and the policemen were abusing me in filthy language till I was released at about 3-30 am on 25-8-1985.

When I was taken into the custody the Asst. Commandent, CISF Mr. Devaiah and Inspector of CISF Shri Das and some listed workers were also present.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಅಕ್ಕರಿಶೆಟ್ಟರೂ ಕೂಡ ಕಂಪ್ಲೈಂಟ್ ಕೊಟ್ಟಿದ್ದಾರೆ ಮತ್ತು ಶ್ರೀ ರಂಜನ್ ಕುಮಾರ್ ರವರೂ ಕಂಪ್ಲೈಂಟ್ ಕೊಟ್ಟಿದ್ದಾರೆ. ಇನ್ನು ಕೆಲವು ಲಿಸ್ಟೆಡ್ ವರ್ಕರ್ಸ್ ಕೂಡ ಅವರಿಗೆ ಯಾವರೀತಿ ಹೊಡೆದರು ಎನ್ನುವುದಕ್ಕೆ ಕಂಪ್ಲೈಂಟ್ ಕೊಟ್ಟಿದ್ದಾರೆ. ಪಣಂಬೂರು ಹಾರ್ಬರ್‌ಗೆ ಸಂಬಂಧಪಟ್ಟ ಈ ಒಂದು ಘಟನೆಯ ಬಗ್ಗೆ ಎಸ್. ಪಿ. ಕಸ್ತೂರಿ ರಂಗರಾಜು ಮತ್ತು ಡಿ.ವೈ.ಎಸ್.ಪಿ. ಗೂ ಕೂಡ ನವ ಮಂಗಳೂರು ಹಾರ್ಬರ್ ಚೇರ್‌ಮನ್ ಕಂಪ್ಲೈಂಟ್ ಕೊಟ್ಟಿದ್ದಾರೆ. ೨೫ನೇ ಆಗಸ್ಟ್ ೮೫ ರಂದು ಮತ್ತು ೨೬ನೇ ಆಗಸ್ಟ್ ೮೫ ರಂದು ಎಸ್. ಪಿ. ಅವರಿಗೆ ಬರೆದ ಕಾಗದದ ಕೆಲವು ವಿಚಾರಗಳನ್ನು ಮಾತ್ರ ಹೇಳುತ್ತೇನೆ.

"This is in continuation of our discussions on the morning of 25th August 1985 with regard to the action of some of your Officers viz., the Sub-Inspetor and the Deputy Superintendent of Police of Panambur Police Station, who have entered the wharf on the night of 24th at about 10-30 P.M without any provocation assaulting the Assistant Traffic Manager and pulled out the other two Assistant Traffice Managers and put them in the van arrested them and brought them to the Police Station and kept them under lock up and you have agreed after hearing from my Officers, you would also hear from your people on Sunday. I am thankful to you. However, you would agree after hearing them that it is a deliberate attempt on the part of Panambur Police Officers who have dragged the Officers and assaulted them and took them into custody while they were functioning on official duty inside the wharf area which is a security zone. It adpears, three more workers also were beaten by these Police Officers when they went to the canteen for taking coffee during the interval. This is a very serious situation which has demoralised the spirit of the entire Officers of the port fearing that the Police would enter and assault and take into custody the Officers without

any reason and unless you take some immediate steps, I am afraid the things will worsen and the moral of my Officers will be very much affected in di charging their duties. I hope, you would definitely appreciate my anxiety and you have also promised to take up the detailed investigation and enquiry on the happenings and take suitable actions against the erred offi ials. I would like to have a word in reply from you on this at your earliest........"

ಇದೆಲ್ಲಾ ಡಿಟೈಲ್ಸ್ ಹೇಳಿದ್ದಾರೆ. ಚೇರಮನ್‌ರು ಎಸ್ ಪಿ.ಯವರಿಗೆ, ಮತ್ತು ಜಿಲ್ಲಾಧಿಕಾರಿಯವರಿಗೆ ಕೂಡ ಸ್ಪಷ್ಟವಾಗಿ ತಿಳಿಸಿದ್ದಾರೆ. ಈಗ ಅಧ್ಯಕ್ಷರೇ, ನವಬಂದರಿನಲ್ಲಿ ಪೋಲೀಸರ ರಕ್ಷಣೆ ಇಲ್ಲ. ಅವರ ಹಸ್ತಕ್ಷೇಪ ಆಗುತ್ತಿದೆ ಎಂದು ಈ ಘಟನೆ ನಡೆದಮೇಲೆ ಇಲ್ಲ, ಅದಕ್ಕೂ ಹಿಂದೆ ಅಂದರೆ ೨೧-೬-೧೯೮೫ರಿಂದೇ ನವ ಮಂಗಳೂರು ಬಂದರಿನ ಚೇರಮನ್ನರು ಆಡಿಷನಲ್ ಸೆಕ್ರೆಟರಿ, ಶಿಪ್ಪಿಂಗ್ ಅಂಡ್ ಟ್ರಾನ್ಸ್‌ಪೋರ್ಟ್, ಡೆಲ್ಲಿ ಅವರಿಗೆ ಟೆಲೆಕ್ಸ್ ಮೆಸೇಜ್ ಅನ್ನು ಕೊಟ್ಟಿದ್ದಾರೆ. ಅಂದರೆ ಆ ಮಟ್ಟಕ್ಕೆ ಅವತ್ತು ಹೋಗತಕ್ಕಂಥ ಪ್ರಸಂಗ ಬಂದಿದೆ. ಸ್ಥಳೀಯ ಪೋಲೀಸ್ ಅಧಿಕಾರಿಗಳ ರಕ್ಷಣೆ ಇಲ್ಲದಾಗೇ ಈ ವಿಚಾರವನ್ನು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ತಿಳಿಸಿದಮೇಲೂ ಕೂಡ ಇದೆ, ಪರಿಸ್ಥಿತಿ ನಡೆದುಬಂದ ಬಳಿಕ ಅವರು ಈ ಟೆಲೆಕ್ಸ್ ಮೆಸೇಜ್‌ನ್ನು ಕೊಟ್ಟಿದ್ದಾರೆ.

"REFER MY CONFDL D O NO. CM/19/85 DT. 12TH JUNE AND my telephonic conversation on 29th Regarding the labour unrest and stoppage of work in new Mangalore Port Trust. The situation is still tense. Officials of the port and loyal workers including the cargo moving vehicles are not allowed inside by the splinter group. Police are silent spectators. The user agencies officials and the loyal workers are being threatened for their life, Lot of goonda element are surrounding the entrance where the tent for the hunger strike is situated. Creating panics in the minds of everybody with the result nobody wants to enter into port. As already indicated police could not prevent either the ghearoing of the officials of threatening or intimidation and they are simply watching such acts without giving any protection. It is therefore purely a politically motivated agitation and supported by the State Government and no action on our part could restore the normalcy. CISF are doing their best with the limited strength. Group Commandant CISF, Madras met me and discussed the situation. Bundobust inside the wharf is adequate but they are unable to stop intimidation and threatening. The pool management staff who were responsible for receiving incidents and booking the gangs were manhandled in the presence of the police on 17th evening with the result they refused to do duty out of fear for their life and they were also threatened in their houses. I have requested DIG, Mangalore to persuade the splinter group to remove the shed which was

put for the purpose of relay hunger strike and clear off the goondas in order to create fearless atmosphere for the loyal workers and other port users/officers to move in and around wharf to carry out the normal activities. Even after two days no action is taken and still the tense situation is going on. Request consider the movement of central reserve or request speak to the Chief Secretary of State so that they could take complete control of the law and order situation since the State Government is not in a position to create confidence among most of the section of the people for their safety from intimidation. Since pooling staff not reported for duty on 20th and 21st no gang booking was possible apart from the fact that as per their notice the user agency are not prepared to book the gangs from 21st for want of protection to all the concerned........"

ಹೀಗೆ ಟೆಲೆಕ್ಸ್ ಮೆಸೇಜ್ ಅನ್ನು ೨೧ನೇ ತಾರೀಖು, ಜೂನ್ ೮೫ರಂದು ಅವರು ಕೊಡಬೇಕಾದ ಪ್ರಸಂಗ ಬಂತು. There was no protection. The police were silent spectators. ಸೆಂಟ್ರಲ್ ರಿಸರ್ವ್ ಪೋಲೀಸ್ ಕಳಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾದ ಪರಿಸ್ಥಿತಿ ಒದಗಿಬಂದು. ಅಲ್ಲಿಯೂ ನವ ಮಂಗಳೂರು ಪೋರ್ಟ್ ಲೋಕಲ್ ಲಾರಿ ಓನರ್ಸ್ ಅಸೋಸಿಯೇಶನ್ ಅವರು ಈಗಾಗಲೇ ಅನೇಕ ಅರ್ಜಿಗಳನ್ನು ಪೋಲೀಸ್ ಅಧಿಕಾರಿಗಳಿಗೆ ಕೊಟ್ಟಿದ್ದಾರೆ.

"That the members of the H.M.S. are under the impression that if the lorries are allowed inside the port area, the transport business in the Port area could be smoothly carried on and that their strike would be total failure........."

"That the Counter Petitioner's Association has got a number of members besides they have got support of many goondas from Mangalore to elswhere, who could create troubles at any moment. Many of the members of the Counter-Petitioner's association have threatened lorry drivers and the members of the Petitioner's Association that they would set the lorries ablaze, if they make attempts to take the lorries inside Port area inspite of their protest..."

ಇಲ್ಲಿಯೂ ಕೂಡ ಅವರು ಸ್ಪಷ್ಟವಾಗಿ ಹೇಳಿದ್ದಾರೆ. They have been preventing the vehicles (lorries) belonging to the Petitioners' Association from entering into the Port area. ೧೨೦ ಮಂದಿ ಸದಸ್ಯರು ಇರತಕ್ಕಂಥ ನವ ಮಂಗಳೂರು ಪೋರ್ಟ್ ಲೋಕಲ್ ಲಾರಿ ಓನರ್ಸ್ ಅಸೋಸಿಯೇಶನ್‌ನವರು ಕೊಟ್ಟಂತಹ ಅರ್ಜಿ ಇದು. ಅಸೋಸಿಯೇಶನ್ನಿನವರು ದೂರನ್ನು ೮ನೇ ತಾರೀಕಿಗೆ ಕೊಟ್ಟಿದ್ದಾರೆ. ಅಧ್ಯಕ್ಷರೇ, ಐವತ್ತು ದಿವಸಗಳ ಕಾಲ ಯಾವುದೇ ಸರಕು ಸಾಗಾಣಿಕೆಗೆ ಸಾಧ್ಯವಾಗಿಲ್ಲ. ಈ ರೀತಿ ಹಿಂದೆಂದೂ ಆಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಪೋಲೀಸರು ರಕ್ಷಣೆ ಕೊಡದೇ ಇರತಕ್ಕದ್ದು. ಇಂಟಕ್ ಸಪೋರ್ಟ್ ಮಾಡಿದ ಯೂನಿಯನ್ ವೆರಿಫಿಕೇಶನ್ ಆಗಿ ನಾಲ್ಕು ವರ್ಷ ಆಯಿತು. ಈಗ ಯಾರಿಗೆ ಮೆಜಾರಿಟಿ ಇದೆ ಎನ್ನುವ ಬಗ್ಗೆ ಲೇಬರ್ ಮಿನಿಸ್ಟರ್ ಇದ್ದಾರೆ ಕಾನೂನು ಇದೆ. ಈ ಮಧ್ಯೆ ಕರ್ನಾಟಕ ಡಾಕ್ ವರ್ಕರ್ಸ್ ಯೂನಿಯನ್ ಅದು ಹೆಚ್.ಎಂ.ಎಸ್.ಗೆ ಅಫಿಲಿಯೇಟ್ ಆಗಿದೆ. ೫೦ ದಿವಸ ಕಾಲ ವ್ಯವಹಾರ ನಿಂತು ಹೋಯಿತು, ಇದಕ್ಕೆ ಕಾರಣ ಏನೆಂದರೆ ಎರಡು ಪಾಸು ಕೊಟ್ಟಿಲ್ಲ ಅಂತ ಅದು ಕೂಡ ಯಾರಿಗೆ ಪಾಸ್ ಕೊಡಬೇಕು?

ಇಂಟಕ್ ಲೀಡರ್ಸ್‌ಗೂ ಕೂಡ ಮೊನ್ನೆಮೊನ್ನೆ ಕೊಟ್ಟರು. ನಿಜವಾಗಿ ಲೀಗಲ್ ಆಗಿ ಕೊಡಲಿಕ್ಕೆ ಸಾಧ್ಯವಿಲ್ಲ. ಆದರೂ ಕೂಡ ವಿಸಿಟರ್ಸ್ ಪಾಸ್ ಕೊಟ್ಟಿದ್ದಾರೆ.

ಇಲ್ಲಿ ಯಾರಿಗೂ ಪಾಸ್ ವಿತಕ್ಕೆ ಕೊಡುವುದಿಲ್ಲವೆಂದರೆ, ಇದು ಸೆಕ್ಯೂರಿಟಿ ಜೋನ್ ಏರಿಯಾ ಆಗಿದೆ ಎಂದು. It is a smuggling prone area. ಆದ್ದರಿಂದ ಇಲ್ಲಿಗೆ ಸ್ಮಗ್ಲರ್ಸ್ ಯಾರಾದರೂ ಹೋಗಬಹುದೆಂದು ಯಾರಿಗೂ ಪಾಸ್ ಕೊಡುವುದಿಲ್ಲ. ಈ ಎಚ್. ಎಂ. ಎಸ್. ಯೂನಿಯನ್‌ಗೆ ಸೇರಿದಂಥ ಸಿರಾಜ್ ಎಂಬುವರು ಎಂತಹವರು ಎಂಬುದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಇವರ ಬಗ್ಗೆ ಎಂತಹ ರೆಕಾರ್ಡ್ ಇದೆ ಎಂಬುದನ್ನು ನಾನು ವಿವರಿಸಿ ಹೇಳಬೇಕಾಗಿಲ್ಲ ಗಳಲ್ಲಿ ಇವರನ್ನು ಕಾಫಿಪೋಸಾ ಅನ್ವಯ ಸ್ಥಾನಬದ್ಧತೆಯಲ್ಲಿರಿಸಲಾಗಿತ್ತು, ಇವರು ಕೆನರಾ ಡಾಕ್ ಯೂನಿಯನ್ ವರ್ಕರ್ಸ್ ಸಂಘದ ಉಪಾಧ್ಯಕ್ಷರಾಗಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ. – ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ, ಮಾನ್ಯ ಸದಸ್ಯರು ಮಾತನಾಡುವಾಗ ಈ ಸಭೆಯ ಸದಸ್ಯರಲ್ಲದವರ ಹೆಸರನ್ನು ಹೇಳಿದ್ದಾರೆ. ಹೀಗೆ ಇಲ್ಲಿ ಇಲ್ಲದವರ ಹೆಸರನ್ನು ಹೇಳಿ ಅವರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ ಎಂಬುದೇ ನನ್ನ ಕ್ರಿಯಾಲೋಪ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಇವರ ಬಗ್ಗೆ ಕರ್ನಾಟಕ ಸರ್ಕಾರದ ಬಳಿ ಇರುವಂತಹ ವರದಿ ಬಗ್ಗೆ ಹೇಳುತ್ತಿದ್ದೇನೆ. ಈ ಮನುಷ್ಯನ ನಡವಳಿಕೆ ಎಂಥಾದ್ದು ಎಂಬುದು ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಬಿ. ರಾಚಯ್ಯ.—ಅಲ್ಲಿ ಯಾ ಯಾರನ್ನು ಕಾಫಿಪೋಸಾ ಅನ್ವಯ ಅರೆಸ್ಟ್ ಮಾಡಲಾಗಿತ್ತು ಎಂಬುದರ ವಿವರಗಳನ್ನು ಸಹ ನಾನು ಬೇಕಾದರೆ ಕೊಡುತ್ತೇನೆ. ಇವರಿಗೆ ಇಷ್ಟವಿದ್ದರೆ ವಿವರಗಳನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಕೊಡಿ. ಇದಕ್ಕೆ ಅಗತ್ಯವಾಗಿರುವುದನ್ನೆಲ್ಲಾ ತಾವು ಇಲ್ಲಿ ಹೇಳಬೇಕಾಗುತ್ತದೆ. ಅದಕ್ಕಾಗಿಯೇ ನಾವು ಎಲ್ಲ ವಿವರಗಳನ್ನು ಕೊಡುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ನವ-ಮಂಗಳೂರು ಬಂದರು ಒಂದು ಒಳ್ಳೆಯ ಬಂದರಾಗಿದೆ. ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕಾದರೆ ನಾವು ಎಷ್ಟರಮಟ್ಟಿಗೆ ನಡೆದುಕೊಳ್ಳಬೇಕು ಎಂಬುದನ್ನು ತಾವು ಪೀಠಿಕಾ ರೂಪದಲ್ಲಿ ಈಗಾಗಲೇ ಹೇಳಿದ್ದೀರಿ. ಆದ್ದರಿಂದ ಈಗ ತಾವು ಅಲ್ಲಿನ ಪೋಲೀಸರು ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಮಾತನಾಡುವುದು ಒಳ್ಳೆಯದು ತಾವು ಯೂನಿಯನ್‌ಗಳ ಬಗ್ಗೆಯೇ ಹೆಚ್ಚು ಹೇಳುತ್ತಾ ಹೋಗುವುದು ಸರಿಯಲ್ಲ.

ಉಪಾಧ್ಯಕ್ಷರು.— ತಾವು ಈಗಾಗಲೇ ಒಂದು ಗಂಟೆ ಕಾಲ ಮಾತನಾಡಿದ್ದೀರಿ. ಆದರೆ ತಾವು ಘಟನೆಯ ಬಗ್ಗೆ ಮಾತ್ರ ಮಾತನಾಡುವುದು ಒಳ್ಳೆಯದು.

ಶ್ರೀ ಎಂ ವೀರಪ್ಪ ಮೊಯ್ಲಿ.—ಪೀಠಿಕಾ ರೂಪದಲ್ಲಿ ಹೇಳಲು ನನಗೆ ಸ್ವಲ್ಪ ಸಮಯಬೇಕಾಯಿತು. ನಾನು ಜಾಗ್ರತೆ ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸರ್ಕಾರದವರಿಗೆ ಇಷ್ಟೆಲ್ಲಾ ವಿಷಯಗಳು ಗೊತ್ತಿದೆ ಎಂದು ಮೊದಲೇ ಹೇಳಿದ್ದರೆ ನಾವು ಇಷ್ಟು ದೊಡ್ಡ ಚರ್ಚೆಯನ್ನು ಮಾಡುತ್ತಿರಲಿಲ್ಲ.

ಶ್ರೀ ಬಿ. ರಾಚಯ್ಯ.— ನಾನು ಒಂದು ಹೇಳಿಕೆ ಕೊಡುತ್ತೇನೆ, ನಂತರ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ ಎಂದು ಮೊದಲೇ ಹೇಳಿದ್ದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್. – ಒಂದೊಂದು ವಿಷಯಕ್ಕೂ ಇವರು ಕ್ರಿಯಾಲೋಪ ಎತ್ತಿದರೆ ನಾವು ಏನು ಮಾಡುವುದು ? ಅಂದರೆ ನಾವು ಚರ್ಚೆ ಮಾಡುವುದು ಬೇಡ ಎಂದು ಅರ್ಥವೇ ?

ಶ್ರೀ ಜಿ ನಾರಾಯಣಕುಮಾರ್.—ಗಂಭೀರವಾದ ಚರ್ಚೆಯಾಗಲೀ ಎಂದು ನಾವು ಹೇಳುತ್ತಿರುವುದು. ಆದರೆ ಈಗ ಗಂಭೀರವಾದಂಥ ಚರ್ಚೆಯಾಗುತ್ತಿಲ್ಲ.

ಶ್ರೀ ಬಿ. ರಾಚಯ್ಯ.—ಈ ಬಗ್ಗೆ ಹೇಳುವುದು ಬಹಳಷ್ಟು ಇದೆ ಎಂದು ತಿಳಿಸಿದಾಗ ನಾನು ಚರ್ಚೆ ನಡೆಯಲಿ ಎಂದು ಹೇಳಿದೆ, ತಾವು ಚರ್ಚೆ ಮಾಡಿ, ಅದಕ್ಕೆ ನಾನೇನೂ ಅಡ್ಡಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿ ಅನಾವಶ್ಯಕವಾಗಿ ಯಾರ ಹೆಸರನ್ನೂ ಹೇಳುವಂತಹ ಅಗತ್ಯ ನನಗಿಲ್ಲ. ನಾನು ಏತಕ್ಕಾಗಿ ಈ ಮನುಷ್ಯನ ಹೆಸರನ್ನು ಹೇಳಿದೆ ಎಂದರೆ, ಅಲ್ಲಿನ ಸಬ್-ಇನ್ಸ್‌ಪೆಕ್ಟರ್ ಯಾರಿದ್ದಾರೆ, ಅವರು ಈ ಒಂದು ಸುರಕ್ಷಿತ ಬಂದರಿನ ಪ್ರದೇಶಕ್ಕೆ ಬಂದಾಗ ಅವರ ಜೊತೆಯಲ್ಲಿ ಈ ಸಿರಾಜ್ ಎಂಬುವರು ಸಹ ಹೋಗಿದ್ದರು. ಆ ಒಂದು ಸಂದರ್ಭದಲ್ಲಿ ಅಲ್ಲಿದ್ದ ಕೆಲವು ಕಾರ್ಮಿಕರ ಮೇಲೆ ಮತ್ತು ಅಸಿಸ್ಟೆಂಟ್ ಟ್ರಾಫಿಕ್ ಮೇನೇಜರ್‌ಗಳ ಮೇಲೆ ಅವರು ಕೈ ಮಾಡಿದ್ದಾರೆ ಮತ್ತು ಹೊಡೆದಿದ್ದಾರೆ. ಇದರಲ್ಲಿ ಸಿರಾಜ್ ಅವರೂ ಸಹ ಭಾಗಿಯಾಗಿದ್ದಾರೆ. ಈ ಒಂದು ಪ್ರಕರಣದಲ್ಲಿ ಇವರು ಪಾರ್ಟಿಯಾಗಿರುವುದರಿಂದ ನಾನು ಹೇಳುತ್ತಿದ್ದೇನೆ. He is also a party. On 10-4-1984 he was arrested by the police and then handed over to Bunder Police Station. He is also involved in theft of cement in Kudremukh and there are criminal cases like 25/84 etc under IPC There is also a Photo exhibited at Bunder police Station. ಇಂತಹ ಒಬ್ಬ ಮನುಷ್ಯನ ಜೊತೆಯಲ್ಲಿ ಮಂಗಳೂರು ಬಂದರ್ ಪೋಲೀಸ್ ಸ್ಟೇಷನ್ನಿನ ಸಬ್-ಇನ್ಸ್‌ಪೆಕ್ಟರ್ ಅವರು ಮಧ್ಯರಾತ್ರಿಯಲ್ಲಿ ಈ ನವ-ಮಂಗಳೂರು ಬಂದರನ್ನು ಪ್ರವೇಶ ಮಾಡಿ ಅಲ್ಲಿದ್ದ ಕಾರ್ಮಿಕರನ್ನು ಹೊಡೆದಿದ್ದಾರೆ. ಇಂತಹ ಒಂದು ಕೃತ್ಯವನ್ನು ಪೋಲೀಸರ ಜೊತೆ ಸೇರಿಕೊಂಡು ಮಾಡಿದವರ ವಿಷಯವನ್ನು ಇಲ್ಲಿ ಹೇಳಬಾರದು ಎಂದರೆ ಹೇಗೆ ? ಮಧ್ಯರಾತ್ರಿಯಲ್ಲಿ ಪೋಲೀಸರ ಜೊತೆಯಲ್ಲಿ ಹೋಗಿ ಬಂದರಿನ ಚಟುವಟಿಕೆಗಳಿಗೆ ಆತಂಕ ತರುವುದಾದರೆ, ಇಂತಹವರ ಬಗ್ಗೆ ಏನು ಮಾಡಬೇಕು ಎಂಬುದನ್ನು ನಾವು ಗಂಭೀರತೆಯಿಂದ ವಿಚಾರ ಮಾಡಬೇಕಾಗುತ್ತದೆ. ಅನೇಕ ಕೇಸ್‌ಗಳಲ್ಲಿ ಭಾಗಿಯಾಗಿರುವಂತಹ ಈ ಮನುಷ್ಯ ಪೋಲೀಸರ ಜೊತೆ ಏತಕ್ಕೆ ಅಲ್ಲಿಗೆ ಹೋಗಬೇಕಾಗಿತ್ತು ? ಪೋಲೀಸರಾದರೂ ಕೂಡ ಈ ಮನುಷ್ಯನನ್ನು ಏತಕ್ಕೆ ಅಲ್ಲಿಗೆ ಕರೆದುಕೊಂಡು ಹೋಗಬೇಕಾಗಿತ್ತು ? ಈ ಮನುಷ್ಯನ ಮೇಲೆ ಕ್ರಿಮಿನಲ್ ಕೇಸ್ ಸಹ ಇದೆ. ಅದು ಇನ್ನೂ ತೀರ್ಮಾನವಾಗಿಲ್ಲ. Listed to workers in the police station to the custody of that person whose antecedents is not good. ಇಷ್ಟೊಂದು ಕೇಸ್‌ಗಳಲ್ಲಿ ಒಳಗಾಗಿರುವಂತಹ ಒಬ್ಬ ಮನುಷ್ಯ ಈಗ ಸಾಚಾ ಮನುಷ್ಯ ಆಗಿದ್ದಾನೆ ಎಂದು ಸರ್ಕಾರದವರು ಸರ್ಟಿಫಿಕೇಟ್ ಕೊಡುವುದಾದರೆ ಆ ಬಗ್ಗೆ ಒಂದು ಹೇಳಿಕೆ ಕೊಡಬೇಕು. ಮಾನ್ಯ ರಾಚಯ್ಯನವರು ಅಂತಹ ಒಂದು ಸರ್ಟಿಫಿಕೇಟ್‌ನ್ನು ಈ ಮನುಷ್ಯನ ಬಗ್ಗೆ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. I don't think now you can clear away all the charges. ಇಂತಹ ಒಬ್ಬ ಮನುಷ್ಯನ ಬಗ್ಗೆ ಮಾನ್ಯ ವೇದಾಂತ ಹೆಮ್ಮಿಗೆ ಅವರಿಗೆ ಮೊದಲೇ ಗೊತ್ತಿದ್ದರೆ ಅವರು ಕ್ರಿಯಾಲೋಪವನ್ನು ಎತ್ತುತ್ತಿರಲಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ತಾವು ತಮ್ಮ ಭಾಷಣದಲ್ಲಿ ಈ ಮೊದಲು ಹೇಳಿದಂಥ ಕೆಲವು ಮಾತನ್ನು ಬರೆದಿಟ್ಟುಕೊಂಡಿದ್ದೇನೆ. ಕೆಲವು ಸಂದರ್ಭಗಳಲ್ಲಿ ಅವರವರ ಪಕ್ಷಗಳನ್ನು ಮರೆತು ಒಗ್ಗಟ್ಟಿನಿಂದ ಎಲ್ಲರೂ ಹೋರಾಟ ಮಾಡಬೇಕಾಗುತ್ತದೆಂಬ ಮಾತನ್ನು ಸಹ ತಾವು ಹೇಳಿದ್ದೀರಿ. ಅದನ್ನು ಮೂಲಭೂತವಾಗಿ ನಾನು ಒಪ್ಪುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ವೇದಾಂತ ಹೆಮ್ಮಿಗೆ ಅವರು ಅವರ ಹೆಸರಿಗೆ ಅನ್ವಯವಾಗುವಂತಹ ರೀತಿಯಲ್ಲಿ ಒಳ್ಳೆಯ ಮುತ್ತಿನಂತಹ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗಿನ ಸಮಾಜಕ್ಕೆ ಅನ್ವಯವಾಗದಂಥ ವೇದಾಂತವನ್ನು ಅವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಘಟನೆ ವಿಚಾರದಲ್ಲಿ ಹೇಳಬೇಕಾದರೆ ಅವರು ಇನ್ನೂ ಚೇರ್ಮನ್ ಆಗಿದ್ದಾರೆ. ಅವರು ಎಲ್ಲಿಯವರೆಗೆ ಮಂಗಳೂರು ಬಂದರಿನ ಜವಾಬ್ದಾರಿ ಹೊತ್ತುಕೊಂಡಿರುತ್ತಾರೆ ಅಲ್ಲಿಯವರೆಗೆ ಅವರಿಗೆ ಕೇಳಿದಂತಹ ರಕ್ಷಣೆ ಕೊಡಬೇಕಾಗುತ್ತದೆ. ಮೀನಾಮೇಷ ಎಣಿಸುವುದಕ್ಕಾಗುವುದಿಲ್ಲ. ಅವರು ಚೇರ್ಮನ್ ಆಗಿದ್ದಾರೆ. ರಾಜ್ಯದ ಹಿತರಕ್ಷಣೆ ಮಾಡುವ ಹೊರೆ ಹೊತ್ತಿರುವ ಮುಖ್ಯಮಂತ್ರಿಗಳು ಅವರಿಗೆ ರಕ್ಷಣೆ ಎಲ್ಲಿ ಕೊಟ್ಟಿದ್ದಾರೆ ? ರಕ್ಷಣೆ ಕೊಟ್ಟಿದ್ದರೆ ಇದೆಲ್ಲ ಆಗುತ್ತಿರಲಿಲ್ಲ. 20 ದಿವಸಗಳ ಕಾಲ ಬಂದರು ಮುಚ್ಚಿದ್ದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ. Just because a union wants to get recognation illegally ಈ ರೀತಿ ಮಾಡಿದ್ದೀರಿ. ಕಾನೂನು ಪ್ರಕಾರ ಮಾತ್ರ ನೀವು ನಡೆದುಕೊಳ್ಳಬೇಕಾಗುತ್ತದೆ. ಇಲ್ಲದೆ ಇದ್ದರೆ

ರಕ್ಷಣೆ ಕೊಡಲು ನಿಮ್ಮಿಂದ ಹೇಗೆ ಸಾಧ್ಯ ? ಆ ಯೂನಿಯನ್‌ಗೆ ಪ್ರೊಟೆಕ್ಷನ್ ಕೊಡಲು ಯಾವ ಕ್ರಮ ಕೈಗೊಂಡಿದ್ದೀರಿ ? ಮತ್ತೊಂದು ಯೂನಿಯನ್‌ಗೆ ರೆಕಗ್ನಿಷನ್ ಕೊಡಲು ಎಸ್.ಪಿ.ಯವರು ಸಿದ್ಧರಿಲ್ಲ ಯಾರೂ ಸಿದ್ಧರಿಲ್ಲ. ಅನೇಕ ಜನ ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಇನ್ನೂ ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಷ್ಟಾದರೂ ಕೂಡ ಲಿಸ್ಟೆಡ್ ವರ್ಕರ್ಸ್ ಹ್ಯಾವ್ ಬೀನ್ ವರ್ಕಿಂಗ್ ಇನ್‌ಸೈಡ್.

ಎಸ್.ಪಿ. ಯವರು ೨೭ನೇ ತಾರೀಖು ಹೇಳಿಕೆ ಕೊಟ್ಟಿದ್ದಾರೆ. ಘಟನೆ ನಡೆದದ್ದು ೨೪ನೇ ತಾರೀಖು ರಾತ್ರಿ. ಉದಯವಾಣಿ ಪತ್ರಿಕೆಯಲ್ಲಿ ಇದರ ಬಗ್ಗೆ ದೀರ್ಘವಾಗಿ ಬಂದಿದೆ. ಗೃಹಸಚಿವರೂ ಕೂಡ ಕೌನ್ಸಿಲ್‌ನಲ್ಲಿ ಈ ವಿಚಾರ ಬಂದಾಗ Port authorities did not seek Policehelp' ಎಂದು ಹೇಳಿದ್ದಾರೆ, ಇದರ ಬಗ್ಗೆ ಟೆಲೆಕ್ಸ್ ಮೆಸೇಜ್ ಎಲ್ಲ ನಮ್ಮ ಹತ್ತಿರ ಇದೆ. ಹೊರಗಡೆ ಪ್ರೊಟೆಕ್ಷನ್ ಬೇಕು ಎಂದು ಕೇಳಿದಾಗ ಗೃಹ ಸಚಿವರು ಉತ್ತರ ಕೊಡಲಿಲ್ಲ.

The Minister said the Government ould not provide protection to the officials at the port. as we have to seek permission of the Port Authorities to enter their premises ಎಂದು. ಇದು ತಪ್ಪು ಕೊಟ್ಟಂತಹ ಹೇಳಿಕೆ. ಮುಖ್ಯಮಂತ್ರಿಗಳೇ ಆಗಿರಲಿ. ಈ ಚೇರ್ಮನ್ ಮೇಲೆ ಏನಾದರೂ ಒಂದು ಅಭಿಪ್ರಾಯ ತಾಳಿದ್ದರೆ ನಾನು ಅದನ್ನು ಒಪ್ಪುವುದಿಲ್ಲ. ಏತಕ್ಕೆಂದರೆ ಅಲ್ಲಿ ಒಬ್ಬ ಮಾಜಿ ಶಾಸಕರು ತಮ್ಮ ಪ್ರಭಾವವನ್ನು ಇದರ ಬಗ್ಗೆ ತಪ್ಪು ತಿಳಿದುಕೊಳ್ಳುವಂಥ ರೀತಿಯಲ್ಲಿ ಮಾಹಿತಿಯನ್ನು ಕೊಡುತ್ತಿದ್ದಾರೆ. ಇಲ್ಲದೇ ಇದ್ದರೆ ಮುಖ್ಯಮಂತ್ರಿಗಳು ಈ ರೀತಿ ವರ್ತನೆ ಮಾಡುತ್ತಿರಲಿಲ್ಲ. ರೈವಲ್ ಯೂನಿಯನ್ ಹೆಚ್.ಎಂ.ಎಸ್.ನವರ ದಾಕ್ಷಿಣ್ಯದ ಉರುಳಿನಲ್ಲಿ ಬಿದ್ದಿದ್ದಾರೆಂದು ನನಗನ್ನಿಸುತ್ತಿದೆ. I am not passing any aspersions.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವೂ ಯಾರ ದಾಕ್ಷಿಣ್ಯಕ್ಕೊಳಗಾಗಿ ಹೇಳುತ್ತಿದ್ದೀರಿ ಎಂಬುದು ನನಗೆ ಗೊತ್ತು. ಒಬ್ಬ ಯೂನಿಯನ್ ಅಧ್ಯಕ್ಷರ ಪರವಾಗಿ ನೀವು ಮಾತನಾಡುತ್ತಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಹೇಳಿದ್ದು ಸರಿ ನಾನು ಅನುಮಾನದಿಂದ ಹೇಳುತ್ತಿದ್ದದ್ದಕ್ಕೆ ಈಗ ಸ್ಪಷ್ಟ ಹೇಳಿಕೆ ಸಿಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಮಾಜಿ ಶಾಸಕರ ದಾಕ್ಷಿಣ್ಯದ ಉರುಳಿನಲ್ಲಿ ಬಿದ್ದಿದ್ದಾರೆಂದು ಇದರಿಂದ ನಮಗೆ ಗೊತ್ತಾಗುತ್ತದೆ.

> " On behalf of the Chief Minister, the Hon'ble Minister is speaking. I do not think the Hon'ble Chief Minister will subtract your view. "

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುತ್ತಿದ್ದೇನೆ ನೇರವಾಗಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಎರಡು ಕಾರ್ಮಿಕ ಸಂಘಗಳ ವಿಚಾರದಲ್ಲಿ ಯಾವುದೇ ಪಕ್ಷದ್ದು ಅದು ಇರಲಿ, ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಈಗಿರತಕ್ಕ ಒಂದು ವಿಚಾರ ಕೇಂದ್ರ ಸರ್ಕಾರದ ಒಂದು ಬಂದರು ಅಧಿಕಾರಿಗಳ ಮೇಲೆ ಪೋಲೀಸರು ಅತ್ಯಾಚಾರ ಮಾಡುತ್ತಿದ್ದಾರೆ, ಅವರಿಗೆ ರಕ್ಷಣೆ ಕೊಡುತ್ತಿಲ್ಲ ಎಂಬುದು. ಅದನ್ನು ಬಿಟ್ಟರೆ ನಾವು ಬೇರೆ ವಿಷಯಕ್ಕೆ ಹೋದರೆ ಅಂದರೆ ಜನತಾ ಪಕ್ಷದ ಪರವಾಗಿರತಕ್ಕ ಒಂದು ಕಾರ್ಮಿಕ ಸಂಘ ಇರಬಹುದು. ಕಾಂಗ್ರೆ. ಪರವಾಗಿರುವ ಕಾರ್ಮಿಕ ಸಂಘ ಇರಬಹುದು, ಈ ವಿಚಾರದಲ್ಲಿ ಮಾತನಾಡಬೇಕಾದರೆ...

ಶ್ರೀ ಎಂ. ಎಸ್. ಕೃಷ್ಣನ್.—ಇಬ್ಬರೂ ಸೇರಿ ನಮ್ಮ ಯೂನಿಯನ್ ಮೇಲೆ ಹೊಡೆಯುತ್ತಿದ್ದೀರಿ

ಶ್ರೀ ಎಸ್. ಆರ್. ಬೊಮ್ಮಾಯಿ.—ಇದುವರೆಗೂ ಮೊಯ್ಲಿಯವರು ಮಾತನಾಡಿದ ವಿಷಯ ಬಹಳ ಗಂಭೀರವಾಗಿತ್ತು. ಕೇಂದ್ರದ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕಾದ ರಾಜ್ಯ ಸರ್ಕಾರದ ಕರ್ತವ್ಯದ ವಿಷಯದಲ್ಲಿ ವಿವರಗಳನ್ನು ಚೆನ್ನಾಗಿ ಹೇಳಲಾಗಿದೆ. ಅಲ್ಲದೆ ಇನ್ನೂ ಹೇಳುತ್ತೇನೆ, ಮಧ್ಯದಲ್ಲಿ ಯಾರಾದರೂ ನನಗೆ ತೊಂದರೆ ಕೊಡದೇ ಇದ್ದರೆ...

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಕೇವಲ ಒಂದು ಗಂಟೆ ಮಾತ್ರ ಅವಕಾಶ ಇದೆ. ಮಾನ್ಯ ಸದಸ್ಯರು ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂತಹ ವಿಷಯಗಳ ಬಗ್ಗೆ ಒಂದು ದಿವಸ, ಎರಡು ದಿವಸ ತೆಗೆದುಕೊಂಡಂತಹ ಉದಾಹರಣೆಗಳು ಇವೆ. ೧೯೬೮ರಲ್ಲಿ ಈ ರೀತಿ ನಡೆದಿದೆ. ನಾವೇನೂ ಹೊಸದಾಗಿ ಪರಂಪರೆ ಹಾಕುತ್ತಾ ಇಲ್ಲ.

ಉಪಾಧ್ಯಕ್ಷರು.—ವಿಷಯದ ಇನ್‌ಸಿಡೆಂಟ್ ಬಗ್ಗೆ ಮಾತನಾಡಿ

ಶ್ರೀ ಎಂ. ವೀರಪ್ಪ ಮೊಯ್ಲಿ.—ಇನ್‌ಸಿಡೆಂಟ್ ಬಹಳ ಗಂಭೀರವಾಗಿರುವುದರಿಂದ ತಾವು ಅನುಮತಿ ಕೊಟ್ಟಿದ್ದೀರಿ. ನಾವು ಗಂಭೀರತೆಯನ್ನು ಕಡಿಮೆ ಮಾಡುವ ವಿಚಾರಕ್ಕೆ ಹೋಗುವುದಿಲ್ಲ. ಇಲ್ಲಿ ಮುಖ್ಯಮಂತ್ರಿಗಳು ಇಲ್ಲ. ರಾಜ್ಯದ ಸಂಸತ್ಸದಸ್ಯರ ಸಭೆಯಲ್ಲಿ ಮುಖ್ಯಮಂತ್ರಿಗಳು ಕೇಂದ್ರದ ಜೊತೆಯಲ್ಲಿ, ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಏನೇನು ಕಾಗದ ವ್ಯವಹಾರ ಮಾಡಿದ್ದಾರೆ ಅದನ್ನು ಪ್ರಿಂಟ್ ಮಾಡಿಸಿ ಮೂರ್ನಾಲ್ಕು ವಾಲ್ಯೂಂ ಮಾಡಿ ನಮ್ಮ ಸಂಸತ್ಸದಸ್ಯರಿಗೆ ಹಂಚಿದ್ದಾರೆ. ವಾಲ್ಯೂಂ ನಂ. ೪ರಲ್ಲಿ ಒಂದು ವಾಕ್ಯ ಇದೆ. ಅದನ್ನು ನಾನು ಓದುತ್ತೇನೆ. If he is convinced with the Chief of the Mangalore Port, he is entitled to have it. The Chief Minister of a state is responsible whatever happens in the State ಅದರ ಬಗ್ಗೆ ಆಕ್ಷೇಪ ಎತ್ತಿದರೆ it is right and I am not questioning the propriety of the Chief Minister for having written a complaint against the Chairman. It is not in keeping with the tradition of the Chief Minister Mr. Hegde to drop a letter like this :—

Dated July 22nd 1984.

"My dear Sri Reddy, I am receiving a number of letters from MLAs and others about the mal-administration of the Chairman. I have received a letter from an MLA..."

ನಾನೂ ಸಹ ಶಾಸಕ. ಆದರೆ ನಾನು ಕಾಗದ ಬರೆದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ನೀವು ಚೇರ್ಮನ್ ಪರವಾಗಿದ್ದೀರಿ. ನೀವೇತಕ್ಕೆ ಕಾಗದ ಬರೆಯುತ್ತೀರಿ ಹೇಳಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಯೂನಿಯನ್ ರೆಪ್ರೆಸೆಂಟೇಟೀವ್ಸ್, ಆದರೆ ರೆಕಾಗ್ನೈಸ್ಡ್ ಯೂನಿಯನ್ನಿನವರಲ್ಲ.

SRI M. S. KRISHNAN.—When you are saying all these things, naturally, ***ಅವರೂ ಹೇಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರೂ ಹೇಳಲಿ. ನಾನೂ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರೆದ ಕಾಂಟೆಕ್ಸ್ಟನ್ನು ನೋಡಬೇಕು. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. Let us not go into details. The letter was written by the Chief Minister on certain complaints and the incident has happened only last week. For that and this incident, there is no relevance.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅನೇಕ ವಿಚಾರಗಳನ್ನು ನಾನು ಬಹಳ ಗಂಭೀರವಾಗಿ ಪ್ರಸ್ತಾಪ ಮಾಡುತ್ತಾ ಇದ್ದರೆ—you are provoking me unnecessarily to speak certain things which are not necessary ಇದು ಏನು ಆಯಿತು ಎಂದರೆ, ಮಾನ್ಯ ಬೊಮ್ಮಾಯಿಯವರು ಇಲ್ಲಿ ಕುಳಿತುಕೊಂಡಿದ್ದರೆ ಅವರ ಆಕ್ಷೇಪಣೆ ಬರುತ್ತಿರಲಿಲ್ಲ. ಅವರು ಹೊರಗೆ

* Matter enpunged as ordered by the Chair.

ಹೋಗುತ್ತಾರೆ ಮತ್ತು ಅಧಿಕಾರಿಗಳಿಂದ ಸೂಚನೆ ತೆಗೆದುಕೊಂಡು ಮತ್ತೆ ಒಳಗೆ ಬರುತ್ತಾರೆ. You are taking instructions from the Officers.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೊರಗೆ ಹೋದದ್ದು ಕಾಫಿ ಕುಡಿಯಲಿಕ್ಕೆ. ಈ ತರಹ ಇನ್‌ಸ್ಟ್ರಕ್ಷನ್ಸ್ ನನಗೆ ಬೇಕಾಗಿಲ್ಲ. ಈ ಕಾರ್ಮಿಕ ಸಂಘಗಳ ಬಗ್ಗೆ ತಮ್ಮಷ್ಟೇ ನನಗೂ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಮುಗಿಸುತ್ತಿದ್ದೇನೆ. ಇದು ಒಂದು ವಾಕ್ಯದ ಪತ್ರ ಇದೆ...

> "...Number of letters from MLAs and others about maladministration of the Chairman of the New Mangalore Port.
>
> ...For your reference, I am enclosing a copy of the letter of Sri Lokkaiah Shetty, MLA. You may please take suitable action on this letter."

ಆಗ ವಸಂತ ಸಾಲಿಯಾನ ಎಂ.ಎಲ್.ಎ. ಆಗಿದ್ದರು. ಅವರು ಕಾಗದ ಬರೆದಿರಲಿಲ್ಲ. ಪ್ರತಾಪಚಂದ್ರಶೆಟ್ಟಿಯವರು ಕಾಗದ ಬರೆಯಲಿಲ್ಲ. ನಾನು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರಲಿಲ್ಲ. ಶ್ರೀ ಲೋಕಯ್ಯಶೆಟ್ಟರು ಮಾತ್ರ ಬರೆದಿದ್ದರು. Mr. Lokkaiah Shetty who is an interested party because he wanted the Chairman to illegally grant the recognition.

SRI S. R. BOMMAI.—I am sorry. I raise to a point of order.

(ಗೊಂದಲ. ಕಾಂಗ್ರೆಸ್ ಐ ಪಕ್ಷದ ಕೆಲವು ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ,

(ಗೊಂದಲ)

SRI M. MALLIKARJUNA KHARGE.—He is unnecessarily provoking.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯ್ಲಿಯವರು ವಿಷಯ ಪ್ರಸ್ತಾಪ ಮಾಡುವಾಗ ಮಂಗಳೂರು ಬಂದರಿನ ಅಧಿಕಾರಿಗಳ ಮೇಲೆ ನಡೆದ ಹಲ್ಲೆಯ ಬಗ್ಗೆ ಹೇಳುತ್ತಿದ್ದಾರೆ. ಇದರಲ್ಲಿ ಮುಖ್ಯಮಂತ್ರಿಗಳಿಗೆ ಶಾಸಕರಲ್ಲದವರು ಪತ್ರ ಬರೆದ ವಿಚಾರ ಮತ್ತು ಮುಖ್ಯಮಂತ್ರಿಗಳು ಅದರ ಮೇಲೆ ಕೇಂದ್ರಕ್ಕೆ ಬರೆದದ್ದು ಇಲ್ಲಿ ಸಂಬಂಧ ಇಲ್ಲದೇ ಇರತಕ್ಕಂಥಾದ್ದು...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯ್ಲಿಯವರು ಎತ್ತಿರುವ ವಿಷಯಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಆದ್ದರಿಂದ ಇದು ರೆಕಾರ್ಡ್‌ಗೆ ಹೋಗುವ ಅವಶ್ಯಕತೆ ಇಲ್ಲ. ಆದ್ದರಿಂದ...

ಉಪಾಧ್ಯಕ್ಷರು.—ಮೊಯ್ಲಿಯವರೇ, ಈ ಬಗ್ಗೆ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ ಮುಗಿಸುವುದು ಒಳ್ಳೆಯದೆಂದು ಕಾಣುತ್ತದೆ.

SRI M. VEERAPPA MOILY.—I am quite conscious of my limits. What I am concerned is, the Hon'ble Chief Minister seems to be giving... x x x

(*Interruption*)

SRI S.R. BOMMAI.—This cannot go on record.

(*Interruption*)

---

* Matter enpungeh as ordered by the Chair.

SRI M. VEERAPPA MOILY.—It is only to a limited extent, not to politicise the issue.

SRI S.R. BOMMAI.—It cannot go on record.

SRI M. VEERAPPA MOILY.—Is it unparliamentary? There is nothing unparliamentary about it. It appears as if the Hon'ble Chief Minister is xxx

(disturbance)

SRI S. R. BOMMAI.—I rise to a point of order. Can I say—It appears that Mr. Moily is trying to defend his party MLA who is a President of the Union & for that he is making all these things...

(Interruption)

ಉಪಾಧ್ಯಕ್ಷರು.—ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ. ನೋಡಿ, ೧೯೮೪ನೇ ಇಸವಿಯ ಪತ್ರವನ್ನು ಈ ಘಟನೆಗೆ ಸೇರಿಸಿದರೆ, ಅವರೂ ಕೂಡ ಉತ್ತರ ಹೇಳಬೇಕಾಗುತ್ತದೆ ಆದ್ದರಿಂದ ಘಟನೆಯ ಬಗ್ಗೆ ಮಾತ್ರ ದಯಮಾಡಿ ಹೇಳಿ ಮುಗಿಸಿ.

SRI S. R. BOMMAI.—He is going too much...

(ಗೊಂದಲ)

ಉಪಾಧ್ಯಕ್ಷರು.—ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

x x x x

(Not recorded as ordered by the Chair)

SRI S. R. BOMMAI.—I rise to a point of order. x x x ಅಂತ ಅವರು ಏನು ಹೇಳಿದ್ದಾರೆ...

(ಗೊಂದಲ)

ಉಪಾಧ್ಯಕ್ಷರು.—ಇರಿ, ಬೊಮ್ಮಾಯಿಯವರು ಏನು ಹೇಳುತ್ತಾರೋ ಕೇಳೋಣ. ಹೀಗೆ ಕೂಗಾಡಿದರೆ ಏನರ್ಥ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ...

ಶ್ರೀ ಕೆ. ಎಚ್. ಶ್ರೀನಿವಾಸ್. ನಾನೊಂದು ಮಾತು ಹೇಳಬೇಕು.

ಉಪಾಧ್ಯಕ್ಷರು.—ಶ್ರೀನಿವಾಸ್ ಏನು ಹೇಳಿ?

ಶ್ರೀ ಕೆ.ಎಚ್. ಶ್ರೀನಿವಾಸ್.—ಕ್ರಿಯಾಲೋಪದ ಬಗ್ಗೆ ಕೆಲವು ಮಾತನ್ನು ಹೇಳುವುದಕ್ಕೆ ತಾವುಗಳು ನಮಗೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಮಂತ್ರಿಗಳ ಮೇಲಾಗಲೀ, ಸರಕಾರದ ಮೇಲಾಗಲೀ, ಯಾವುದೇ ಆಪಾದನೆಗಳನ್ನು ನೇರವಾಗಿ ಮಾಡುವುದಕ್ಕೆ ಅವಕಾಶ ಇದೆ. ನಾವು ಆ ವಿಷಯದ ಮೇಲೆ ಮಾತನಾಡಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಉಪಾಧ್ಯಕ್ಷರೇ, ವಿಷಯದ ಗಂಭೀರತೆಯನ್ನು ಅರಿತು, ಕೆಲವೇ ಮಾತುಗಳನ್ನು ನಾನು ಹೇಳಲು ಬಯಸುತ್ತೇನೆ.

---

xxx Expunged as ordered by the Chair

ಉಪಾಧ್ಯಕ್ಷರು.—ಗೃಹಸಚಿವರು ಏನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ನಾನು ಕೇಳುತ್ತಾ ಇದ್ದೇನೆ. ಬಹುಶಃ ಇವೊತ್ತು ಮಾನ್ಯ ಮುಖ್ಯಮಂತ್ರಿಯವರ ಪತ್ರದ ವಿಚಾರದಲ್ಲಿ ಸಾಕಷ್ಟು ಮಾತುಗಳು ಇಲ್ಲಿ ಪ್ರಸ್ತಾಪ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದ ಕೆ. ಎಚ್. ಶ್ರೀನಿವಾಸ್‌ರವರು ಹೇಳಿದ ಹಾಗೆ, ನಾವುಗಳು ಇಲ್ಲಿ ಭಜನೆ ಮಾಡುವುದಕ್ಕೆ ಬಂದಿಲ್ಲ. ಕೇವಲ ಸರಕಾರವನ್ನು ಟೀಕೆ ಮಾಡುವುದಕ್ಕೆ ಹೋಗದೆ, ವಿಷಯಕ್ಕೆ ಸಂಬಂಧಪಟ್ಟಂತೆ ಟೀಕೆ ಮಾಡಬೇಕಾಗುತ್ತದೆ. ೧೯೮೪ರಲ್ಲಿ ಬರೆದಂತಹ ಪತ್ರವನ್ನು ಆಧಾರವಾಗಿ ಇಟ್ಟುಕೊಂಡು ಈ ರೀತಿಯಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಮೊನ್ನೆ ನಡೆದಂತಹ ಘಟನೆಗೂ ಈ ಪತ್ರಕ್ಕೂ ಸಂಬಂಧ ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈಗ ಯಾವುದಕ್ಕೆ, ಯಾವುದು ಸಂಬಂಧ ಇದೆ, ಅಥವಾ ಇಲ್ಲ ಎಂದು ಸ್ಪಷ್ಟೀಕರಣ ಕೊಡತಕ್ಕಂತಹ ಅಧಿಕಾರ ನಿಮಗೆ ಇದೆ. ತಾವು ಈ ವಿಷಯದಲ್ಲಿ ಒಂದು ಮಾತನ್ನು ಹೇಳಬಹುದು. ಸುಮ್ಮನೆ ನಾವು ಕೇಳಿದ್ದಕ್ಕೆ ಒಂದು ಸಮರ್ಪಕವಾದ ಉತ್ತರವನ್ನು ನಾವು ಪಡೆಯುವಲ್ಲಿ ಶಕ್ತರಾಗಲಿಲ್ಲ. ಸಾಧ್ಯವಾಗಲಿಲ್ಲ ಎಂದು ಹೇಳಿದರೆ ನಾವು ಇಲ್ಲಿ ಭಜನೆ ಮಾಡುವುದಕ್ಕೆ ಬಂದಿಲ್ಲ. ನಾವು ಬಂದಿರುವುದು ನಮ್ಮ ಕರ್ತವ್ಯ ನಿರ್ವಹಣೆಗೆ.

ಉಪಾಧ್ಯಕ್ಷರು.—ಅವರು ಮಾತನಾಡಿ ಮುಗಿಸಲಿ, ಆ ಮೇಲೆ ತಾವುಗಳು ಮಾತನಾಡಬಹುದು.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್ —ಈ ಚರ್ಚೆಗೆ ಪರಿಪೂರ್ಣವಾದ ಉತ್ತರ ನಮಗೆ ಬೇಕು. ನಾವು ಹೇಳಿದ್ದಕ್ಕೆ ಇಂಥದ್ದನ್ನು ಹೇಳಬೇಕು, ಇಂತಹದನ್ನು ಹೇಳಬಾರದು ಎಂದು ಅವರು ಹೇಳುವುದಾದರೆ, ನಾವು ಹೇಗೆ ಇಲ್ಲಿ ಕೆಲಸ ಮಾಡುವುದು ? ಸಂಸದೀಯ ಪದ್ಧತಿಗೆ ವಿರೋಧವಾಗಿರತಕ್ಕಂತಹ ಶಬ್ದಗಳನ್ನು ನಾವು ಬಳಸಿಲ್ಲ. ಅಲಿಗೇಶನ್ ವಿಚಾರದಲ್ಲಿ ಹೇಳಿದ್ದೀರಿ, ನಿಮ್ಮ ತಿಳುವಳಿಕೆಗೆ ನಮ್ಮ ಅಭ್ಯಂತರ ಏನೂ ಇಲ್ಲ. ಆದರೆ ಕಾಫಿಪೋಸದಲ್ಲಿ ನೀವು ಒಳಗೆ ಹಾಕಿದ್ದೀರಿ ಎಂದು ಹೇಳಿದರೆ ಅದು ಅಲಿಗೇಶನ್ ಆಗುವುದಿಲ್ಲ. ಅವನು ಸ್ಮಗ್ಲರ್ ಎಂದು ಹೇಳಿದರೆ ಅದು ಅಲಿಗೇಶನ್ ಆಗುತ್ತದೆ, ಆದುದರಿಂದ ನನಗೆ ಅರ್ಥವಾಗುತ್ತಾ ಇಲ್ಲ. ಉಪಾಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರು ಬಹಳ ತಾಳ್ಮೆ ಇರತಕ್ಕಂತಹ ವ್ಯಕ್ತಿ, ಅವರೆ ಇವೊತ್ತು ಯಾಕೋ ಒಂದೊಂದೇ ಬೆಕ್ಕನ್ನು ಚೀಲದಿಂದ ತಾವೇ ತಾವಾಗಿ ಹೊರಗೆ ಬಿಡುತ್ತಾ ಇದ್ದಾರೆ. ಅದರ ಅರ್ಥ ನನಗೆ ಆಗುತ್ತಾ ಇಲ್ಲ. ನಮ್ಮಲ್ಲಿ ತಪ್ಪು ಮಾತುಗಳು ಇದ್ದರೆ ನಾವು ಅದನ್ನು ಹೇಳಬಹುದು. ಅಂತಹ ಯಾವುದೇ ಶಬ್ದದ ಬಳಕೆ ಸದಸ್ಯರು ಹೇಳುತ್ತಾ ಇಲ್ಲ. ಆಯಾಮಗಳನ್ನು ಬಿಚ್ಚಿಡುವ ಹೊತ್ತಿನಲ್ಲಿ ನೀವು ಇಷ್ಟೇ ಹೇಳಬೇಕು, ಇಷ್ಟು ಹೇಳಬಾರದು ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ದಯವಿಟ್ಟು ಮಾತು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಿ. ಅನಾವಶ್ಯಕವಾಗಿ ನಾವು ಇದನ್ನು ಬೆಳೆಸತಕ್ಕಂಥಾದ್ದು ಒಳ್ಳೆಯದಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಆಯಾಮಗಳನ್ನು ಸೇರಿಸಿ ಮಾತನಾಡತಕ್ಕಂತಾದ್ದು ಅಂದರೆ, ಆ ವಿಷಯಕ್ಕೆ ಪೂರಕವಾಗಿರತಕ್ಕಂತಹ ಆಯಾಮಗಳನ್ನು ಸೇರಿಸಿದರೆ, ಸರಿಯಾಗುತ್ತದೆ. ಇಲ್ಲಿ ವಿಷಯ ಬಹಳ ಸೀಮಿತವಾಗಿರತಕ್ಕಂತಾದ್ದು. ಅಲ್ಲಿ ಪೋಲೀಸರು ಘಟನೆಗೆ ಸರಿಯಾಗಿ ತಮ್ಮ ಕಾರ್ಯ ನಿರ್ವಹಣೆ ಮಾಡಿದ್ದಾರೆಯೇ, ಸರಿಯಾಗಿ ನಡೆದುಕೊಂಡಿದ್ದಾರೆಯೇ ಇಲ್ಲವೇ ಎನ್ನತಕ್ಕಂತಾದ್ದರ ಬಗ್ಗೆ ಪ್ರಸ್ತಾಪ ಮಾಡಿರತಕ್ಕಂತಾದ್ದು ಇದೆ. ೧೯೮೪ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬರೆದಿರತಕ್ಕಂತಹ ಪತ್ರ, ಇಂತಹ ಒಂದು ಹಲ್ಲೆಗೆ ಪ್ರೇರಕ ಆಗಿರುವಂತಹ ರೀತಿಯಲ್ಲಿ ಪ್ರಾರಂಭಿಕ ಆಗಿರುತ್ತದೆ. ರಾಜಕಾರಣವನ್ನು ಬೆರಸಿರತಕ್ಕಂತಾದ್ದು ನಿರಾಧಾರ ಆಗಿರತಕ್ಕಂತಾದ್ದು ಅಲ್ಲ ಹಾಗೆಯೇ ನೈತಿಕವಾಗಿಯೂ ಕೂಡ ಸರಿಯಾದಂತಹ ಕ್ರಮವೂ ಅಲ್ಲ. ಇಲ್ಲಿ ನಾವು ಭಜನೆ ಮಾಡಲಿಕ್ಕೆ ಬಂದಿಲ್ಲ ಎನ್ನತಕ್ಕಂತಹ ಮಾತನ್ನು ಒಪ್ಪಿಕೊಳ್ಳತಕ್ಕಂತಾದ್ದು ಇದೆ. ಆದರೂ ಕೂಡಾ ಭಜನೆ ಗಾಂಜಾ ಸೇವಿತ ಭಜನೆ ಆಗಬಾರದು. ಭಕ್ತಿಪೂರ್ವಕ ಭಜನೆ ಆದರೆ ಅದು ಪರವಾಗಿಲ್ಲ. ಪೂರಕವಾದಂತಹ ಮಾತುಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕೇ ವಿನಹ ಬೇರೆ ಮಾತುಗಳನ್ನು ಅಲ್ಲ.

ಶ್ರೀ ಕೆ.ಎಚ್. ಶ್ರೀನಿವಾಸ್.—ನಾವೇನೂ ಗಾಂಜಾವನ್ನು ಸೇವಿಸಿಲ್ಲ. ಮಾನ್ಯ ಬೊಮ್ಮಾಯಿಯವರು ಈಗತಾನೇ ಹೊರಗೆ ಹೋಗಿ ಬಂದವರು...

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಮೊಯಿಲಿಯವರೇ, ನೀವು ಮಾತನಾಡಿ ಮುಗಿಸಿ

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಇಲ್ಲಿನ ಮಾತಿನ ಚಟುವಟಿಕೆಯನ್ನು ನೋಡಿದರೆ, ಗಾಂಜಾ ಸೇವಿಸಿ ಭಜನೆಯನ್ನು ಮಾಡಬೇಕಾಗಿತ್ತು ಎಂದು ಕಾಣುತ್ತದೆ. ನನಗೆ ಮತ್ತೊಂದು ಆಶ್ಚರ್ಯ ಏನೆಂದರೆ ಮಾನ್ಯ ಬೊಮ್ಮಾಯಿಯವರು ಬಹಳ ಗಂಭೀರವಾಗಿ ನಮ್ಮ ವಿಚಾರಗಳನ್ನು ಕೇಳುವವರು ಇವೊತ್ತು ಯಾಕೋ ಏನೋ ಹೀಗೆ ಮಾಡುತ್ತಿದ್ದಾರೆ. ಅವರು ಇವೊತ್ತು ರಿಪ್ಲೈ ಕೊಡುವ ಸ್ಪಿರಿಟ್‌ನಲ್ಲಿ ಬಂದಿದ್ದರು, ತಾವು ಪೋಸ್ಟ್‌ಪೋನ್ ಮಾಡಿದಿರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನನ್ನ ಕ್ರಿಯಾಲೋಪಕ್ಕೆ ಅಧ್ಯಕ್ಷರಿಂದ ಉತ್ತರ ಬರಲಿಲ್ಲ. ನಾನು ಅದನ್ನು ಕೇಳುತ್ತಾ ಇದ್ದೇನೆ. ಇದರಲ್ಲಿ ನೇರವಾಗಿ ಮುಖ್ಯಮಂತ್ರಿಗಳ ಪ್ರಚೋದನೆ ಎನ್ನುವ ಶಬ್ದ ಏನಿದೆ ಅದನ್ನು ಇಲ್ಲಿ...

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ ನಾನು ಹಾಗೆ ಹೇಳಲಿಲ್ಲ.

ಉಪಾಧ್ಯಕ್ಷರು.—ಅವರು ತಮ್ಮ ಮಾತನ್ನು ಮುಗಿಸಲಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದರ ಬಗ್ಗೆ ರೂಲಿಂಗ್‌ನ್ನು ತಾವು ಕೊಡಬೇಕು. ಶ್ರೀನಿವಾಸ್ ರವರು ಹೇಳಿದ್ದಾರೆ, ಅದಕ್ಕೆ ಹೇಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪ್ರಸ್ತಾಪವನ್ನು ಮಾಡಬಾರದು ಎಂದು ಆತಂಕವನ್ನು ಮಾಡಬೇಕೆಂದು ಇದ್ದರೆ ಹೇಳಿ ಬಿಡಿ.

(ಗೊಂದಲ)

ಶ್ರೀ ಬಿ. ರಾಚಯ್ಯ.—ತಾವುಗಳು ಚುಚ್ಚಿ ಮಾತನಾಡುವುದು ಬೇಡ. ಏನು ಬೇಕು ಅದನ್ನು ನೇರವಾಗಿ ಮಾತನಾಡಿ. ನಾವು ಕೇಳುತ್ತಾ ಕುಳಿತಿರುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೇರವಾಗಿ ಮಾತನಾಡಬಾರದು ಎಂದು ಹೇಳುತ್ತಾರಲ್ಲ ಅವರು.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಬ್ಬ ರಾಜ್ಯದ ಮುಖ್ಯಮಂತ್ರಿಗೆ, ಶಾಸಕರು, ಸಾರ್ವಜನಿಕರು ಒಬ್ಬ ಅಧಿಕಾರಿಯ ಮೇಲೆ ಕಂಪ್ಲೇಂಟ್ ಕೊಟ್ಟಾಗ, ಅದರ ಬಗ್ಗೆ ಕೇಂದ್ರ ಸರಕಾರಕ್ಕೆ ಬರೆಯುತಕ್ಕಂತಾದ್ದು ಮುಖ್ಯಮಂತ್ರಿಗಳ ಕರ್ತವ್ಯ, ಅವರ ಕರ್ತವ್ಯಪಾಲನೆ ಅವರು ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪರಿಶಿಷ್ಟ ಜಾತಿಗೆ ಸೇರಿದಂತಹ ಒಬ್ಬನು ಉನ್ನತ ಹುದ್ದೆಯಲ್ಲಿ ಇದ್ದರೆ ನಿಮ್ಮ ಕಣ್ಣು ಏಕೆ ಕೆಂಪಗಾಗುತ್ತದೆ ?

(ಗೊಂದಲ)

ಉಪಾಧ್ಯಕ್ಷರು.—ಮೊಯಿಲಿಯವರೇ, ಅವರು ಹೇಳುವುದನ್ನು ಹೇಳಿ ಬಿಡಲಿ, ಆಮೇಲೆ ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಆ ಅಧಿಕಾರಿ ಯಾವ ಜನಾಂಗಕ್ಕೆ ಸೇರಿದವರು ಎನ್ನುವಂತಾದ್ದು ಇಲ್ಲಿ ಅಪ್ರಕೃತ, ಅದು ಬೇಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಹೇಳುತ್ತಾ ಇರುವುದು, ಒಬ್ಬ ರಾಜ್ಯದ ಮುಖ್ಯಮಂತ್ರಿಗೆ ಶಾಸಕರಿಂದ, ಸಾರ್ವಜನಿಕರಿಂದ, ದೂರುಗಳು ಬಂದಮೇಲೆ ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವುದು ಮುಖ್ಯಮಂತ್ರಿಗಳ ಕರ್ತವ್ಯ ಎಂದು. ಮಾನ್ಯ ಸದಸ್ಯರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ಗಳಿಗಳಲ್ಲಿ ಬರೆದಿರುವಂತಹ ಒಂದು ಪತ್ರವನ್ನು ಇಟ್ಟುಕೊಂಡು ಇವತ್ತು ನಡೆದಿರತಕ್ಕಂಥ ಘಟನೆಗೆ ಲೀಡ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಈ ಘಟನೆಗೂ ಆ ಪತ್ರಕ್ಕೂ ಯಾವ ಸಂಬಂಧವಿಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ ಅವರು ಹೇಳಿದಂತಹ ವಿಷಯ ಕಡತಕ್ಕೆ ಹೋಗಿದೆ. ಅದು ಅನಾವಶ್ಯಕ. ಆ ವಿಷಯವನ್ನು ಕಡತದಿಂದ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳು ಹೇಳಿದ್ದಕ್ಕೆ ನಾನು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರು ಬಹಳ ಹಿರಿಯ ಸಚಿವರು, ಅವರು ಅನಾವಶ್ಯಕವಾಗಿ ಇವತ್ತು ಆಕ್ಷೇಪಣೆ ಎತ್ತುತ್ತಿದ್ದಾರೆ. ಏತಕ್ಕೋ ನನಗೆ ಅರ್ಥವಾಗುತ್ತಿಲ್ಲ. ಅವರು ಸಹ ಈ ಕಡೆ ಕುಳಿತುಕೊಂಡು ಕೆಲಸ ಮಾಡಿದ್ದಾರೆ. ಏಕೋ ಇವತ್ತು ಈ ರೀತಿ ಮಾಡುತ್ತಿದ್ದಾರೆ......

ಶ್ರೀ ಎಸ್.ಆರ್, ಬೊಮ್ಮಾಯಿ.—ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಲೀಡ್‌ಕೊಟ್ಟು ಕೊಂಡೊಯ್ದಿದ್ದಾರೆ ಎಂದು ಹೇಳಿದ್ದಾರೆ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳ ಕುಳಿತುಕೊಂಡಿರುವ ಕುರ್ಚಿಯಲ್ಲಿ ಸ್ಪ್ರಿಂಗ್ ಏನಾದರೂ ಇದೆಯೋ ಏನೋ......

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಘಟನೆಗೆ ಸಂಬಂಧಪಟ್ಟಂತೆ ಬೇಕಾದರೆ ಒಂದು ಗಂಟೆ ಮಾತನಾಡಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಅನಾವಶ್ಯಕ ವಿಷಯಗಳು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. It is a serious charge he is trying to make against the Hon'ble Chief Minister.

SRI M. VEERAPPA MOILY.—Is he above every one ? Are there any immunities to the Hon'ble Chief Minister in the House ? Are there any immunities provided to him in the Constitution ? Are there any rules that the Chief Minister should be criticised in the manner Treasury Bench Wants ?

SRI S.R. BOMMAI.—It is most irrelevant.

SRI M. VEERAPPA MOILY.—Please don't be over loyal to the Chief Minister.

SRI S.R. BOMMAI.—You are going too far to defend your party Legislator who is......

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳನ್ನು ಡಿಫೆಂಡ್ ಮಾಡಿಕೊಳ್ಳುವುದು ಬೇಡ...

ಉಪಾಧ್ಯಕ್ಷರು.—ಮಾನ್ಯ ವೀರಪ್ಪಮೊಯ್ಲಿಯವರೇ ತಾವು ವಿಷಯದ ಬಗ್ಗೆ ಮಾತ್ರ ಮಾತನಾಡಿ ವಿಷಯ ಬಿಟ್ಟು ಬೇರೆ ವಿಷಯಕ್ಕೆ ಹೋಗುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಉಪಾಧ್ಯಕ್ಷರೇ, ನಾನು ವಿಷಯ ಬಿಟ್ಟು ಬೇರೆ ಯಾವ ವಿಷಯವನ್ನು ಮಾತನಾಡುತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ,—ಮಾನ್ಯ ಅಧ್ಯಕ್ಷರೇ...

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಆಮೇಲೆ ಉತ್ತರ ಹೇಳಿದರೆ ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ —ಮಾನ್ಯ ಅಧ್ಯಕ್ಷರೇ, ಈಗ ನಾನು ಏನು ಹೇಳುತ್ತಿದ್ದೆ. ಮಾಜಿ ಶಾಸಕರೊಬ್ಬರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು. ಆ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರ ಬರೆದು ಅದನ್ನು ಪೋಸ್ಟ್ ಆಫೀಸಿನಲ್ಲಿ ಅಂಚೆ ಲಕೋಟೆಯನ್ನು ಫಾರ್ವರ್ಡ್ ಮಾಡುವ ರೀತಿಯಲ್ಲಿ ಫಾರ್ವರ್ಡ್ ಮಾಡಿದ್ದಾರೆ ಎನ್ನುವ ಭಾವನೆ ಬರುತ್ತದೆ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದೆ. With greatest restraint I used the word. This gives an impression that he has given a lead to the whole distrubance, I used with all restraint the words. ಇದು ನೇರವಾಗಿ ಏನೂ ಇಲ್ಲ. ನೇರವಾಗಿ ಹೇಳಬೇಕೆನು ? ಬಹುಶಃ ಮಾನ್ಯ ಮಂತ್ರಿಗಳು ನನ್ನನ್ನು ಕೆಣಕುತ್ತಿದ್ದಾರೆ. You want me to do that directly ?

SRI S.R. BOMMAI.—If you want you tell.

SRI M. VEERAPPA MOILY.—Sir, he wants me to directly charge the Hon. Chief Minister. In the process of defending the Hon. Chief Minister, the Hon. Minister for Revenue Sri S.R. Bommai is provoking me to directly charge the Chief Minister. The Hon. Minister for Revenue is doing a greater disservice to the Hon. Chief Minister.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮೊಯ್ಲಿಯವರೇ ನನಗೆ ಗೊತ್ತಿದೆ. ನೀವು ಈಗ ಯಾರನ್ನು ಡಿಫೆಂಡ್ ಮಾಡುವುದಕ್ಕೆ ಹೊರಟಿದ್ದೀರಿ ಅವರು ಈಗ ನಿಮ್ಮ ಜೊತೆಯಲ್ಲಿ ಇಲ್ಲ ಅವರನ್ನು ಈಗ ಇಲ್ಲಿ ಡಿಫೆಂಡ್ ಮಾಡಿಕೊಂಡು ನಿಮ್ಮ ಗುಂಪಿಗೆ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಇದು.

(ಗೊಂದಲ)

SRI M. VEERAPPA MOILY.—The mood of our Hon. Revenue Minister has come down. ನಮ್ಮ ಪಕ್ಷದಲ್ಲಿ ಕಾಂಗ್ರೆಸ್ ಪಕ್ಷ ಒಂದೇ ಒಂದು ಇರುವುದು. ಬೇರೆ ಬೇರೆ ಗುಂಪುಗಳು ಇಲ್ಲ. ಆ ಗುಂಪುಗಳ ವಿಚಾರ ಈಗ ಬೇಡ. Why are you playing a new role of defending the Hon. Chief Minister.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ಗುಂಪನ್ನು ಬಲಪಡಿಸಿಕೊಳ್ಳಲು ನೀವು ಇಲ್ಲಿ ಪ್ರಯತ್ನಪಟ್ಟು ಅಫಿಡವಿಟ್ ಫೈಲ್ ಮಾಡುತ್ತಿದ್ದೀರಿ. ಅದು ಏನೇ ಆಗಲೀ ನಾನು ನಿಮ್ಮನ್ನು ಅಪ್ರಿಷಿಯೇಟ್ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಏನೇ ಮಾಡಿದರೂ ಕೂಡ ಕೊನೆಗೆ ಜಯಶೀಲರಾಗುವುದು ಮಾನ್ಯ ದೇವೇಗೌಡರೇ...

ಶ್ರೀ ಎಸ್.ಆರ್. ಬೊಮ್ಮಾಯಿ.—ಪಾಪ ಮಾನ್ಯ ವೀರಪ್ಪ ಮೊಯ್ಲಿಯವರಿಗೆ ನಿರಾಸೆಯಾಗಿದೆ ವಿರೋಧಪಕ್ಷದ ನಾಯಕರ ಸ್ಥಾನ ಮಾನ್ಯ ಬಂಗಾರಪ್ಪನವರಿಗೆ ಹೋಯಿತು ಎಂದು. ಆ ಮಾತನ್ನು ತಾವು ನನಗೆ ಹೇಳುತ್ತಿದ್ದೀರಿ ಅಷ್ಟೇ!

ಉಪಾಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರೇ ೫ ನಿಮಿಷದಲ್ಲಿ ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ಬೇರೆ ವಿಷಯಗಳಿಗೆ ನಾನು ಹೋಗುತ್ತಿಲ್ಲ. ನಾನು ೧೯೮೪ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರೆದಿರುವ ಪತ್ರದ ವಿಷಯ ಇಲ್ಲಿಗೆ ಬಿಟ್ಟು ದಿನಾಂಕ ೨೯–೮–೧೯೮೫ರಂದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವಂತಾದ್ದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ, The subject is as fresh as this.

> "The Chief Minister also brought to the Prime Minister's notice that the chairman of the Mangalore Port Trust has over-stayed there for 6 years now. He was a Shipping Ministry employee and there were innumerable complaints against him. However, not only had he not been changed, but attempts were being made to get him permanently appointed as Chairman of the New Mangalore Port Trust."

It is a continuous thing as far as the campaign against the Chairman of the Mangalore Port Trust is concerned and the Hon. Chief Minister is the Principal accused. ನಿನ್ನೆ ಬಂದಿರತಕ್ಕಂಥ ವಿಷಯ ಇದು. ೧೯೮೪ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರೆದಿರುವಂತಹ ಪತ್ರದ ವಿಷಯವಲ್ಲ, on the basis of this, what is wrong......

ಶ್ರೀ ಎಸ್.ಆರ್ ಬೊಮ್ಮಾಯಿ.—ಅವರು ಒಬ್ಬ ಕೇಂದ್ರ ಸರ್ಕಾರದ ಅಧಿಕಾರಿ. ಅವರಮೇಲೆ ಸಿ.ಬಿ.ಐ. ಎನ್‌ಕ್ವೈಯರಿ ಇದೆ. ಅವರು ನಮ್ಮ ರಾಜ್ಯದವರಲ್ಲ. ನಮ್ಮ ರಾಜ್ಯದ ಅಧಿಕಾರಿಗಳನ್ನು ನೇಮಿಸಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಪತ್ರ ಬರೆದರೆ ತಪ್ಪೇನಿದೆ? ಆ ಅಧಿಕಾರಿ ತಪ್ಪು ಮಾಡಿದ್ದಾನೆ. Whether we are discussing about the Chairman of the Mangalore Port Trust or the Incident that has happened ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಇಬ್ಬರು ಒಂದೇ ಸಾರಿ ಮಾತನಾಡುವುದಕ್ಕೆ ಎಲ್ಲಿ ಅವಕಾಶ ಇದೆ ? ಆ ರೀತಿಯಲ್ಲಿ ಮಾತನಾಡುವುದಾದರೆ ನಡೆಯಲಿ ಮಾತು. ಇದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಸನ್ಮಾನ್ಯ ಅಧ್ಯಕ್ಷರೇ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ ನನ್ನ ಕಳಕಳಿಯ ಮನವಿ ಏನೆಂದರೆ ಇದರಲ್ಲಿ ಯಾರೂ ರಾಜಕೀಯ ಸೇರಿಸುವುದು ಬೇಡ......

(ಗೊಂದಲ)

ಶ್ರೀ ಬಿ. ಎ. ಉಮರಬ್ಬ.—ಕಂಬಾಯ ಮಂತ್ರಿಯವರಿಗೆ ವ್ಯಾಯಾಮ ಮಾಡುವ ಅಭ್ಯಾಸ ಇದೆಯೋ ? ಪ್ರತಿಸಲ ಎದ್ದು ಎದ್ದು ಕೂಡುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದು ಇಷ್ಟೆ. ಚೀಫ್ ಮಿನಿಸ್ಟರ್ ಪ್ರೈಮ್ ಮಿನಿಸ್ಟರ್‌ಗೆ ಪತ್ರ ಬರೆದಿದ್ದಾರೆ. ಆ ಪತ್ರದ ವಿಚಾರವಾಗಿ ಗಂಭೀರವಾಗಿ ಚರ್ಚೆ ಮಾಡುವುದಿದ್ದರೆ ಮಾಡಲಿ. ಅದನ್ನು ಲಘುವಾಗಿ ತೆಗೆದುಕೊಳ್ಳುತ್ತಾರೆ ಚೀಫ್ ಮಿನಿಸ್ಟರ್ ಪ್ರೈಮ್ ಮಿನಿಸ್ಟರ್ ಜವಾಬ್ದಾರಿಯಿಂದ ಬರೆದಿದ್ದಾರೆ. ಅದನ್ನು ಅಷ್ಟು ಲೈಟಾಗಿ ತೆಗೆದುಕೊಳ್ಳುವುದು ಬೇಡ.

ಉಪಾಧ್ಯಕ್ಷರು.—ಘಟನೆ ಬಗ್ಗೆ ಮಾತನಾಡಿ ಮುಗಿಸಿ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ಹತ್ತಿರ ನನ್ನ ಕಳಕಳಿಯ ಪ್ರಾಮಾಣಿಕವಾದ ವಿನಂತಿ ಏನೆಂದರೆ ಇಲ್ಲಿ ಒಬ್ಬ ಚೇರ್ಮನ್‌ಗೆ ರಕ್ಷಣೆ ಕೊಡತಕ್ಕಂಥ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಡಿ. You will have to protect this property ಇದನ್ನು ತಾವು ರಕ್ಷಣೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಇದನ್ನು ಹೇಳಿದೆ. It will become all the more relevant ಏತಕ್ಕೆಂದರೆ ಒಬ್ಬ ಚೇರ್ಮನ್ ಸರಿಯಿಲ್ಲ ಯೂನಿಯನ್ ಸರಿಯಿಲ್ಲ ಎಂದು ಹೇಳಿ ಕೇಂದ್ರದ ಒಂದು ಪ್ರಮುಖವಾದಂತಹ ಬಾಬತ್ತು, ಉಳಿಸಿಕೊಳ್ಳಬೇಕಾದಂಥ ಒಂದು ಹಾರ್ಬರ್‌ನ ಕೆಲಸ ಸ್ಥಗಿತ ಆಗಬಾರದು. ಅಲ್ಲಿ ಒಳಗೆ ಹೋಗಿ ಪೋಲೀಸರು ನುಗ್ಗಿ ಹೊಡೆದಾಡತಕ್ಕ ಪ್ರಯತ್ನ ಆಗಿದೆ. ಏತಕ್ಕೆಂದು ಹೇಳಿದರೆ You may not have faith in that Chairman. ಆದರೆ ಇವತ್ತು ೧೦–೧೫ ಮಂದಿ ಕಂಪ್ಲೈಂಟ್ ಕೊಟ್ಟಿದ್ದಾರೆ. Warflood ರೀತಿ ಆಗಿದೆ. ಚೇರ್ಮನ್, ಎಸ್.ಪಿ. ಹತ್ತಿರ ಡಿಸ್ಕಸ್ ಮಾಡಿರುತ್ತಾರೆ. ಡಿ.ಸಿ. ಹತ್ತಿರ ಡಿಸ್ಕಸ್ ಮಾಡಿರುತ್ತಾರೆ. ಆದರೆ ಯಾರೂ ರಕ್ಷಣೆಯನ್ನು ಕೊಡದೆ ಇದ್ದಂಥ ಗಂಭೀರ ಸಂದರ್ಭ ಇಲ್ಲಿ ಉದ್ಭವವಾಗಿದೆ. ನ್ಯೂ ಮಂಗಳೂರು ಹಾರ್ಬರ್‌ನ್ನು ನೋಡತಕ್ಕಂಥ ದೃಷ್ಟಿಬದಲಾಗಬೇಕು Don't look into this port through Chairman, look at the port as a person. which is a pride of Karnataka. This Mangalore Port is Eyes and Ears' of our State. ಇದನ್ನು ತಾವು ಮರೆತು ಕೆಲಸ ಮಾಡಬೇಡಿ. ನಾನು ಹೇಳತಕ್ಕಂಥದ್ದು ಇಷ್ಟೆ, ಇಷ್ಟು ಉನ್ನತ ಸ್ಥಾನದಲ್ಲಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರು He has to curb such element whoever he may be. Whether he is in our party or in your party irrespective of any affiliations he has to govern this State. He cannot allow such bad elements which are extraneous elements to govern this State. ಇದು ನಡೆಯುವಂತಹ ಒಂದು ಭಾವನೆ ಉದ್ಭವವಾದುದರಿಂದ ಗಂಭೀರತೆ ಇರತಕ್ಕಂಥ ಪ್ರಸಂಗ ಇರುವುದರಿಂದ ನಾವು ಈ ಪ್ರಶ್ನೆಯನ್ನು ಎತ್ತುತ್ತಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ನಡೆದಂಥ ಘಟನೆಗಳು ಈ

ನಡವಳಿಕೆಯ ಒಂದು ಸರಮಾಲೆಯನ್ನು ನೋಡಿದರೆ ಅಲ್ಲಿ ಯಾವುದೇ ರೀತಿಯಾದಂಥ ರಕ್ಷಣೆ ಕೊಡಲಿಕ್ಕೆ, ನ್ಯೂ ಮಂಗಳೂರ್ ಹಾರ್ಬರ್‌ಗೆ ರಕ್ಷಣೆ ಕೊಡಲಿಕ್ಕೆ ಇವರು ಸಿದ್ಧರಿಲ್ಲ. ಈ ಮನಸ್ಸು ಇವತ್ತು ಸರ್ಕಾರಕ್ಕೆ ಇಲ್ಲ ಎಂಬ ಭಾವನೆ ಇವತ್ತು ಬರುತ್ತಿದೆ ಏತಕ್ಕೆಂದು ಹೇಳಿದರೆ ೫೦ ದಿವಸಗಳ ಕಾಲ ಕಾನೂನು ಬಾಹಿರವಾಗಿ ಅಲ್ಲಿ ಬೆದರಿಕೆಯಿಂದ ಇಂಟಿಮಿಡೇಷನ್‌ನಿಂದ ಅಪಾಯದ ಬೆದರಿಕೆಗಳನ್ನು ಹಾಕಿ ಕೆಲಸವನ್ನು ನಿಲ್ಲಿಸುತ್ತಿದ್ದಾರೆ. ಇವತ್ತಿಗೂ ಅಲ್ಲಿ ಬಿ.ಎಸ್.ಎಫ್. ತರಿಸಿ ಕೆಲಸ ಮಾಡಬೇಕಾದಂಥ ಪರಿಸ್ಥಿತಿ ಉದ್ಭವವಾಗಿದೆ. ಕರ್ನಾಟಕ ರಾಜ್ಯದ ಪೋಲೀಸ್ ಇಡೀ ರಾಷ್ಟ್ರದಲ್ಲಿ ಅತ್ಯುತ್ತಮವಾದ ಸ್ಥಾನ, ಗೌರವ ಪಡೆದಂತಹ ಪೋಲೀಸ್ ಪಡೆ, ಈ ಉಜ್ವಲ ಪರಂಪರೆಗೆ ಸೇರಿದಂಥ ಕರ್ನಾಟಕದಲ್ಲಿ ನ್ಯೂ ಮಂಗಳೂರು ಹಾರ್ಬರ್‌ಗೆ ರಕ್ಷಣೆ ಮಾಡತಕ್ಕ ಶಕ್ತಿ ಕರ್ನಾಟಕ ರಾಜ್ಯ ಪೋಲೀಸರಿಗೆ ಇಲ್ಲ ಎಂದು ಹೇಳಿಕೊಳ್ಳತಕ್ಕ ಪರಿಸ್ಥಿತಿ ಇವತ್ತು ಉದ್ಭವವಾಗಬಾರದು. ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಒಳಗೆ ಹೋಗಿ ಕಂಟ್ರೋಲ್ ಮಾಡತಕ್ಕಂಥ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್‌ಗೆ ಇತರ ಕೆಲಸಗಾರರಿಗೆ ಹೊಡೆದು ಬಡಿದು ಅನುಮಾನಾಸ್ಪದ ಚಾರಿತ್ರ್ಯ ಉಳ್ಳಂಥ ವ್ಯಕ್ತಿಯ ಸಮ್ಮುಖದಲ್ಲಿ ಅವರನ್ನು ಕರೆದು ಕೊಂಡು ಹೋಗತಕ್ಕಂಥ ಘಟನೆ ನಡೆಯಬಹುದಾದ ಸಂದರ್ಭದಲ್ಲಿ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ. ತಾವು ಇವತ್ತು ತನಿಖೆ ಮಾಡುವುದು ಬೇಡ. ಎಷ್ಟು ಕೇಸ್‌ಗಳನ್ನು ರಿಜಿಸ್ಟರ್ ಮಾಡಿರುತ್ತೀರಿ? ಯಾವ ಸಬ್ ಇನ್‌ಸ್ಪೆಕ್ಟರನ್ನು ಅಮಾನತ್ತು ಮಾಡಿರುತ್ತೀರಿ? ಪೋಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡಿರುತ್ತೀರಾ? ಏನು ಮಾಡಿದ್ದೀರಿ ಇವತ್ತು? ತಾವು ಇವತ್ತು ಕೂಡ ಯಾವ ರೀತಿಯ ಸರಿಯಾದಂಥ ತನಿಖೆ ಮಾಡಲಿಲ್ಲ. ತನಿಖೆ ಮಾಡದಿದ್ದರೆ ಏನು ತಿಳಿದುಕೊಳ್ಳಬೇಕಾಗುತ್ತದೆ ಇದನ್ನು ತಾವು ಹೇಳಬೇಕಾಗಿದೆ. ಇವತ್ತು ಸರ್ಕಾರದ ಮೇಲೆ ಪೋಲೀಸರ ಮೇಲೆ ಅಪವಾದ ಇದೆ. ಇವತ್ತು ಅವರು ಇನ್‌ವೆಸ್ಟಿಗೇಟ್ ಮಾಡುತ್ತಾರೆ ಎಂಬ ನಂಬಿಕೆ ಕೂಡ ನಮಗಿಲ್ಲ. ಇದರಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು, ತನಿಖೆಯಾಗಬೇಕು. ಯಾವ ಒಂದು ವಿಶ್ವಾಸದ ತಳಹದಿ ಅಲುಗಾಡಿಬಿಟ್ಟಿದೆ, ಆ ಒಂದು ವಿಶ್ವಾಸದ ತಳಹದಿಯನ್ನು ಭದ್ರಪಡಿಸಲೇಬೇಕು. ಬಹುಶಃ ಇದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕಾಗುತ್ತದೆ. ಏಕೆಂದರೆ ಇದು ಬರೀ ಒಂದು ಪೋಲೀಸ್ ಅಸಾಲ್ಟ್ ಅಥವಾ ಮರ್ಡರ್ ಪ್ರಶ್ನೆ ಅಲ್ಲ. ಇಡೀ ನ್ಯೂ ಮಂಗಳೂರ್ ಹಾರ್ಬರ್ ಸಂರಕ್ಷಣೆ ಸಂಬಂಧಪಟ್ಟಂತಹ ಒಂದು ವಿಚಾರವಾದುದರಿಂದ ಈ ಬಗ್ಗೆ ಸಿ.ಬಿ.ಐ. ತನಿಖೆಗೆ ಒಪ್ಪಿಸಿ. ತಾವು ಹೇಳುತ್ತೀರಿ. ತಮ್ಮ ಹೃದಯ ನಿರ್ಮಲವಾಗಿದೆ. ಕೈ ಸ್ವಚ್ಛವಾಗಿದೆ ಎಂದು. ಆದುದರಿಂದ ಇದು ತಮಗೆ ಸಂಪೂರ್ಣ ಮನವರಿಕೆಯಾಗಿದೆ. ತಾವು ಇದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಿ. ಏತಕ್ಕೆಂದು ಹೇಳಿದರೆ ಪೋಲೀಸ್ ಅಧಿಕಾರಿಗಳು, ಪೋಲೀಸ್ ಕಾನ್‌ಸ್ಟೇಬಲ್, ವ್ಯಕ್ತಿಗಳಿರಬಹುದು. ನ್ಯೂ ಮಂಗಳೂರ್ ಹಾರ್ಬರ್ ಚೇರ್ಮನ್ ವ್ಯಕ್ತಿ ಇರಬಹುದು. ಆದರೆ ಒಂದು ಸಂಸ್ಥೆ ಏನಿದೆ ರಾಷ್ಟ್ರದ ಒಂದು ಆಸ್ತಿ. ಏನಿದೆ ಇದರ ರಕ್ಷಣೆ ಪ್ರಾಮುಖ್ಯವಾದುದು. It is the question of establishing the credibility of a State Government and also the credibility of the great institution like the New Mangalore Harbour. ಆದುದರಿಂದ ಈ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿಗೆ ಒಪ್ಪುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ತಪಿತಸ್ಥ ಅಧಿಕಾರಿಗಳು ಯಾರಿದ್ದಾರೆ, ಅವರನ್ನು ಅಮಾನತ್ತು ಮಾಡಿ. ಈ ವಿಚಾರದಲ್ಲಿ We are prepared to raise above the Party Politics. We are prepared to raise above all kinds of personal, private or political prejudices. We are here to protect the interest of the public and to protect the interest of New Mangalore Harbour which is the most prestigious project for the Nation and for the State. ಈ ಕಳಕಳಿಯ ವಿನಂತಿಯನ್ನು ನಾನು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರಿಗೆ ಹೇಳಲಿಕ್ಕೆ ಇಚ್ಛಿಸಪಡುತ್ತೇನೆ. ಇದು ರಾಜಕೀಯ ಅಲ್ಲೋಲಕಲ್ಲೋಲ ರಾಜಕೀಯ ತಳಮಳ ಮತ್ತು ಇದು ಬರೀ ನಾಯಕರ, ಕಾರ್ಮಿಕರ ಒಂದು ಹೋರಾಟಕ್ಕೆ ಸೀಮಿತವಾದುದುದು ಎಂದು ಹೇಳಿ ತಾವು ತಪ್ಪು ತಿಳಿದುಕೊಳ್ಳದೆ ಇದು ರಾಷ್ಟ್ರದ ಮತ್ತು ರಾಜ್ಯದ ಒಂದು ಪ್ರಶ್ನೆ ಮತ್ತು ರಾಜ್ಯದ ಒಂದು ಕೈಗಾರಿಕಾ ಅಭಿವೃದ್ಧಿಯ ಮುಂಚೂಣಿಯಲ್ಲಿ ಇರತಕ್ಕಂಥ ಒಂದು ಸಂಸ್ಥೆಯನ್ನು ಉಳಿಸಿಕೊಳ್ಳತಕ್ಕಂಥ ಕಾಪಾಡಿಕೊಳ್ಳತಕ್ಕಂಥ ಉನ್ನತ ಕಾರ್ಯ ಎಂದು ತಿಳಿದುಕೊಳ್ಳಬೇಕು. ಸರ್ಕಾರ ರಾಜಕೀಯ ಬಿಟ್ಟು ಇನ್ನಾದರೂ ವಿವಾದಗಳ ಸುಳಿಗೆ ಸಿಲುಕದೆ ಇದನ್ನು ತಾವು ಮಾಡುತ್ತೀರಿ ಎಂದು ಹೇಳಿ ನಾನು ನಿಮ್ಮಿಂದ ಉತ್ತರ ನಿರೀಕ್ಷಣೆ ಮಾಡುತ್ತೇನೆ. ಆ ಉತ್ತರ ಇವತ್ತು ತಮ್ಮಿಂದ ಬರಬೇಕಾಗಿದೆ. ಆದುದರಿಂದ ಈ

ವಿಷಯದ ಬಗ್ಗೆ ಇನ್ನೂ ಕೂಡ ನನ್ನ ಅನೇಕ ಗೆಳೆಯರು ಮಾತನಾಡುವವರಿದ್ದಾರೆ. ನನಗೆ ಸಾಕಷ್ಟು ಸಮಯ ಕೊಟ್ಟಿದ್ದೀರಿ ಮತ್ತು ಸನ್ಮಾನ್ಯ ಜನಾರ್ದನ ಪೂಜಾರಿಯವರು ತೀವ್ರವಾದ ಟೀಕೆಯನ್ನು ಮಾಡಿದಾಗ ಆ ಟೀಕೆ ಮತ್ತಷ್ಟು ತೀವ್ರವಾಗುವ ಹಾಗೆ ಸಹಕಾರ ಕೂಡ ಕೊಟ್ಟಿದ್ದಾರೆ. ಟೀಕೆ ಮತ್ತಷ್ಟು ತೀವ್ರ ಆಗುವ ಹಾಗೆ ಸಹಕಾರ ಕೊಟ್ಟಿದ್ದಕ್ಕೆ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಈ ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಮೊಯಿಲಿಯವರು ಸಾಕಷ್ಟು ಹೇಳಿದ್ದಾರೆ. ಬೇರೆಯವರಿಗೆ ಉತ್ಸಾಹ ಇದೆಯೋ ಇಲ್ಲವೋ ಗೊತ್ತಿಲ್ಲ. ಬಹಳ ಟೈಮ್ ಆಗಿದೆ.

ಶ್ರೀ ಬಿ. ಸ್ವಾಮಿರಾವ್.—ನಮ್ಮ ನಾಯಕರು ಹೇಳಿದಹಾಗೆ.

ಉಪಾಧ್ಯಕ್ಷರು.—ನಿಮ್ಮದೇನೂ ಇಲ್ಲ ಇದರಲ್ಲಿ.

ಶ್ರೀ ಬಿ. ಸ್ವಾಮಿರಾವ್.—ನಾನೂ ರುಜು ಹಾಕಿ ಕೊಟ್ಟಿದ್ದೇನೆ.

ಉಪಾಧ್ಯಕ್ಷರು.—ಒಂದು ನಿಮಿಷದಲ್ಲಿ ಹೇಳಿ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಇಷ್ಟು ಹೊತ್ತು ನಮ್ಮ ಮೇಲೆ ದಾಳಿ ಆಯಿತು. ನಮಗೆ ರಕ್ಷಣೆ ಕೊಡುವುದರಲ್ಲಿ ತಾವು ಸ್ವಲ್ಪ ತಪ್ಪು ಮಾಡಿದ್ದೀರಿ ಸ್ವಲ್ಪ ಕಾಲ ಕಳೆದಿದ್ದೀರಿ ಎಂದು ತಮಗೆ ಗೌರವದಿಂದ ಹೇಳಬೇಕಾಗಿದೆ. ಈ ಒಂದು ಪ್ರಕರಣ ಏನು ನಡೆದಿದೆ. ಮೊನ್ನೆ ದಿನ ಪ್ರಸ್ತಾಪ ಮಾಡಿದ್ದೆ. ಇತ್ತೀಚೆಗೆ ರಾಜ್ಯದಲ್ಲಿ ಬಹಳಷ್ಟು ಗೊಂದಲ ಇದೆ. ಬೆತ್ತಲೆ ಹೆಣ್ಣುಗಳ ಮೆರವಣಿಗೆ ಕುದುರೆಮೋತಿಯಲ್ಲಿ ಆದರೆ......

(ಗೊಂದಲ)

ಶ್ರೀ ಬಿ. ರಾಚಯ್ಯ.—ಮಂಗಳೂರು ಬಂದರಿನ ಬಗ್ಗೆ ಮಾತ್ರ ಮಾತನಾಡಿ......

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.—ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ, ಪ್ರತಿಯೊಬ್ಬರ ಕರುಳು ಕತ್ತರಿಸುವ ವಿಚಾರವನ್ನು ಮಂತ್ರಿಗಳು ನೋಡಲಿ. ನಾನು ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಮಾನ್ಯಸದಸ್ಯರಾದ ವೀರಪ್ಪಮೊಯ್ಲಿಯವರು ಹೆಚ್ಚು ವಿಷಯಗಳನ್ನು ಹೇಳಿದ್ದಾರೆ. ಇದನ್ನು ಸಿ. ಬಿ. ಐ.ಗೆ ಒಪ್ಪಿಸುವುದಾದರೆ, ನಾವು ಯಾರು ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾರಿಗೆ ಬೇಕಾದರೂ ಶಿಕ್ಷೆ ಆಗಲಿ, ಅಧ್ಯಕ್ಷರಿಗಾಗಲೀ, ಅಥವಾ ಕಾರ್ಮಿಕರಿಗಾಗಲೀ, ತಾವು ಇದಕ್ಕೆ ಒಪ್ಪುವುದಕ್ಕೆ ಸಿದ್ಧರಿದ್ದೀರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಉಪಾಧ್ಯಕ್ಷರೇ, ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯಸದಸ್ಯರಾದ ವೀರಪ್ಪಮೊಯಿಲಿಯವರು ಬಹಳ ವಿಸ್ತಾರವಾಗಿ ಮತ್ತು ಹೆಚ್ಚು ಸೂಕ್ತವಾಗಿ ಹೇಳಿ ಚರ್ಚಿಸಿರುವುದರಿಂದ, ನಾನು ಹೆಚ್ಚಿನ ವಿಸ್ತಾರಕ್ಕೆ ಹೋಗುತ್ತಾ ಇಲ್ಲ. ಆದರೆ ನಾನು ನವ ಮಂಗಳೂರು ಬಂದರಿಗೆ ನೇರವಾಗಿ ಸಂಬಂಧಿಸಿದಂತಹ ವ್ಯಕ್ತಿ. ನಾನು ಒಬ್ಬ ಕೇವಲ ಕಾರ್ಮಿಕ ಸಂಘಟನೆ ಮೂಲಕ ಅಲ್ಲ, ಇಡೀ ನಮ್ಮ ರಾಷ್ಟ್ರದ 10 ಪ್ರಮುಖ ಬಂದರುಗಳಲ್ಲಿ ಕಾರ್ಯಾಚರಣೆ ಮಾಡುವಂತಹ ಒಂದು ಪ್ರಮುಖವಾದ ಮಂಡಲಿ ಸದಸ್ಯನಾಗಿದ್ದೇನೆ. ಇಲ್ಲಿ ನಾನು ನವ ಮಂಗಳೂರು ಬಂದರಿಗೆ ಸೀಮಿತವಾದ ಕೆಲವು ಮಾತುಗಳನ್ನು ವ್ಯಕ್ತಪಡಿಸಲಿಕ್ಕೆ ಕಾರಣ ಇಷ್ಟೆ. ಅಲ್ಲಿ ಒಂದು ವಿಶೇಷವಾದಂತಹ ವಿದ್ಯಮಾನ ವಿನಾಶಕಾರಿಣ ಪ್ರಾರಂಭವಾಗಿದೆ. ಈ ವಿದ್ಯಮಾನಕ್ಕೆ ಯಾರು ಯಾರು ಕಾರಣಕರ್ತರು ಎನ್ನುವುದು ಬೇರೆ ಒಂದು ವಿಚಾರ. ಆದರೆ ಈ ವಿದ್ಯಮಾನಕ್ಕೆ ಯಾರು ಕಾರಣ ಕರ್ತರಾಗಿದ್ದಾರೆಯೋ ಅವರನ್ನು, ಆ ವಿದ್ಯಮಾನ ನಡೆಯದಂತೆ ದೂರ ಇಡುವುದು, ಪ್ರದೇಶವನ್ನು ಸ್ವಚ್ಛ ಮಾಡುವ. ಪರಿಸ್ಥಿತಿಯನ್ನು ಒಂದುರೀತಿಯಲ್ಲಿ ತಿಳಿಯಾಗಿ ಮಾಡುವ ಪ್ರಯತ್ನವನ್ನು ಪಣಂಬೂರು ಪೋಲೀಸ್ ವರ್ಗ ಏನಿದೆ, ಅದು ಮಾಡಬೇಕಾಗಿತ್ತು. ಎನ್ನುವುದು ನಮ್ಮೆಲ್ಲರ ನಿರೀಕ್ಷೆ ಯಾಗಿತ್ತು. ಆದರೆ ಅದು ಅಲ್ಲಿ ನಡೆಯುತ್ತಾ ಇಲ್ಲ ಕೆಲವಾರು ದಿನಗಳಿಂದ ತಾವು ಪತ್ರಿಕೆಗಳಲ್ಲೂ ಗಮನಿಸಿರಬಹುದು. ಅಲ್ಲಿ ಕೆಲಸ ಮಾಡುವಂತಹ ಕಾರ್ಮಿಕರು, ತಮ್ಮ ಪಾಸುಗಳನ್ನು, ಕೆಲಸಕ್ಕೆ ಹೋಗುವಾಗ ಪೋಲೀಸಿನವರು ಖುದ್ದಾಗಿ ಪರಿಶೀಲನೆ

ಮಾಡುವಂತೆ ಮಾಡ್ತಿ ಅವರನ್ನು ಹಿಂದೆ ತಳ್ಳುವ ಘಟನೆಗಳು ಆಗಿವೆ. ಇದರ ಜೊತೆಗೆ ಯಾರು ಗೂಂಡಾ ಶಕ್ತಿಗಳೂ, ಅವರನ್ನು ತಡೆಯುತ್ತಾರೆ.ಅವರನ್ನು ವ್ಯವಸ್ಥಿತವಾಗಿ ರಕ್ಷಣೆ ಮಾಡತಕ್ಕಂತಹದ್ದು, ಅವರಿಗೆ ಎಲ್ಲಾ ರೀತಿಯ ಕುಮ್ಮಕ್ಕು ಕೊಡುವಂತಹದ್ದು ಹಾಗೂ ಅಲ್ಲಿರುವಂತಹ ಕಾರ್ಮಿಕರ ಎದುರಿನಲ್ಲಿ ಅವರ ಮುಖಂಡರು ಯಾರಿದ್ದಾರೆ, ಅವರು ಇವರಿಗೆ ಬೆದರಿಕೆ ಹಾಕುವಂತಹದ್ದು, ಪೋಲೀಸಿನವರು ಮಾಡುವ ಮೂಲಕ, ಇಲ್ಲಿ ಪ್ರಾಮಾಣಿಕವಾಗಿ ದುಡಿಯಬೇಕೆಂದಿರುವ ಕಾರ್ಮಿಕರು ಯಾರಿದ್ದಾರೆ, ಅವರಲ್ಲಿ ಒಂದು ರೀತಿಯ, ಮಾನಸಿಕ ಭಯದ ವಾತಾವರಣ ಮೂಡಿವೆ; ಪೋಲೀಸಿನವರು ಮಾಡುತ್ತಿದ್ದಾರೆ. ಮತ್ತು ಅಲ್ಲಿ ಮಾತ್ರವಲ್ಲ, ಇದೇ ಪೋಲೀಸಿನವರು ಯಾವುದೋ ಒಂದು ಕಾರ್ಮಿಕ ಸಂಘ ಅಲ್ಲಿ ಚಳುವಳಿ ಆಗಬೇಕು, ಮುಷ್ಕರ ಆಗಬೇಕು ಎಂದು ಹೇಳಿ ಕರೆ ಕೊಟ್ಟಾಗ, ಇಂತಹ ಸಂದರ್ಭದಲ್ಲಿ ರಾತ್ರೋರಾತ್ರಿ ಆ ಸಂಘದ ಪದಾಧಿಕಾರಿಗಳ ಜೊತೆಗೂಡಿ, ಈ ಕಾರ್ಮಿಕರ ಮನೆ ಮನೆಗಳಿಗೆ ಹೋಗಿ ಇವರನ್ನು ಬೆದರಿಕೆ ಹಾಕುವಂತಹ ಕಾರ್ಯಕೂಡ ಮಾಡುತ್ತಾ ಬಂದಿದ್ದಾರೆ. ಇದು ಇವತ್ತು ನಡೆಯುತ್ತಾ ಬಂದಿರತಕ್ಕ ವಿದ್ಯಮಾನ. ಆದರೆ ನಾನು ವಿಶೇಷವಾಗಿ ಹೇಳುತ್ತಿದ್ದೇನೆ. ಮಾನ್ಯ ಗೃಹಸಚಿವರೂ ಇಲ್ಲಿದ್ದಾರೆ, ತಾವು ಇದನ್ನು ಪರಿಶೀಲನೆ ಮಾಡಬೇಕು ತಾವು ತಮಗೆ ನಂಬಿಕೆ ಇರುವ ಅಧಿಕಾರಿಯನ್ನು ಕಳುಹಿಸಿ, ಅಲ್ಲಿ ನಡೆದಿರುವ ವಿದ್ಯಮಾನವನ್ನು ತಾವು ಪರಿಶೀಲನೆ ಮಾಡಬೇಕು. ನವ ಮಂಗಳೂರಿನ ಪ್ರಮುಖ ದ್ವಾರ ಎಲ್ಲಿದೆ, ಅಲ್ಲಿ ಸ್ವಲ್ಪವೇ ದೂರದಲ್ಲಿರುವಂತಹ ಒಂದು ರೈಲ್ವೆ ಹಳಿಯ ಪಕ್ಕದಲ್ಲಿ ಒಂದು ಟೆಂಟ್‌ನ್ನು ಹೊಡೆದಿದ್ದಾರೆ. ಅನೇಕ ದಿನಗಳಿಂದ ಈ ಟೆಂಟ್ ಹೊಡೆದಾಯಿತು. ನನಗೆ ನೆನಪಿರುವಂತೆ ಸುಮಾರು ೬ ತಿಂಗಳಿಂದಲೂ ಆ ಟೆಂಟ್ ಇದೆ. ಈ ಟೆಂಟ್‌ಗೆ ಒಂದು ಹೆಸರು ಕೊಟ್ಟಿದ್ದಾರೆ, ಅದು ''ಸತ್ಯಾಗ್ರಹ ಮಾಡುವಂತಹ ಒಂದು ಟೆಂಟ್'' ಎಂದು. ಈ ಸತ್ಯಾಗ್ರಹ ಮಾಡುವಂತಹ ಟೆಂಟ್ ಏನಿದೆ ಇದರಲ್ಲಿ ಯಾರು ಸತ್ಯಾಗ್ರಹ ಮಾಡುತ್ತಾರೆಂದು ಘೋಷಣೆ ಆಗಿದೆಯೋ ಅವರೇ ಅಂತಹ ವ್ಯಕ್ತಿಗಳು, ಆ ಟೆಂಟ್‌ನಲ್ಲಿ ಮಾರಕಾಸ್ತ್ರಗಳು, ಗೂಂಡಾಗಳು ಸದಾ ಇದ್ದು, ಅಲ್ಲಿ ನಡೆಯುವಂಥಾ ಚಟುವಟಿಕೆಗಳು ಎಂದರೆ ಜೂಗಾಲೆ ಆಡುವುದು, ಹೆಂಡ ಕುಡಿಯುವಂತಹದ್ದು. ಅಲ್ಲಿ ಹೋಗಿಬರುವವರಿಗೆ ಭಯಪಡಿಸುವುದು. ಇಂಥಾದ್ದೆಲ್ಲ ನಡೆಯುತ್ತಿದೆ, ಆ ಟೆಂಟಿನ ಕಾರ್ಯಾಚರಣೆ ನೋಡಿದಾಗ ನನಗೆ ಖಂಡಿತವಾಗಿ ಅನಿಸುತ್ತದೆ, ಇದರಲ್ಲಿ ನಡೆಯುತ್ತಿರುವ ಕಾರ್ಯಾಚರಣೆಗೆ ಪೂರಕವಾಗಿ, ಪೋಲೀಸಿನವರು ಇಂತಹ ವಾತಾವರಣ ನೋಡಿದರೆ, ಅವರಿಗೆ ನಿಜವಾದ ಕಾಳಜಿ ಇದೆಯೋ ಎಂಬುದು ಗೊತ್ತಾಗುತ್ತದೆ. ಇದನ್ನು ನೋಡಿದರೆ ಪಂಜಾಬಿನ ಅಮೃತಸರದ ಚಟುವಟಿಕೆ ನೆನಪಿಗೆಬರುತ್ತದೆ. ಹೇಗೆ ಆ ಅಮೃತಸರದ ಆ ಚಿನ್ನದ ದೇವಾಲಯವನ್ನು ಈ ರಾಷ್ಟ್ರದ ಕೆಲವು ಜನರು ವಿಧ್ವಂಸಕ ಕೃತ್ಯಗಳಿಗೆ ಬಳಸಿಕೊಳ್ಳಲಾಯಿತೋ ಹಾಗೆ ಕಾರ್ಮಿಕರ ಹೆಸರಿನಲ್ಲಿ ಬೇರೂರಿರುವಂತಹ ಈ ಟೆಂಟ್ ನವ ಮಂಗಳೂರು ಬಂದರು,ಎದುರು ನವ ಮಂಗಳೂರು ಆಸುಪಾಸಿನಲ್ಲಿ ವಿಧ್ವಂಸಕ ಕೃತ್ಯಗಳಿಗೆ ಬಳಸಿಕೊಂಡು, ಅದರೊಳಗೆ ಅಸ್ತ್ರಗಳನ್ನು ಸಂಗ್ರಹ ಮಾಡಿಕೊಂಡು, ಉಗ್ರಗಾಮಿಗಳನ್ನು ನೆಲೆಗೊಳಿಸುವ, ಅಶಾಂತಿಯ ವಾತಾವರಣ ಮೂಡಿಸುವ ಪ್ರಯತ್ನ ಆಗಿದೆ. ಹೆಸರು ಮಾತ್ರ ಅಲ್ಲಿ ಸಸ್ಪೆಂಡ್ ಆದವರು ಇದ್ದಾರೆಂದು ಇದೆ. ಸಸ್ಪೆಂಡ್ ಏಕಾದರೂ? ಏನಾದರೂ ಎಂಬ ಚರ್ಚೆಯ ವ್ಯಾಪ್ತಿಯೇ ಬೇರೆ. ಅದು ಆಗಿದ್ದನ್ನು ಪೋಲೀಸಿನವರ ಗಮನಕ್ಕೂ ತಂದಿದ್ದೇವೆ. ಆ ಟೆಂಟ್‌ನ ಮುಂಭಾಗದಲ್ಲಿ ಪ್ರತಿ ದಿನ ಸಂಜೆ, ಯಾವ ರೀತಿಯ ಮುಂಚಿತವಾದ ಒಪ್ಪಿಗೆಯನ್ನೂ ಪಡೆಯದೆ, ಕೆಲವು ನಾಯಕರು ಎನಿಸಿಕೊಂಡ ವ್ಯಕ್ತಿಗಳು, ಈ ನಾಯಕರು ಯಾರು ಎನ್ನುವ ಚರಿತ್ರೆಯನ್ನು ಇನ್ನೊಮ್ಮೆ ಬಿಚ್ಚಿ ಹೇಳಲಿಕ್ಕೆ ಹೋಗುವುದಿಲ್ಲ. ಮಾನ್ಯ ಮೊಯ್ಲಿಯವರು ಹೇಳಿದ್ದಾರೆ. ಈ ವ್ಯಕ್ತಿಗಳು ಅಲ್ಲಿ ಭಾಷಣ ಕಾರ್ಯಕ್ರಮ ಮಾಡುತ್ತಾರೆ. ಅದನ್ನು ರೆಕಾರ್ಡ್‌ಮಾಡಿದ್ದಾರೆಂದು ಹೇಳಿದ್ದಾರೆ. ಅದು ನನ್ನ ಹತ್ತಿರ ಇಲ್ಲ. ಆ ಭಾಷಣದಲ್ಲಿ ಉಗ್ರವಾದ ವಿಚಾರಗಳು, ಕಡಿಯುವಂತಹದ್ದು, ಕತ್ತರಿಸುವಂತಹದ್ದು, ಗೂಂಡಾಗಿರಿ ಮಾಡುವಂತಹದ್ದು, ಈ ವಿಚಾರಗಳನ್ನು ಅಲ್ಲಿ ಪ್ರತಿ ದಿನ ಭಾಷಣ ಮಾಡುತ್ತಿದ್ದಾರೆ. ಈ ವಿಷಯವನ್ನು ಅಲ್ಲಿ ಭಾಷಣ ಮಾಡಿದ ವ್ಯಕ್ತಿಗಳ ಸಮ್ಮುಖದಲ್ಲಿ ಇದ್ದ ಈ ವಿಷಯವನ್ನು ನಮ್ಮ ಜಿಲ್ಲೆಯ ಹಿರಿಯ ಪೋಲೀಸ್ ಅಧಿಕಾರಿಯಾದ ಡಿ.ಐ.ಜಿ. ಅವರ ಗಮನಕ್ಕೂ ಸಹ ಹಿಂದೆಯೇ ತಂದಿದ್ದೇನೆ. ಆದರೆ ಅಲ್ಲಿರುವಂತಹ ಪೋಲೀಸ್ ವರ್ಗ, ನಾನು ತಮ್ಮ ಇಲಾಖೆಯನ್ನಾಗಲೀ, ಮಾನ್ಯ ಗೃಹಸಚಿವರ ಇಲಾಖೆಯನ್ನಾಗಲೀ, ಸಂಪೂರ್ಣವಾಗಿ ಅನುಮಾನ ಪಡಿಸುವಂಥಾದ್ದು, ಟೀಕಿಸುವಂಥಾದ್ದು ನನ್ನ ಉದ್ದೇಶ ಅಲ್ಲ. ಆದರೆ ನವ ಮಂಗಳೂರು ಬಂದರಿನಲ್ಲಿ ಯಾವ ಪೋಲೀಸ್ ಅಧಿಕಾರಿಗಳು ಇದ್ದಾರೆ. ಅವರಿಗೆ, ಈ ಚಟುವಟಿಕೆಯ ಉಗ್ರಗಾಮಿಗಳು ಯಾರಿದ್ದಾರೆ ಇವರಿಗೂ,

ಅವರಿಗೂ ನೇರವಾದ ಯಾವುದೋ ವ್ಯವಹಾರ ಇದೆ. ಈ ವ್ಯವಹಾರವನ್ನು ಅವರು ಉಪಯೋಗ ಮಾಡಿಕೊಂಡು ಈ ವ್ಯವಹಾರದ ಮೂಲಕ ಮುಲಾಜಿಗೆ ಬಿದ್ದು, ಅವರು ಏನು ಹೇಳುತ್ತಾರೋ, ಅದನ್ನು ಮಾಡುತ್ತಿದ್ದಾರೆ. ಇದನ್ನು ಮೊನ್ನೆ ದಿನ ಮಾಡಿದರು ಚಳುವಳಿ, ಚಳುವಳಿ ಎಂದು ಹೇಳಿ ಸಂಘಟನೆಗೆ ಕರೆಯಿತ್ತು, ಇಂತಹ ತಾರೀಖಿಗೆ ಕೆಲಸ ಸ್ಥಗಿತಗೊಳಿಸಬೇಕೆಂದು ಹೇಳಿ, ಅನೇಕ ಬಾರಿ ಹೇಳಿಕೆಗಳನ್ನು ಕೊಟ್ಟರೂ ಸಹ ನವಮಂಗಳೂರು ಬಂದರಿನಲ್ಲಿ ಕಾರ್ಮಿಕರು ಸ್ವತಃ ಕೆಲಸವನ್ನು ನಿಲ್ಲಿಸಿದ್ದು ಇಲ್ಲ. ಇವರ ಗೂಂಡಾಗಳು ಕೆಲಸ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದರು, ಪೋಲೀಸ್‌ನವರು ಎರಡನೆಯ ಸಲ ಪ್ರಯತ್ನ ಮಾಡಿದರು. ಪೋಲೀಸ್ ಉದ್ದೇಶ ಏನೆಂದರೆ ಕೆಲಸ ನಿಲ್ಲಿಸೋ ಒಂದು ಪ್ರಯತ್ನ. ೫ನೇ ತಾರೀಖು ಒಂದು ಸಂಘಟನೆ ಮಾಡಿದಾಗ, ನಿಲ್ಲಿಸುವುದಕ್ಕೆ ಸಾಧ್ಯವಾಗದೇ, ಆ ತಿಂಗಳಲ್ಲಿ ಅತ್ಯಧಿಕ ಉತ್ಪಾದನೆಯನ್ನು ನವ ಮಂಗಳೂರು ಬಂದರಿಗೆ ಆ ದಿನ ತಂದು ಕೊಟ್ಟಿತು. ಬೆದರಿಕೆಗೆ ಒಳಗಾಗದವರನ್ನು, ಹೆದರಿಸಿ, ಇನ್ನೊಮ್ಮೆ ಚಳುವಳಿಗೆ ಕರೆ ಕೊಟ್ಟಿದ್ದಾರೆ. ಅದು ೧ನೇ ತಾರೀಖು. ಆ ೧ನೇ ತಾರೀಖು ಬರುವ ದಿನ ಯಾವುದಿದೆ ಇವತ್ತು ಅವರ ಹೆದರಿಕೆಗೆ ಕೆಲಸ ನಿಲ್ಲುವುದೋ ಅಥವಾ ಕೆಲಸಕ್ಕೆ ಪೂರಕವಾಗಿರುವಂತಹ ಅಧಿಕಾರಿಗಳನ್ನು ಸದೆಬಡಿಯುವ ಮೂಲಕ ಅವರನ್ನು ಮನೆಗೆ ಕಳುಹಿಸಿ, ನಮ್ಮ ಮುಷ್ಕರ ಯಶಸ್ವಿಯಾಯಿತು ಎಂದು ಹೇಳಿ ಪತ್ರಿಕೆಯಲ್ಲಿ ಪ್ರಚಾರ ಪಡೆಯಬೇಕೆಂದು ಪ್ರಯತ್ನ ಮಾಡಿ. ಈ ಪ್ರಯತ್ನಕ್ಕೆ ಪಣಂಬೂರು ಪೋಲೀಸ್ ಅಧಿಕಾರಿಯವರನ್ನು ಉಪಯೋಗಿಸಿಕೊಂಡಿದ್ದು ಖಂಡಿತ ಹೌದು. ಇಲ್ಲದಿದ್ದರೆ ನವ ಮಂಗಳೂರು ಬಂದರಿಗೆ ಧಕ್ಕೆ ಏನಿದೆ ? ಇದರೊಳಗೆ ಯಾವುದೇ ಒಬ್ಬ ವ್ಯಕ್ತಿ ಪ್ರವೇಶ ಆದರೂ ಸಹ ಅಧಿಕೃತವಾಗಿ ಪಾಸ್ ಪಡೆಯಬೇಕಾಗುತ್ತದೆ. ಇಂಥಾದ್ದರಲ್ಲಿ ಯಾರೋ ಒಬ್ಬ ಚಾರಿತ್ರಹೀನ ವ್ಯಕ್ತಿಗೆ ಪಾಸ್ ಇಲ್ಲದೇ ಪ್ರವೇಶಕ್ಕೆ ಅವಕಾಶ ಇಲ್ಲ. ಪೋಲೀಸಿನವರೂ ಕೂಡ ಯಾವುದೇ ರೀತಿಯಲ್ಲಿ ಕಾರ್ಯಾಚರಣೆಗೆ ಪ್ರವೇಶ ಆಗಬೇಕೆಂದರೂ ಸಹ ನವ ಮಂಗಳೂರು ಬಂದರಿಗೆ ಸಂಬಂಧಪಟ್ಟ ಅಧಿಕಾರಿ ವರ್ಗದವರ ಒಪ್ಪಿಗೆಯ್ನು ಪಡೆಯಬೇಕು. ಈ ಪೋಲೀಸಿನವರು ಒಪ್ಪಿಗೆ ಇಲ್ಲದೆ ಏಕಾಏಕಿ ಅಪರ ರಾತ್ರಿ ಒಳಗೆ ನುಗ್ಗಿ, ಮುಚ್ಚಿ ಎಂದು ಹೇಳುತ್ತಿದ್ದಾರೆ. It is a prohibited area. ಅಲ್ಲಿ ಕೆಲಸ ಮಾಡುವಾಗ ಹೋಗಿ ಹೊಡೆದಿದ್ದಾರೆ. ಹೀಗೆ ಹೊಡೆದಿದ್ದಕ್ಕೆ ಕಂಪ್ಲೇಂಟ್ ಕೊಟ್ಟರೂ ಸಹ ಕೇಸ್ ರಿಜಿಸ್ಟರ್ ಆಗುತ್ತಾ ಇಲ್ಲ, ಅದು ಇನ್ನೂ ಕಾರ್ಯಾಚರಣೆಯಲ್ಲಿ ಆಗುತ್ತಾ ಇಲ್ಲ. ಆದರಿಂದ ನಾವು ಸರ್ಕಾರದ ಗಮನವನ್ನು ಸೆಳೆಯದೇ ಬೇರೆ ವಿಧಿಯಿಲ್ಲ ಎಂದು ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲಿ ಅನೇಕರಿಗೆ ತಪ್ಪು ಕಲ್ಪನೆ ಉಂಟಾಗಿದೆ. ಮಾನ್ಯ ಶ್ರೀ ಎಸ್. ಆರ್. ಬೊಮ್ಮಾಯಿಯವರು ಕೆಲವು ವಿಷಯಗಳ ಬಗ್ಗೆ ದುಃಡುಕಿನಿಂದ ಮಾತನಾಡಿದರು. ಈ ನವಮಂಗಳೂರು ಬಂದರಿನ ಅಧ್ಯಕ್ಷರ ಮೇಲೆ ಸಿ.ಬಿ.ಐ. ತನಿಖೆ ಇದೆ ಎಂದು ಹೇಳಿದರು ಇವರ ಮೇಲೆ ಯಾವಾಗ ಸಿ.ಬಿ.ಐ. ತನಿಖೆ ಪ್ರಾರಂಭವಾಯಿತು ಎಂದು ನಾನು ಕೇಳುತ್ತೇನೆ. ನವ ಮಂಗಳೂರಿನ ಬಂದರಿನ ಅಧ್ಯಕ್ಷರು ಯಾರು ಇದ್ದಾರೆ ಅವರನ್ನು ನೇಮಕ ಮಾಡಿದವರ್ಯಾರು ? ಇದೇನೂ ರಾಜಕೀಯ ಪ್ರಶ್ನೆ ಅಲ್ಲ. ಕೇಂದ್ರದಲ್ಲಿ ಅಂದಿನ ಕಾಲದಲ್ಲೇ ಜನತಾ ಸರ್ಕಾರ ಇದ್ದಾಗಲೇ, ಅವರ ಮೇಲೆ ಸಿ.ಬಿ.ಐ, ತನಿಖೆ ಇದ್ದಾಗಲೇ ಅವರನ್ನು ನೇಮಕ ಮಾಡಿದ್ದು ಆದುದರಿಂದ ಬೇರೆಯವರು ಜವಾಬ್ದಾರಿ ಆಗಬೇಕು ಎಂದರೆ ಹೇಗೆ ? ತಮ್ಮ ಸರ್ಕಾರ ಕೇಂದ್ರದಲ್ಲಿ ಇದ್ದಾಗಲೆ, ಅವರ ಮೇಲೆ ಸಿ.ಬಿ.ಐ. ತನಿಖೆ ಇದ್ದಾಗಲೇ ನೇಮಕ ಮಾಡಿರುವಾಗ ಈವೊತ್ತು ಸಿ.ಬಿ.ಐ. ತನಿಖೆ ಅವರ ಮೇಲೆ ಇದೆ ಎನ್ನುವ ಮಾತನ್ನು ಹೇಳಿದರೆ ಇದು ಅತ್ಯಂತ ಹಾಸ್ಯಾಸ್ಪದವಾದಂಥಾ ಮಾತಾಗುತ್ತದೆ, ಇದಕ್ಕೆ ನಾವು ವಿಷಾದಪಡಬೇಕಾಗುತ್ತದೆ. ಇದು ದಾಖಲೆಯಲ್ಲಿ ಪ್ರೂವ್ ಆಗಬೇಕು. ಏತಕ್ಕೆಂದರೆ ಒಬ್ಬ ವ್ಯಕ್ತಿ ಪರಿಶಿಷ್ಟ ವರ್ಗಕ್ಕೆ ಸೇರಿದ ಮಾತ್ರಕ್ಕೆ do not make him a target. ಶ್ರೀಮಾನ್ ಹೆಚ್. ಡಿ. ದೇವೇಗೌಡರು ಹೊಳೆನರಸೀಪುರಕ್ಕೆ ಟೂರ್‌ಗೆ ಹೋಗಿದ್ದಾಗ ಕೆಲವರು ದುಷ್ಟಶಕ್ತಿಗಳ ಹೋಗಿ ನವ ಮಂಗಳೂರಿನ ಬಂದರಿನ ಅಧ್ಯಕ್ಷರು ಯಾರು ಇದ್ದಾರೆ ಅವರನ್ನು ಅಲ್ಲಿಂದ ತೆಗೆಯಬೇಕು, ಅವರನ್ನು ಅಲ್ಲಿಂದ ಕಿತ್ತು ಹಾಕಬೇಕು ಎಂದು ಹೇಳಿದಾಗ ಅವರು ಹೇಳಿದ ಮಾತನ್ನು ನಂಬಲಿಲ್ಲ, ನೀವು ಹೋಗಿ ಎಂದು ಹೇಳಿದರು, ಈ ನವಮಂಗಳೂರು ಬಂದರಿನ ಅಧ್ಯಕ್ಷರ ಒಂದು ಆಡಳಿತದ ಬಗ್ಗೆ, ಒಂದು ದಕ್ಷತೆಯ ಬಗ್ಗೆ ಇವರಿಗೆ ಕೇಂದ್ರ ಸರ್ಕಾರ ಒಂದು ಸರ್ಟಿಫಿಕೇಟ್ ಕೊಟ್ಟಿರುವುದು ಮಾತ್ರ ವಲ್ಲದೆ, ಬೇರೆಯವರೂ ಕೂಡ ಈ ವ್ಯಕ್ತಿ ಏನು ಹೇಳಿದ್ದಾರೆ ಎಂದರೆ ಇಡೀ ಇಂಡಿಯಾ ದೇಶದಲ್ಲಿ ೧೦ ಪ್ರಮುಖ ಬಂದರುಗಳ ಮ್ಯಾನೇಜಿಂಗ್ ಡೈರೆಕ್ಟರಲ್ಲಿ ಟೆಕ್ನೋಕ್ರಾಟ್ ಇವನೊಬ್ಬನೇ ಅಂದರೆ ರಾಜಬಹಾದೂರ್ ಒಬ್ಬನೇ, ಎಂದು ಹೇಳಿದ್ದಾರೆ. ದಕ್ಷತೆಯಲ್ಲಾಗಲಿ, ಅಥವಾ ಆಡಳಿತದಲ್ಲಾಗಲೀ ಇವರನ್ನು ಬಿಟ್ಟರೆ ಬೇರೆ ಇಲ್ಲ ಅಂತ ಹೇಳಿದ್ದಾರೆ ಅಲ್ಲದೆ ಕೆನಡಾದಲ್ಲಿ ನಡೆದಂಥಾ ಒಂದು ಸಂಘಟನೆಯಲ್ಲಿ

ಅಂತರರಾಷ್ಟ್ರೀಯ ಸಂಘಟನೆಯಲ್ಲಿ ಇವರಿಗೆ ಜಗತ್‌ಪ್ರಸಿದ್ಧವಾದಂಥ ಒಂದು ಅವಾರ್ಡ್‌ನ್ನು ಸಹ ಕೊಟ್ಟಿದ್ದಾರೆ. ಅಲ್ಲದೆ ನಮ್ಮ ನವ ಮಂಗಳೂರು ಬಂದರಿನ ಅಧ್ಯಕ್ಷರು ಡೆಲ್ಲಿಯಲ್ಲಿದ್ದಾಗಲೂ ಸಹ ಅವರು ಯಾರು ಎನ್ನುವುದನ್ನು ನಮ್ಮ ಕಂದಾಯ ಸಚಿವರು ನೋಡಿದ್ದಾರೆ, ಆ ವ್ಯಕ್ತಿ ಯಾರು ಎನ್ನುವುದನ್ನು ಚೆನ್ನಾಗಿ ಪರಿಶೀಲನೆ ಮಾಡುವುದಕ್ಕೆ let us go together. ಇವರು ಇಲ್ಲಿಗೆ ಅಧ್ಯಕ್ಷರಾಗಿ ಬಂದ ಮೇಲೆ ಎಷ್ಟೋ ಹಡಗುಗಳು ಇಲ್ಲಿ ಬಂದು ನಿಂತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದಲ್ಲದೆ ಕಾರ್ಮಿಕರ ಸಂಖ್ಯೆಯನ್ನೂ ಹೆಚ್ಚಿಸಿದ್ದಾರೆ, ಮತ್ತು ಕಾರ್ಮಿಕರಿಗೆ ಅನುಕೂಲವಾಗುವ ಹಾಗೆ ಒಂದು ದಿನದಲ್ಲಿ ಒಂದು ಶಿಫ್ಟ್ ಇರುವ ಹಾಗೆ ಕೆಲಸ ಮಾಡಿಕೊಂಡು ಹೋಗುವ ಹಾಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅಲ್ಲದೆ ಇವರಿಗೆ ೨೩೦೦ ರೂಪಾಯಿ ಸಂಬಳ ಕೊಡುವ ಹಾಗೆ ಮಾಡಿದ್ದಾರೆ, ಮತ್ತು ಇದನ್ನು ಲಾಭದಾಯಕವಾಗಿ ನಡೆಸುತ್ತಿದ್ದಾರೆ. This is on record. ತಮಗೆ ಹೇಳಬೇಕಾದರೆ ಇವರನ್ನು ಪರಿಶಿಷ್ಟ ವರ್ಗದವರೆಂದು ಮುಂದೆ ಇಟ್ಟುಕೊಂಡು ಇವರನ್ನು ಪಿತೂರಿಗೆ ಒಳಪಡಿಸುತ್ತಿದ್ದಾರೆ, ಇವರನ್ನು ಪಿತೂರಿಗೆ ಒಳಪಡಿಸಿ ಬಲಿ ತೆಗೆದುಕೊಳ್ಳುವುದಕ್ಕ ಹೊರಟಿದ್ದಾರೆ.

(ಗೊಂದಲ)

ಶ್ರೀ ಬಿ. ಎ. ಉಮರಬ್ಬ.—ತಮಗೆ ಹೇಳಬೇಕಾದರೆ ರಾಜಬಹಾರ್ ಅವರು ಇಲ್ಲಿಗೆ ಬರಬೇಕು, ಅವರನ್ನು ಸ್ವಾಗತ ಮಾಡಬೇಕು ಎಂದು ಹೇಳಿದವರಲ್ಲಿ ನಾನು ಮತ್ತು ನಿಮ್ಮ ಪಕ್ಷದಲ್ಲಿರತಕ್ಕಂಥಾ ಅಮರನಾಥಶೆಟ್ಟರು ಒಬ್ಬರು. ಈವೊತ್ತು ನೋಡಿದರೆ ಅವರ ಮೇಲೆ ಪಿತೂರಿ ನಡೆಯುತ್ತಾ ಇದೆ.

ಶ್ರೀ ಜಿ. ನಾರಾಯಣ ಕುಮಾರ್.—ಮನುಷ್ಯ ಹುಟ್ಟಿದಾರಭ್ಯ ಒಂದೇ ತರಹ ಇರುವುದಿಲ್ಲ. ಆಮೇಲೆ ಚೇಂಜ್ ಆಗಬಹುದು.

ಶ್ರೀ ಬಿ.ಎ. ಉಮರಬ್ಬ.—ಕೇಂದ್ರದಲ್ಲಿ ಜನತಾ ಸರ್ಕಾರ ಇದ್ದಾಗಲೇ, ಅವರನ್ನು ನೇಮಕ ಮಾಡಿದಾಗಲೇ ಅವರ ಮೇಲೆ ಸಿ.ಬಿ.ಐ. ತನಿಖೆ ಇತ್ತು. ಅವರನ್ನು ಆವಾಗಲೇ ಸಿ.ಬಿ.ಐ ತನಿಖೆಗೆ ಒಳಪಡಿಸಬೇಕಾದರೆ ಅವರೇನಾದರೂ ಕಳ್ಳತನ ಮಾಡಿದ್ದರಾ? ಕಳ್ಳತನ ಮಾಡಿದ್ದು ಏನಾದರೂ ಪ್ರೂ ಆಗಿತ್ತೇ? ಇಂಥ ದಕ್ಷ, ಒಳ್ಳೆಯ ಆಡಳಿತಗಾರರನ್ನು ಈವೊತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ತೆಗೆಯಬೇಕು ಎಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರಲ್ಲಾ ಯಾವ ಉದ್ದೇಶದಿಂದ? ತಾವು ನಾಳೆ ದಿವಸ ಲೋಕಾಯುಕ್ತ ತರುತ್ತೀರಲ್ಲಾ......

ಶ್ರೀ ಎಂ.ಪಿ.ಪ್ರಕಾಶ್.—ತಾವು ಒಬ್ಬ ಐ.ಎ.ಎಸ್ ಅಧಿಕಾರಿಯ ಪರವಾಗಿ ಇಷ್ಟೊಂದು ವಕಾಲತ್ತು ವಹಿಸಿ ಮಾತನಾಡುತ್ತಿದ್ದೀರಲ್ಲಾ ಹಾಗಾದರೆ ಇದರ ಹಿಂದೆ ಏನಾದರೂ ಹಿನ್ನೆಲೆ ಇರಬೇಕಲ್ಲಾ

ಶ್ರೀ ಜಿ. ನಾರಾಯಣಕುಮಾರ್,– ಒಬ್ಬ ಐ.ಎ.ಎಸ್ ಅಧಿಕಾರಿಯ ಮೇಲೆ ನೀವು ಹೀಗೆ ಮಾತನಾಡುತ್ತಾ ಇರುವುದನ್ನು ನೋಡಿದರೆ ತಾವೇನಾದರೂ ಅವರ ಪರ ಶಾಮೀಲಾಗಿರಬೇಕು. ಇದು ನಾಚಿಕೆಗೇಡಿನ ವಿಷಯ.

(ಗೊಂದಲ)

ಉಪಾಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ, ಅವರು ಬೇಗನೆ ಮುಗಿಸಲು, ಟೈಂ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶ್ರೀ ಜಿ. ನಾರಾಯಣಕುಮಾರ್‌ರವರು ಐ.ಎ.ಎಸ್. ಅಧಿಕಾರಿಯ ಪರವಾಗಿ ಮಾತನಾಡುತ್ತಿದ್ದೀರಲ್ಲಾ, ಅವರ ಪರವಾಗಿ ಶಾಮೀಲಾಗಿದ್ದೀರಾ ಎಂದು ಕೇಳಿದರು, ಆ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಮತ್ತು ನಾವು ಮಾತನಾಡುವಾಗ ಅವರ ಪರವಾಗಿ ಮಾತನಾಡಬಾರದು ಎಂದು ಏನಾದರೂ ಇದೆಯೇ? ಅವರ ಪರವಾಗಿ ಏನಾದರೂ ಮಾತನಾಡಿದರೆ ಶಾಮೀಲಾಗಿದ್ದಾರೆ ಎಂದು ಹೇಳಬಹುದೇ? ಈ ಸದನದಲ್ಲಿ ಯಾರಾದರೂ, ಯಾರ ಪರವಾಗಿಯಾದರೂ ಮಾತನಾಡಬಹುದು. ಅದರಿಂದ ಶಾಮೀಲಾಗಿದ್ದಾರೆ ಅಂತ ಹೇಳುವುದು ಸರಿಯಲ್ಲ.

ಶ್ರೀ ಜಿ ನಾರಾಯಣಕುಮಾರ್.— ಕನ್ನಡದ ಗಂಧಲವವೇಶ ಇಲ್ಲದೇ ಇರತಕ್ಕಂಥಾ, ಕನ್ನಡ ದ್ರೋಹಿಯಾಗಿರತಕ್ಕಂಥ, ಕನ್ನಡದವರಿಗೆ ಕೆಲಸವನ್ನೇ ಕೊಡದೇ ಇರತಕ್ಕಂಥ ಅಧಿಕಾರಿ ಇಲ್ಲಿ ಇರುವುದು ಸರಿಯಲ್ಲ, ಅಂತಹವರ ಪರವಾಗಿ ಇವರು ಏತಕ್ಕೆ ವಹಿಸಿಕೊಂಡು ಮಾತನಾಡಬೇಕು?

(೮, ೧೦ ಜನರು ಎದ್ದು ಮಾತನಾಡಲು ಶುರು ಮಾಡಿದರು)

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಶ್ರೀ ಉಮರಬ್ಬನವರೇ ನಿಮಗೆ ಕೊಟ್ಟಿರುವ ಅವಕಾಶ ಮುಗಿದು ಹೋಗಿದೆ. ಬೇಗನೆ ಮುಗಿಸಿ.

ಶ್ರೀ ಬಿ.ಎ. ಉಮಾರಬ್ಬ.—ಕೊನೆಯದಾಗಿ ಹೇಳುವುದೇನೆಂದರೆ ಶ್ರೀಮಾನ್ ಜಿ. ನಾರಾಯಣಕುಮಾರ್‌ರವರೇ ಅಲ್ಲಿ ಕನ್ನಡದ ಕಾರ್ಮಿಕರು ಇಲ್ಲ ಎಂದು ಈ ರೀತಿಯಾಗಿ ಹೇಳಿ ಗೂಬೆ ಕೂರಿಸುವುದು ಸರಿಯಲ್ಲ. ಅಲ್ಲಿ ಕೆಲಸ ಮಾಡತಕ್ಕಂಥಾವರು ೧೦೦ಕ್ಕೆ ೯೦ರಷ್ಟು ಕನ್ನಡದವರೇ ಇದ್ದಾರೆ ತಿಳಿಯಿರಿ.

ಉಪಾಧ್ಯಕ್ಷರು.—ಹೀಗೆ ಮಧ್ಯೆ ಮಧ್ಯೆ ಎದ್ದು ಗಲಾಟೆ ಮಾಡಿದರೆ ನೀವು ಮಾತನಾಡಿದ್ದು ಯಾವುದೂ ಸಹ ರಿಕಾರ್ಡಿಗೆ ಹೋಗುವುದಿಲ್ಲ. ಉಮಾರಬ್ಬನವರೇ ಬೇಗನೆ ಮುಗಿಸಿ.

ಶ್ರೀ ಬಿ.ಎ. ಉಮಾರಬ್ಬ.—ಶ್ರೀಮಾನ್. ಜಿ. ನಾರಾಯಣಕುಮಾರ್‌ರವರಿಗೆ ಹೇಳುತ್ತೇನೆ. ನನ್ನ ಮಾತೃ ಭಾಷೆ ಕನ್ನಡ ಅಲ್ಲದೇ ಹೋದರೂ ಕೂಡ ನಾನು ವಿಶ್ವವಿದ್ಯಾನಿಲಯದಲ್ಲಿ ಮೇಜರ್ ಸಬ್ಜೆಕ್ಟ್ ಆಗಿ ಕನ್ನಡವನ್ನೇ ತೆಗೆದುಕೊಂಡು ಅಭ್ಯಾಸ ಮಾಡಿದ್ದೇನೆ. ಇದನ್ನು ತಿಳಿಯಬೇಕು. ಅದು ವಿಶ್ವವಿದ್ಯಾನಿಲಯದ ದಾಖಲೆಯಲ್ಲಿದೆ, ನೋಡಿ.

ಶ್ರೀ ಜಿ. ನಾರಾಯಣಕುಮಾರ್.—ನವ ಮಂಗಳೂರು ಬಂದರಿನ ಅಧ್ಯಕ್ಷರಿಗೆ, ಕನ್ನಡದ ಗಂಧವೇ ಇಲ್ಲ, ಅವರಿಗೆ ಕನ್ನಡವೇ ಬರುವುದಿಲ್ಲ,...

ಉಪಾಧ್ಯಕ್ಷರು.—ಮತ್ತೆ ಹೀಗೆ ಮಧ್ಯೆ ಮಧ್ಯೆ ಎದ್ದುನಿಂತುಕೊಂಡು ಗಲಾಟೆ ಮಾಡಿದರೆ ಮಾತನಾಡಿದ್ದು ಯಾವುದೂ ಸಹ ರಿಕಾರ್ಡ್‌ಗೆ ಹೋಗುವುದಿಲ್ಲ. ಶ್ರೀ ಉಮಾರಬ್ಬನವರೇ ಬೇಗನೆ ಮುಗಿಸಿ.

ಶ್ರೀ ಬಿ.ಎ ಉಮಾರಬ್ಬ.—ಮಧ್ಯೆ ಅವರು ಅಡ್ಡಿ ಮಾಡದೇ ಹೋಗಿದ್ದರೆ ನಾನು ಇಷ್ಟು ಹೊತ್ತಿಗೆ ಮುಗಿಸುತ್ತಿದ್ದೆ. ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಸರ್ಕಾರ ಎಲ್ಲಿಗಾದರೂ ಸಹ ತನ್ನ ಅಧಿಕಾರಿಯನ್ನು ನೇಮಕ ಮಾಡುವಾಗ ದಕ್ಷರಾದಂಥ ಅಧಿಕಾರಿಯನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಶೇಕಡ ೯೦ರಷ್ಟು ಅಧಿಕಾರಿಗಳು ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಖಾತೆಗಳಲ್ಲಿ ಏನು ಇದ್ದಾರೆ ಅವರು ಕನ್ನಡಿಗರಿಗಾಗಿಯೇ ದುಡಿಯುತ್ತಿದ್ದಾರೆ. ಅದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇನ್ನೊಂದು ವಿಷಯ ಹೇಳುವುದಾದರೆ ಕರ್ನಾಟಕದಲ್ಲಿ ಒಂದು ಬ್ಯಾಂಕ್ ಹುಟ್ಟಿದ್ದರೂ ಕೂಡ ಅದಕ್ಕೆ ಚೇರ್ಮನ್ ಆಗಿ ಹೊರಗಿನವರನ್ನೇ ಹಾಕುತ್ತಾರೆ ಯಾವಾಗಲೂ ಕೂಡ ಶ್ರೀ. ಜಿ. ನಾರಾಯಣಕುಮಾರ್‌ರವರು, ನಾವು ಮಾತನಾಡಿದಾಗಲೆಲ್ಲ ಕನ್ನಡ, ಕನ್ನಡ ಎಂದು ಹೇಳುತ್ತಾರಲ್ಲಾ ನಾಳೆ ದಿವಸ ಲೋಕಾಯುಕ್ತ ಅಧ್ಯಕ್ಷರನ್ನು ನೇಮಕ ಮಾಡುವಾಗ ಯಾವ ನ್ಯಾಯಾಧೀಶರನ್ನು ಕನ್ನಡ ನ್ಯಾಯಾಧೀಶರನ್ನು ನೇಮಕ ಮಾಡುತ್ತೀರಿ ಅನ್ನುವುದು ಗೊತ್ತಾಗುತ್ತದೆ. ಆವಾಗ ನಾನೇ ಛಾಲೇಂಜ್ ಮಾಡುತ್ತೇನೆ. ನೀವೇ ಈ ಸಭೆಯಿಂದ ಆವಾಗ ಓಡಿ ಹೋಗಬೇಕಾಗುತ್ತದೆ. ಇದಕ್ಕೆ ಯಾರು ಉತ್ತರ ಹೇಳುತ್ತಾರೋ ನೋಡುತ್ತೇನೆ. Let that issue come. That day will come very shortly. Let it go on record. I know.

MR. DEPUTY SPEAKER.—Please conclude

ಶ್ರೀ ಜಿ. ನಾರಾಯಣಕುಮಾರ್.—ಜನತಾ ಸರ್ಕಾರ ಬಂದಮೇಲೆ ವಾರ್ಷಿಕ ವರದಿಯನ್ನು ಕನ್ನಡದಲ್ಲಿ ಮುದ್ರಿಸಿರುವುದನ್ನು ತಾವು ಮರೆಯಬಾರದು.

ಶ್ರೀ ಬಿ. ಎ. ಉಮಾರಬ್ಬ.—ನನಗೆ ಕನ್ನಡದ ಬಗ್ಗೆ ಅಭಿಮಾನ ಇದೆ.

ಶ್ರೀ ಜಿ. ನಾರಾಯಣ ಕುಮಾರ್.—ಕೇವಲ ಒಬ್ಬ ಅಧಿಕಾರಿಯನ್ನು ಅವರು ಬೆಂಬಲಿಸುತ್ತಿದ್ದಾರೆ.

ಶ್ರೀ ಬಿ. ಎ. ಉಮಾರಬ್ಬ.—ಕನ್ನಡವನ್ನು ನಾನು ಪ್ರೀತಿಯಿಂದ ಅಭ್ಯಾಸ ಮಾಡಿದ್ದೇನೆ. ನಾನು ಮಾತನಾಡುವಾಗ ಪ್ರತಿ ಸಲ ಅಡ್ಡಿ ಆತಂಕ ಮಾಡಿದರೆ ಇದೇ ಏನು ಕನ್ನಡ ಜನರ ಸಂಸ್ಕೃತಿ ?

ಶ್ರೀ ಜಿ. ನಾರಾಯಣ ಕುಮಾರ್.—ಕನ್ನಡ ಚರಿತ್ರೆಯನ್ನು ಮೊದಲು ಓದಿಕೊಂಡು ಬಂದು ಮಾತನಾಡಿ. ಯಾರೋ ಒಬ್ಬ ಅಧಿಕಾರಿಗೋಸ್ಕರ ಮಾತನಾಡುತ್ತಿದ್ದಾರೆ, ನಿರುದ್ಯೋಗಿಗಳು ಸಂಕಟ ಪಡುತ್ತಿದ್ದಾರೆ.

ಉಪಾಧ್ಯಕ್ಷರು.—ನಿಮಗೆ ಬೇಕಾದರೆ ಕೇಳಿ, ಒಂದು ನಿಮಿಷ ಅವಕಾಶ ಕೊಡುತ್ತೇನೆ. ನೀವು ದಯಮಾಡಿ ಬೇಗ ಮುಗಿಸಿ.

ಶ್ರೀ ಬಿ. ಎ. ಉಮರಬ್ಬ.—ಎಲ್ಲಿಯವರೆಗೆ ಅವರು ಮುಗಿಸುವುದಿಲ್ಲವೋ ಅಲ್ಲಿಯವರೆಗೆ ನಾನು ಮುಗಿಸುವುದಿಲ್ಲ. ಮಂಗಳೂರು ಬಂದರಿನಲ್ಲಿ ಇರುವಂಥ ಟೆಂಟ ವಿಧ್ವಂಸಕ ಕೃತ್ಯಗಳಿಗೆ ಬಳಸುವಂಥ ಟೆಂಟಾಗಿ ಕಾರ್ಯಾಚರಣೆ ಮಾಡುತ್ತಿದೆ. ಪೋಲೀಸರು ನೇರವಾಗಿ ಪ್ರವೇಶಮಾಡಿ, ಅಲ್ಲಿ ನಡೆಯುವಂಥ ಚಟುವಟಿಕೆಗಳನ್ನು ಸ್ಥಗಿತಗೊಳಿಸತಕ್ಕ ಪ್ರಯತ್ನಮಾಡಿ, ವಿಧ್ವಂಸಕ ಕೃತ್ಯಗಳಿಗೆ ಒಂದು ಶಕ್ತಿಯಾಗಿ ಪೋಲೀಸರು ನಿಲ್ಲುವಂಥ ಪ್ರಯತ್ನಮಾಡಿ, ತಮಗೆ ಅಪ್ಪಣೆ ಇಲ್ಲದೇ ಇದ್ದರೂ ಸಹ ಒಳಗೆ ಹೋಗಿ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ್ದಾರೆ. ಇದನ್ನು ಸಿ. ಬಿ. ಐ. ಮೂಲಕವೇ ಸತ್ಯ ಹೊರಗೆ ತರಲಿಕ್ಕೆ ಅನುವು ಮಾಡಿಕೊಡಬೇಕು, ಎಲ್ಲಾ ವಿಚಾರವನ್ನೂ ಅದರಲ್ಲಿ ಸೇರಿಸಿ. ಖಂಡಿತವಾಗಿಯೂ ಮಾನ್ಯ ಗೃಹ ಸಚಿವರಿಗೆ ಇದರ ಬಗ್ಗೆ ಕಳಕಳಿ ಇದ್ದರೆ ಅವರು ಇದನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು. ಆಗ ಕರ್ನಾಟಕದಲ್ಲಿ ಸತ್ಯ ಹೊರಗೆ ಬರಲಿಕ್ಕೆ ಅವಕಾಶವಾಗುತ್ತದೆ ಎಂದು ಮತ್ತೊಮ್ಮೆ ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ನೋಡಿ ಇದು ಸಾಮಾನ್ಯವಾಗಿ ಒಂದು ಗಂಟೆಯಲ್ಲಿ ಚರ್ಚೆಯಾಗತಕ್ಕ ವಿಷಯ. ಇದಕ್ಕೆ ಈಗಾಗಲೇ 2 ಗಂಟೆ 20 ನಿಮಿಷ ಆಗಿದೆ. ಈಗ ಮಾತನಾಡುವವರು ಒಂದೊಂದು ನಿಮಿಷದಲ್ಲಿಯೇ ಮಾತನಾಡಿ. ಬಹಳ ವಿವರವಾಗಿ ಬೇರೆ ಬೇರೆ ವಿಷಯಗಳಿಗೆ ಹೋದರೆ ತೊಂದರೆಯಾಗುತ್ತದೆ ಈಗ ಕೆ. ಹೆಚ್. ಶ್ರೀನಿವಾಸ್‌ರವರು ಮಾತನಾಡಲಿ. ಆಮೇಲೆ ಮಾನ್ಯ ವೇದಾಂತ ಹೆಮ್ಮಿಗೆಯವರು, ಮಾನ್ಯ ಅಮರನಾಥ ಶೆಟ್ಟರು ಮಾತನಾಡುತ್ತಾರೆ. ಶ್ರೀನಿವಾಸ್‌ರವರೇ ಹೆಚ್ಚು ಕಾಲ ತೆಗೆದುಕೊಳ್ಳಬೇಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಅಧ್ಯಕ್ಷರೇ, ನಾನು ಅನಾವಶ್ಯಕವಾಗಿ ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಸಾಕಷ್ಟು ಸುದೀರ್ಘವಾಗಿ ಈ ವಿಚಾರ ಪ್ರಸ್ತಾಪವಾಗಿದೆ ಎನ್ನತಕ್ಕಂಥ ಅರಿವಿನಿಂದ ಕೆಲವು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ. ವಿಷಯವನ್ನು ಸೀಮಿತವಾಗಿ ಚರ್ಚೆ ಮಾಡಬೇಕು ಎನ್ನತಕ್ಕಂಥ ಮಾತು ಬಹಳ ಸಾರಿ ಪ್ರಸ್ತಾಪವಾಗಿದೆ. ನಾನು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ವಿಷಯಕ್ಕೆ ತನ್ನದೇಆದಂಥ ಸತ್ವ ಸಾಮರ್ಥ್ಯಗಳಿದ್ದಾಗ ನಾವು ಅದನ್ನು ಕೃತಕವಾಗಿ ಸೀಮೆಗಳನ್ನು ಸೃಷ್ಟಿ ಮಾಡುವುದು ಸಾಧ್ಯವಿಲ್ಲ. ಆ ವಿಷಯಕ್ಕೆ ಎಷ್ಟು ಯೋಗ್ಯತೆ ಇದೆಯೋ ಅಷ್ಟೆಲ್ಲವನ್ನೂ ವ್ಯಾಪಿಸಿಯೇ ವ್ಯಾಪಿಸುತ್ತದೆ ನಾವು ಎಷ್ಟೆ ಪ್ರಯತ್ನ ಪಟ್ಟರೂ ಕೂಡ. ಆದರೆ ಅನಾವಶ್ಯಕವಾಗಿ ಅತಿವ್ಯಾಪ್ತಿಯನ್ನು ಅದಕ್ಕೆ ಕಲ್ಪನೆ ಮಾಡಬೇಕು ಎನ್ನತಕ್ಕಂಥ ಯಾವುದೇ ಉದ್ದೇಶ ನಮಗೆ ಇಲ್ಲ. ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಬಂದರು ನಮ್ಮ ಕರ್ನಾಟಕ ರಾಜ್ಯಕ್ಕೆ ಅತ್ಯಂತ ಮಹತ್ವವಾದ ಒಂದು ಬಂದರು. ನಮ್ಮ ರಾಜ್ಯದ ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಅಭಿವೃದ್ಧಿ ಎಲ್ಲ ದೃಷ್ಟಿಯಿಂದ ರಾಜ್ಯಕ್ಕೆ ಕಣ್ಣಿನ ರೀತಿಯಲ್ಲಿರತಕ್ಕಂಥ ಒಂದು ಬಂದರು ಇದು. ಬಂದರು ಎನ್ನತಕ್ಕಂಥಾದ್ದು ಒಂದು ಮಹತ್ವವಾದ ಸಂಸ್ಥೆ. ಈ ಬಂದರಿನ ಅಭಿವೃದ್ಧಿಯಾದರೆ ಅದರ ಮೂಲಕವಾಗಿ ಅದರ ಮೇಲೆ ಅವಲಂಬನೆಯಾಗಿರತಕ್ಕ ಅನೇಕ ಅಭಿವೃದ್ಧಿ ವಿಷಯಗಳಿಗೆ ಪೂರಕವಾಗುತ್ತದೆ, ಅನುಕೂಲವಾಗುತ್ತದೆ. ಆದುದರಿಂದ ಈ ಒಂದು ಬಂದರು ಶ್ರೇಷ್ಠವಾವಸ್ಥೆಯಲ್ಲಿರಬೇಕಾದರೆ, ನಾವು ಅಲ್ಲಿ ಕೆಲವೊಂದು ವಿಚಾರಗಳ ಬಗ್ಗೆ ಬಹಳ ನಿಕಟವಾಗಿ ಗಮನವಿಟ್ಟು ಅಲ್ಲಿ ಒಂದು ಉತ್ತಮವಾದಂಥ ವಾತಾವರಣವನ್ನು ಕಾಪಾಡಿಕೊಂಡು ಬರದೇಹೋದರೆ ಮೊದಲಿನಿಂದಲೇ ಅದಕ್ಕೆ ಒಂದು ರೀತಿಯ ಬಾಲಗೃಹ ಪ್ರಾಪ್ತಿಯಾಗುವುದಕ್ಕೆ ಅವಕಾಶಮಾಡಿಕೊಟ್ಟರೆ ದೊಡ್ಡ ಅಪರಾಧ ಮಾಡಿದಹಾಗೆ ಆಗುತ್ತವೆ. ಅದು ಉದ್ದೇಶಪೂರ್ವಕವಾಗಿ ಇರಬಹುದು, ಅಥವಾ ಉದ್ದೇಶವಿಲ್ಲದೇ ಇರಬಹುದು, ನಾವು ಸಾಕಷ್ಟು ಗಮನ ಹರಿಸುವುದಕ್ಕೆ ಅವಕಾಶವಾಗಿದೇ ಇರಬಹುದು ಅಥವಾ ಇನ್ಯಾವುದೋ ಮತ್ತೊಂದು ಸಹಜವಾದ ಕಾರಣವಿರಬಹುದು ಅಥವಾ ನಮಗೆ ದುರುದ್ದೇಶ ಇರಬಹುದು, ಯಾವುದೇ ಕಾರಣಕ್ಕೆ ಬಂದರಿನಂಥ ಒಂದು ಸಾಂಸ್ಥಿಕ ಒಂದು ಉತ್ತಮವಾದಂಥ ವಾತಾವರಣವನ್ನು ಕಾಪಾಡಿಕೊಂಡು ಬರುವುದರಲ್ಲಿ ತಪ್ಪನ್ನು ಲೇಪಮಾಡಿ, ಅದು ಶ್ರೇಷ್ಠವಾವಸ್ಥೆಯಲ್ಲಿರಬೇಕಾದರೆ ಬಾಲಗ್ರಹ ಬರುವ ರೀತಿಯಲ್ಲಿ ಮಾಡಿಕೊಂಡರೆ ನಾವು ಐತಿಹಾಸಿಕವಾಗಿ ದೊಡ್ಡ ಅಪರಾಧ ಮಾಡಿದಹಾಗೆ ಆಗುತ್ತದೆ. ಹತ್ತಾರುವರ್ಷಗಳ ಕಾಲ ಬಂದರಿಗೆ ಕೆಟ್ಟ ಲೇಪ ಆಗಿಬಿಟ್ಟರೆ ಅದನ್ನು ಹೋಗಲಾಡಿಸುವುದು ಅಷ್ಟು ಸುಲಭವಾದಂಥ ವಿಚಾರವಲ್ಲ. ಈ ಒಂದು ಹಿಂಪರದೆಯನ್ನು ಮರೆತು. ಇದಕ್ಕೆ ಬೇರೆ ಬೇರೆ ಕಾವನ್ನು ಹುಟ್ಟಿಸಿಕೊಂಡು

ವಿಷಯದ ಅಂತರ್ಗತವಾದಂಥ ಸಮಸ್ಯೆ ಏನಿದೆ ಅದನ್ನ ನಾವು ಮುಟ್ಟದೆ ನಮ್ಮನ್ನು ನಾವು ವಂಚಿಸಿ ಕೊಳ್ಳತಕ್ಕಂಥಾದ್ದು ಸರಿಯಲ್ಲ. ಇವತ್ತು ಪ್ರಶ್ನೆ ಏನಿದೆ ಎಂದರೆ, ಅಲ್ಲಿ ನಡೆಯುತಕ್ಕಂಥ ಘಟನೆಯಿಂದ ಬಂದರಿನ ಕಾರ್ಯ ಸ್ಥಗಿತವಾಗಿದೆ. ಬಂದರಿಗೆ ಕೆಟ್ಟ ಹೆಸರು ಬರುತ್ತಿದೆ, ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡುವುದು ಅಸಾಧ್ಯವಾಗಿದೆ ಎನ್ನುವುದನ್ನ ಸರ್ಕಾರ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ೫೯ ದಿವಸಗಳ ಕಾಲ ಬಂದರು ಕಾರ್ಯ ನಿರ್ವಹಿಸುವುದಕ್ಕೆ ಸಾಧ್ಯವಾಗದೇ ಇರುವಂಥ ಪರಿಸ್ಥಿತಿ ಆಯಿತು. ಯಾವುದೇ ಕಾರ್ಮಿಕರ ವಿವಾದಗಳಿಗೆ ಮಹತ್ವರವಾದಂಥ ಒಂದು ಆಂದೋಳನವೇ ಆಗಿಬಿಟ್ಟು ಬಂದರು ಸ್ಥಗಿತಗೊಂಡರೆ ಅದು ಸಹಜ ಕಾರಣ ಎಂದು ಹೇಳಬಹುದಾಗಿತ್ತು. ನಿಜವಾಗಿ ಹೇಳುವುದಾದರೆ, ನಿಷ್ಕಾರಣವಾಗಿ ೫೯ ದಿವಸ ಬಂದರು ನಿಂತಿತು ಅಂದರೆ ಅದನ್ನು ಲಘುವಾಗಿ ಎಣಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ನಿಜವಾಗಿ ಗಂಭೀರವಾದಂಥ ಕಾರಣಗಳಿಲ್ಲ. ಇವತ್ತು ಸರ್ಕಾರದ ಕೈಯಲ್ಲಿ ೫೯ ದಿವಸಗಳ ಕಾಲ ಬಂದರು ಕೆಲಸಮಾಡದೇ ಸ್ಥಗಿತಗೊಳ್ಳುವುದಕ್ಕೆ ಗಂಭೀರವಾದ ಕಾರಣಗಳಿತ್ತು ಅಂದರೆ ಯೋಚನೆ ಮಾಡಬಹುದಾಗಿತ್ತು. ಇವತ್ತು ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅದರ ಆಯಾಮಗಳನ್ನೂ ಕೂಡ ನಾವು ವಿಶ್ಲೇಷಣೆ ಮಾಡಲೇಬೇಕು. ಅಕಸ್ಮಾತ್ ಅದಕ್ಕೆ ರಾಜಕೀಯ ಕಾರಣಗಳಿದ್ದರೆ ಅದನ್ನು ಮಾತನಾಡಬಹುದು, ಮಾತನಾಡುವುದರಿಂದ ತಲೆ ಹೋಗುವುದಿಲ್ಲ. ರಾಜಕೀಯ ಅಂದರೆ ಮಾತನಾಡಬಾರದು ಎನ್ನುವ ಭಾವನೆ ಸರಿಯಲ್ಲ. ಅಥವಾ ರಾಜಕೀಯ ಮಾಡುವುದು ತಪ್ಪು ಎಂದು ಹೇಳುವುದಿಲ್ಲ ಅಕಸ್ಮಾತ್ ಜನತಾಪಕ್ಷ ತನ್ನ ಬೆಂಬಲದ ಕಾರ್ಮಿಕರ ಸಂಘಟನೆಯನ್ನು ಬಲಪಡಿಸಿಕೊಳ್ಳಬೇಕು ಅಂದರೆ ಅದು ತಪ್ಪು ಎಂದು ಹೇಳುವುದಿಲ್ಲ. ಅದಕ್ಕೆ ಮಾರ್ಗಗಳಿವೆ, ಇತಿಮಿತಿಗಳಿವೆ. ಇಲ್ಲಿ ಪ್ರಶ್ನೆ ಏನೆಂದರೆ, ನಾವೆಲ್ಲಾ ರಾಜಕಾರಣದ ಒಂದು ಬಲದಿಂದಲೇ ಇಲ್ಲಿ ಬಂದಿದ್ದೇವೆ. ಕೆಲವರು ಇನ್ನು ಬೇರೆ ಬೇರೆ ಬಲದಿಂದ ಬಂದಿರಬಹುದು. ಮಾನ್ಯ ವೇಂದಾತ ಹೆಮ್ಮಿಗೆಯವರ ಕತೆ ಗೊತ್ತಿಲ್ಲ. ಅವರು ರಾಜಕಾರಣದ ಬಲದಿಂದ ಬಂದಿಲ್ಲ. ಆದರೆ ರಾಜಕಾರಣದ ಆಯಾಮಗಳನ್ನು ಎಷ್ಟರಮಟ್ಟಿಗೆ ಪಾಲಿಸಬೇಕು ಎನ್ನುವುದು ಮುಖ್ಯ. ನಿಮಗೆ ಬೆಂಬಲವಾಗಿರತಕ್ಕ ಕಾರ್ಮಿಕರ ಸಂಘಟನೆಗೆ ಸಂಬಂಧಪಟ್ಟಹಾಗೆ ಹೇಳಿದರೆ ಆ ಮಾತಿಗೆ ಬೆಂಬಲ ಕೊಡಬಾರದು ಎಂದು ಹೇಳುವುದಿಲ್ಲ. ಅದಕ್ಕೆ ಒಂದು ಸರ್ಕಾರವಾಗಿ ಆಡಳಿತ ನಡೆಸಬೇಕಾದರೆ.

ಮುಖ್ಯ ಮಂತ್ರಿಗಳು ಈ ಕಾಗದವನ್ನು ಅಂಚೆ ಗುಮಾಸ್ತರ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದಕ್ಕಿಂತ ಮುಂಚಿತವಾಗಿ ಮುಖ್ಯ ಮಂತ್ರಿಗಳಿಗೆ ಅದನ್ನೆಲ್ಲಾ ಪರಾಮರ್ಶಿಸತಕ್ಕಂಥ ಎಲ್ಲಾ ಅಧಿಕಾರ ಇದೆ. ಪರಾಮರ್ಶಿಸಿ ಅವರು ನನಗೆ ಹೀಗೆ ಅವಶ್ಯಕವೆಂದು ಕಂಡಿದೆ, ಅದಕ್ಕೋಸ್ಕರವಾಗಿ ಬರೆದಿದ್ದೇನೆ ಎಂದು ತಿಳಿಸಿದ್ದರೆ ಖಂಡಿತವಾಗಿಯೂ ನಾನು ಆಪಾದನೆ ಮಾಡುತ್ತಿರಲಿಲ್ಲ. ಆದರೆ ಯಾರೋ ಒಬ್ಬರು ಬಂದು ಹೇಳಿದರು ಎಂದು ತಾವು ತಕ್ಷಣವೇ ಸರ್ಕಾರದಲ್ಲಿ ಕುಳಿತಿರತಕ್ಕಂಥ ಜನ, ಸರ್ಕಾರದ ಜವಾಬ್ದಾರಿಯನ್ನು ಮರೆಯತಕ್ಕಂಥದು ಸಾಧ್ಯವಿಲ್ಲ ಇವತ್ತು ಒಬ್ಬ ಅಧಿಕಾರಿಯನ್ನು ಅವನು ಇರಬಾರದು ಎಂದು ನಿಮಗೆ ಇರಬಹುದು; ಅಥವಾ ಬೇರೆಯವರು ಬರಬೇಕು ಎಂದು ಇರಬಹುದು. ನಾನಾ ಕಾರಣ ಇರಬಹುದು, ಅದು ಬೇರೆ ವಿಚಾರ. ಅದರ ಬಗ್ಗೆ ನೀವು ಕೇಂದ್ರ ಸರ್ಕಾರದ ಜೊತೆ ಪ್ರಯತ್ನ ಮಾಡಿ ಬೇಕಾದಷ್ಟು ವ್ಯವಹಾರ ಮಾಡಿ ಬೇಡ ಎಂದು ಹೇಳುವುದಿಲ್ಲ. ಎಲ್ಲಿಯವರೆಗೆ ಅವರು ಬಂದರಿನ ಅಧ್ಯಕ್ಷರಾಗಿರುತ್ತಾರೋ, ಅಲ್ಲಿಯವರೆಗೆ ನಿಮ್ಮ ಪೊಲೀಸರ ರಕ್ಷಣೆ ಅವನಿಗೆ ಕೊಡಬೇಕು. ಅವನಿಗೆ ನೀವು ಪೋಲೀಸ್ ರಕ್ಷಣೆಯನ್ನು ಕೊಡದೆ ಅವನ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿ ಸರ್ಕಾರ ಪ್ರತ್ಯಕ್ಷವಾಗಿಯೋ ಆಗಲೀ, ಪರೋಕ್ಷವಾಗಿಯೋ ಆಗಲೀ, ತಿಳಿದೋ ತಿಳಿಯದೋ ಕಾರಣಕರ್ತರಾಗಿದ್ದರೆ ಆ ಸರ್ಕಾರವನ್ನು ನಾವು ಎಚ್ಚರಿಸಬೇಕಾದಂತಹ ಕರ್ತವ್ಯ ಇದೆ, ನನಗೆ ಗೊತ್ತಿದ್ದ ಮಟ್ಟಿಗೆ ನಮ್ಮ ಪೋಲೀಸರು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಎಂದು ಹೇಳಿ ಭಿನ್ನಭೇದ ಎಣಿಸಿ ಸಹಜವಾಗಿ ಕೆಲಸ ಮಾಡುವುದಿಲ್ಲ. ಯಾವಾಗ ಮಾಡುತ್ತಾರೆ ಎಂದರೆ ಯಾವಾಗ ರಾಜ್ಯ ಸರ್ಕಾರದ ಕಡೆಯಿಂದ ಒತ್ತಡಗಳು ಬರುತ್ತದೆ, ಆಗ ಮಾಡುತ್ತಾರೆ. You have to take it with a pinch of salt. ಅದು ತಪ್ಪು ಎಂದು ಕಂಡರೂ ಕೂಡ ರಾಜ್ಯ ಸರ್ಕಾರದ ಪರವಾಗಿ ಯಾರಾದರೂ ಒತ್ತಡಗಳನ್ನು ತಂದಾಗ ಮಾತ್ರ ಇಂಥ ಚಟುವಟಿಕೆಗಳು ಆಗುತ್ತದೆ. ಇಲ್ಲಿ ಆಗಿರುವುದು ಏನು? ರಕ್ಷಣೆ ಕೊಡುವ ವಿಚಾರ. ನಾವು ಅಲ್ಲಿ ರಕ್ಷಣೆ ಕೊಡುವುದಕ್ಕಾಗುವುದಿಲ್ಲ, ಹೇಗೆ ಎಂದರೆ ತೀರ್ಮಾನ ಇಲ್ಲದೆ ಹೋಗುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ. ಅರ್ಧ ರಾತ್ರಿಯಲ್ಲಿ ಸುರಕ್ಷಿತ ಪ್ರದೇಶಕ್ಕೆ ಯಾರು

ಅಲ್ಲಿಗೆ ಪ್ರವೇಶ ಮಾಡುವುದಕ್ಕೆ ಅಧಿಕಾರ ಇರುವುದಿಲ್ಲ, ಪೋಲೀಸರಿಗೆ ಮೊದಲನೆಯದಾಗಿ ಅಧಿಕಾರ ಇಲ್ಲ. ಅವರು ಪ್ರವೇಶ ಮಾಡುವುದು ಅಷ್ಟೆ ಅಲ್ಲದೆ ಯಾರು ಅನೇಕ ಕಾರಣಗಳಿಗೋಸ್ಕರವಾಗಿ ಅಲ್ಲಿಗೆ ಬರುವುದಕ್ಕೆ ಸಾಧ್ಯ ಇಲ್ಲದೇ ನಿರ್ಬಂಧ ರೀತಿಯಲ್ಲಿ ಆರೋಪಕ್ಕೆ ಗುರಿಯಾಗಿದ್ದರು, ಅಂಥ ವ್ಯಕ್ತಿಯ ಜೊತೆ ಪೋಲೀಸರು ನುಗ್ಗಿ ಈ ರೀತಿಯಾಗಿ ಕಾರ್ಯಾಚರಣೆ ಮಾಡಿದ್ದಾರೆ. ಪೋಲೀಸ್ ಅಧಿಕಾರಿಗಿಂತ ಮೇಲ್ಪಟ್ಟದ ಅಧಿಕಾರಿಗಳನ್ನು ಹೊಡೆದು ಬಡೆದು ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋದರೆ ಲಘುವಾಗಿ ವಿವೇಚನೆ ಮಾಡುವುದಕ್ಕೆ ಸಾಧ್ಯ ಇದೆಯೇ! ಇವತ್ತು ನಾನು ಕೇಳುತ್ತಿರತಕ್ಕಂಥದ್ದು ಇಷ್ಟೆ ಈ ಅಧಿಕಾರಿಗೆ ವೈಯುಕ್ತಿಕ ರಕ್ಷಣೆ ಕೊಡುವ ಪ್ರಶ್ನೆ ಅಷ್ಟೇ ಅಲ್ಲ. ಒಂದು ಬಂದರಿನ ಅಧ್ಯಕ್ಷನಿಗೆ ರಕ್ಷಣೆ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಕೇವಲ ಅವನ ಜೀವಕ್ಕೆ ರಕ್ಷಣೆ ಕೊಡಬೇಕು ಎನ್ನುವ ದೃಷ್ಟಿಯಿಂದ ಅಲ್ಲ. ಆ ಬಂದರಿನ ಸುವ್ಯವಸ್ಥೆಗೂ ರಕ್ಷಣೆ ಮಾಡಬೇಕಾದಂಥ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ನನಗೇನೂ ಬಹಳ ನಿಕಟವಾಗಿ ವಿಚಾರಗಳು ಗೊತ್ತಿಲ್ಲ. ಏಕೆಂದರೆ ನಾನು ಮಂಗಳೂರಿನಿಂದ ಬರತಕ್ಕಂಥವನಲ್ಲ. ಇದನ್ನು ಓದಿ ಕೇಳಿ ವಿಚಾರಗಳು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ಮನಸ್ಸಿಗೆ ಬಂದಿದೆ. ಅದರ ಆಧಾರದ ಮೇಲೆ ಮಾತನಾಡುತ್ತಿದ್ದೇನೆ. ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಮಾನ್ಯ ಕಂದಾಯ ಸಚಿವರಾದಂತಹ ಬೊಮ್ಮಾಯಿಯವರು ಈಗ ಇಲ್ಲ, ಅವರಿಗೆ ಬಹಳ ವಿಶ್ರಾಂತಿ ಅಗತ್ಯ ಎಂದು ಕಾಣುತ್ತದೆ: ಬಹುಶಃ ಅವರು ಹೋಗಿದ್ದಾರೆ. ಆದರೆ ಅವರು ಒಂದು ದೃಷ್ಟಿಯಿಂದ ನೋಡಿದಾಗ ತಾಳ್ಮೆ ಇರತಕ್ಕಂಥವರು, ಇನ್ನೊಂದು ದೃಷ್ಟಿಯಿಂದ ನೋಡಿದಾಗ ಸಾಕಷ್ಟು ಜಾಣತನವೂ ಇರತಕ್ಕಂಥವರು. ಕೊನೆಗೆ ಅವರು ತಾಳ್ಮೆಯನ್ನು ಕಳೆದುಕೊಂಡರು, ಕೆಲವು ಹೆಡ್ಡತನಗಳನ್ನು ಮಾಡಿದರು; ಎಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. "ಬೆಕ್ಕನ್ನು ಗೋಣಿ ಚೀಲದಲ್ಲಿ ಹಾಕಿ ಇಟ್ಟಿದ್ದನ್ನು ಮಾನ್ಯ ಬೊಮ್ಮಾಯಿಯವರು ಬೆಕ್ಕನ್ನು ಗೋಣಿ ಚೀಲದಿಂದ ಹೊರಕ್ಕೆ ತೆಗೆದ ಹಾಗೆ ಮಾಡಿದ್ದಾರೆ. Letout cats out of the Bag ಆ ರೀತಿ ಮಾಡಿದ್ದಾರೆ ಎಂದು ಅವರು ಮಾತನಾಡಿದಾಗ ನನಗನ್ನಿಸುತ್ತದೆ.

ಈ ಸರ್ಕಾರದ ಮಟ್ಟದಲ್ಲಿ ಈ ಬಂದರಿನ ಅಧ್ಯಕ್ಷರ ಮೇಲೆ ಏನೋ ಒಂದು ಪೂರ್ವಗ್ರಹ ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಬೊಮ್ಮಾಯಿಯವರ ಮಾತಿನಿಂದ, ಅವರ ಉದ್ವೇಗದಿಂದ, ಅವರ ಒಂದು ವಾದವಿವಾದಗಳನ್ನು ಪದೇ ಪದೇ ಏನೇ ಮಂಡಿಸಿದರೂ, ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸರ್ಕಾರದ ಮಟ್ಟದಲ್ಲಿ ಕೆಲವರಿಗೆ ಅಲ್ಲಿರತಕ್ಕಂಥ ಈ ಬಂದರಿನ ಅಧ್ಯಕ್ಷರ ಮೇಲೆ ಪೂರ್ವಗ್ರಹ ಇದೆ. ಪೂರ್ವಗ್ರಹ ಇದ್ದರೆ ಇಟ್ಟುಕೊಳ್ಳಿ. ಇದರಲ್ಲಿ ನಮ್ಮದೇನೂ ಅಭ್ಯಂತರ ಇಲ್ಲ. ಇದು ಸಾಧಾರಣವಾದುದು, ನಿರಾಧಾರವಾದುದು ಇರಬಹುದು. ಆದರೆ ಇದನ್ನು ನೀವು ಸಾಧನೆ ಮಾಡತಕ್ಕಂಥ ಕ್ರಮ ಏನು? ಬಂದರಿನಲ್ಲಿ ಅಧ್ಯಕ್ಷರು ಕಾರ್ಯ ನಿರ್ವಹಣೆ ಮಾಡದೆ ಇರತಕ್ಕಂಥ ವ್ಯೂಹ ರಚನೆ ಮಾಡಿ. ಆ ರಚನೆ ಆಗುವುದಕ್ಕೆ ಇದರಲ್ಲಿ ನಮ್ಮ ಉದ್ದೇಶವೂ ಸಾಧನೆಯಾಗಲಿ ಎಂಬ ಪ್ರೋತ್ಸಾಹವನ್ನು ಕೊಟ್ಟು ಮಾಡಿದರೆ ಅಕ್ಷಮ್ಯವಾದಂತಹ ಅಪರಾಧವಾಗುತ್ತದೆ. ಸರ್ಕಾರ, ಸರ್ಕಾರದ ಮಂತ್ರಿ ಯಾವುದೇ ರೀತಿಯ ತಿಂಗಡಣೆಯನ್ನು ನಾವು ಮಾಡುವುದಿಲ್ಲ ಎನ್ನತಕ್ಕಂಥದ್ದನ್ನು ಸ್ಪಷ್ಟ ರೀತಿಯಲ್ಲಿ ಸದಾ ಕಾಲವೂ ತೋರಿಸಬೇಕಾದಂತಹ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲೆ ಇದೆ. ಕೇಂದ್ರ ಸರ್ಕಾರದ ಮೇಲೆಯೂ ಇದೆ. ರಾಜ್ಯ ಸರ್ಕಾರಗಳು ಆ ರೀತಿ ವರ್ತನೆ ಮಾಡಿ. ಇದರಲ್ಲಿ ಪೋಲೀಸ್‌ನವರ ಒಂದು ವ್ಯವಸ್ಥೆಯನ್ನು ಇಂತಹ ಸಾಮರಸ್ಯವನ್ನು ದುರ್ಬಲಗೊಳಿಸತಕ್ಕಂಥ ವಿಚಾರಕ್ಕೆ ಪೋಷಕವಾಗಿ ಬಳಸಿಕೊಂಡರೆ ಬಹಳ ದೊಡ್ಡ ಅಪರಾಧವನ್ನು ಮಾಡಿದ ಹಾಗೆ ಆಗುತ್ತದೆ. ಈಗ ಮಾನ್ಯ ಶ್ರೀ ಬೊಮ್ಮಾಯಿಯವರು ಮಾತನಾಡಿದ ಮೇಲೆ ನನಗನ್ನಿಸುತ್ತದೆ. ಇದರಲ್ಲಿ ಕಾರ್ಮಿಕರ ವಿವಾದ ಇಲ್ಲ. ಇದರಲ್ಲಿ ಬರೀ ಪೋಲೀಸರ ಪ್ರಶ್ನೆ ಇಲ್ಲ, ನನಗೆ ಸ್ಪಷ್ಟವಾಗಿ, ಪ್ರಾಮಾಣಿಕವಾಗಿ ನನ್ನ ಆತ್ಮಕ್ಕೆ ಅನಿಸುತ್ತದೆ, ಇದೆಲ್ಲಾ ಈ ಬಂದರಿನ ಅಧ್ಯಕ್ಷರನ್ನು ಇಲ್ಲಿಂದ ಉಚ್ಚಾಟಿಸುವುದಕ್ಕೆ ಮಾಡಿರತಕ್ಕಂಥ ವ್ಯೂಹದ ಫಲವೇ ಆಗಿದೆ. ಒಂದು ತಂತ್ರದ ಫಲ ಎಂದು ನೇರವಾಗಿ ಆಪಾದನೆಯನ್ನು ನಾನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಏಕೆಂದರೆ ಇಷ್ಟೆಲ್ಲಾ ನಾನು ಗಮನಿಸಿದಾಗ ಸ್ಪಷ್ಟವಾಗಿ ಅನಿಸುತ್ತದೆ, ಈ ಅಧಿಕಾರಿಯನ್ನು ಕಳಿಸುವುದಕ್ಕೆ ನಡೆದಿರತಕ್ಕಂಥದ್ದು ಇದು. ಒಬ್ಬನನ್ನು ಹೊಡೆಯುವುದಕ್ಕೆ ಯಾವ ಬೆತ್ತವಾದರೂ ಸರಿ ಎಂದು ಆಂಗ್ಲ ಭಾಷೆಯಲ್ಲಿ ಹೇಳುತ್ತಾರೆ. ಯಾರೋ ಒಬ್ಬನು ಇಲ್ಲಿಂದ ಮೊದಲು ತೊಲಗಲಿ ಎಂದು ಇಲ್ಲಿ ಕಾರ್ಯ ನಡೆಯುತ್ತಿದೆ, ಇದು ಸರಿಯಲ್ಲ. ಇನ್ನು ಪರಿಶಿಷ್ಟ ಜಾತಿಗೆ ಸೇರಿರತಕ್ಕಂಥ ವಿಚಾರ. ಇದುವರೆಗೂ ಅದು ಅಪ್ರಕೃತ ಎಂದು ಹೇಳಿ ಮಾನ್ಯ ಶ್ರೀ ರಾಚಯ್ಯನವರು ಅಪ್ಪಣೆ ಕೊಡಿಸಿದ್ದು ನೋಡಿದರೆ ಬಹಳ ವಿಷಾದಪಡಬೇಕಾಗಿದೆ.

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆ ಬಂದಿರಲಿಲ್ಲ. ಈ ಚರ್ಚೆ ಶುರುವಾದ ಮೇಲೆ ಪರಿಶಿಷ್ಟ ಜಾತಿ ಎಂದು ಶುರು ಮಾಡಿರುವುದು ನೋಡಿದರೆ............

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇವತ್ತು ಬೆಳಿಗ್ಗೆ 10 ಗಂಟೆಯಿಂದ ಪ್ರಾರಂಭವಾಗಿರತಕ್ಕಂಥದ್ದು, ಸುಮಾರು ಎಂಟೂವರೆ ಗಂಟೆ ಆಯಿತು. ಶ್ರೀಮಾನ್ ವೀರಪ್ಪ ಮೊಯಿಲಿಯವರು ಎರಡು ಗಂಟೆ ಚರ್ಚೆ ಮಾಡಿ ಎಲ್ಲ ವಿಷಯವನ್ನು ಬಹಳ ಸೊಗಸಾಗಿ ಒಳ್ಳೆಯ ರೀತಿಯಲ್ಲಿ ಬಹಳ ಚೆನ್ನಾಗಿ ಸಭೆಯ ಮುಂದೆ ಇಟ್ಟಿದ್ದಾರೆ. ಮತ್ತೆ ಅಲ್ಲಿಗೆ ಸಂಬಂಧಪಟ್ಟ ಸನ್ಮಾನ್ಯ ಉಮರಬ್ಬನವರು ಸಹಾ ಮಾತನಾಡಿದ್ದಾರೆ. ಈ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು 20 ನಿಮಿಷಗಳು ಮಾತನಾಡಿದ್ದಾರೆ. ಅವರು ಹೇಳತಕ್ಕಂಥದ್ದರಲ್ಲಿ ಯಾವೊಂದು ಹೊಸ ವಿಷಯವೂ ಇಲ್ಲ. ಒಳ್ಳೆ ಒಳ್ಳೆಯ ಶಬ್ದಗಳನ್ನು ಮಾತ್ರ ಉಪಯೋಗಿಸುತ್ತಿದ್ದಾರೆ. ಗೋಪುರ ಕಟ್ಟುತ್ತಿದ್ದಾರೆ. ಹೊಸದಾಗಿ ಏನನ್ನೂ ಹೇಳುತ್ತಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರು ಏನು ವಿಷಯ ಹೇಳಬೇಕೋ ಅದನ್ನು ಹೇಳಿಬಿಟ್ಟರೆ ನಮಗೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ನಾವು ಬರೀ ಗೋಪುರ ಕಟ್ಟಿ ಪೂರ್ತಿ ಮುಗಿಸಿದ ಮೇಲೆ ಕಳಸ ಇಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಈಗ ವೀರಪ್ಪ ಮೊಯಿಲಿಯವರ ಮಾತು ಸಹನೆಯಿಂದ ತಾಳ್ಮೆಯಿಂದ ಕೇಳಿಬಿಟ್ಟಿದ್ದರೆ ನಾವು ಯಾರು ಮಾತನಾಡುತ್ತಾ ಇರಲಿಲ್ಲ. ಅನೇಕ ಗೊಂದಲದ ಸುಳಿಯಲ್ಲಿ ಸಿಕ್ಕಿದ್ದರಿಂದ ತಾತ್ಪರ್ಯವನ್ನು ಕೊಡಬೇಕಾಯಿತು. ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿರತಕ್ಕಂಥ ಮಾತಿನ ತಾತ್ಪರ್ಯವನ್ನು ನಿಮಗೆ ಸುಲಭ ಸಾಧ್ಯವಾಗಲಿ ಎಂದು ಕೊಡುತ್ತಿದ್ದೇನೆ.

ಪರಿಶಿಷ್ಟ ಜಾತಿಯ ಅಧಿಕಾರಿ ಎಂದು ಹೇಳಿದರೆ ಅದರ ಬಗ್ಗೆ ಮಾನ್ಯ ಶ್ರೀ ರಾಚಯ್ಯನವರು ಒಂದು ರೀತಿಯ ಮನಸ್ಸಿನ ಆತಂಕ ವ್ಯಕ್ತಪಡಿಸುವ ಅವಶ್ಯಕತೆ ಇಲ್ಲ. ಅವರ ಮೇಲೆ ಗೂಬೆ ಕೂರಿಸುವ ಯೋಚನೆ ಇಲ್ಲ. ಯಾವಾಗಲೂ ಈ ರಾಜ್ಯದಲ್ಲಿರತಕ್ಕಂಥ ರಾಷ್ಟ್ರದಲ್ಲಿರತಕ್ಕಂಥ ಒಂದು ವಿಚಾರವನ್ನು ನಾವು ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು. ಪರಿಶಿಷ್ಟ ಜಾತಿಗೆ ಸೇರಿರತಕ್ಕಂಥ ಅಧಿಕಾರಿಗಳ ವಿರುದ್ಧವಾಗಿ ಯಾವಾಗಲೂ ಕೂಡ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಆ ಆಯಾಮಗಳನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಕೆಲವು ಸಂದರ್ಭದಲ್ಲಿ ಮಾಡಿದ್ದರೆ, ಇನ್ನು ಕೆಲವು ಸಂದರ್ಭದಲ್ಲಿ ಮಾಡಿಲ್ಲದೇ ಇರಬಹುದು. ಎಷ್ಟೋ ಸಂದರ್ಭದಲ್ಲಿ ಬಹಳ ಪ್ರಾಬಲ್ಯ ಇರತಕ್ಕಂಥ ಒಬ್ಬ ಅಧಿಕಾರಿಗೆ ಅವನು ಏನು ಮಾಡಿದರೂ ಜೀರ್ಣಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇದೆಯೇ? ಪರಿಶಿಷ್ಟ ಜಾತಿಗೆ ಸೇರಿಸತಕ್ಕಂಥವರಿಗೆ ಅನೇಕ ರೀತಿಯ ಆರೋಪಗಳು ಬರಬಹುದು. ಆರೋಪಗಳನ್ನು ಸುಲಭವಾಗಿ ಮಾಡತಕ್ಕಂಥ ಸಂಪ್ರದಾಯ ಇದೆ. ಆದ್ದರಿಂದ, ಆ ಒಂದು ಆಳತೆಯನ್ನು ನಾವು ಮರೆಯಬಾರದು. ಕೆಲವು ಕಡೆಗಳಿಗೆ ಐ.ಎ.ಎಸ್. ಅಧಿಕಾರಿಗಳೇ ಬರಬೇಕು ಎಂಬ ಒಂದು ಹುಚ್ಚು ಇದೆ. ಐ.ಎ.ಎಸ್. ನಲ್ಲಿ ಅನೇಕ ಪ್ರತಿಭಾವಂತರು ಇದ್ದಾರೆ ಇಲ್ಲ ಎಂದು ಹೇಳುವುದಿಲ್ಲ. ಐ. ಎ. ಎಸ್. ಅಂದರೆ ಆಕಾಶದಿಂದ ಕೆಳಗಡೆ ಇಳಿದು ಬಂದಿದ್ದಾರೇನು? ಯಾವುದಕ್ಕೆ ಬೇಕಾದರೂ ಐ.ಎ.ಎಸ್. ಅಧಿಕಾರಿಗಳನ್ನೇ ಹಾಕಿದರೆ ಒಳ್ಳೆಯದೇ? ನಮ್ಮ ದೇಶದಲ್ಲಿ ಟೆಕ್ನೋಕ್ರಾಟ್ಸ್ ಇರಬಾರದೆಂದು ಇದೊಂದು ಲಾಬಿ ಇದೆ. ಈ ದಿಶೆಯಲ್ಲಿ ಯಾವುದೇ ಕೈಗಾರಿಕೆ ಇರಲಿ, ಪ್ರಮುಖವಾಗಿ ಐ.ಎ.ಎಸ್. ಅಧಿಕಾರಿಗಳೇ ಇರಬೇಕು. ಐ.ಪಿ.ಎಸ್. ಇದ್ದರೂ ಸಹಿಸುವುದಿಲ್ಲ. ಕೆಲವು ಐ.ಪಿ.ಎಸ್. ಗಳಿಗೆ ಜಾಗ ಕೊಟ್ಟಿದ್ದೇವೆ. ಅವರ ಬಗ್ಗೆಯೂ ಪಿತೂರಿ ಇದೆ. ಆದುದರಿಂದ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವನ್ನು ಸರ್ಕಾರ ಗಮನಿಸಬೇಕು. ಇದರ ಬಗ್ಗೆ ಮಾನ್ಯ ರಾಚಯ್ಯನವರು ಗೃಹ ಮಂತ್ರಿಗಳಾಗಿದ್ದು ಗಮನಿಸಲಾಗುವುದಿಲ್ಲ. ಅಂದರೆ ದೇವರೇ ಕಾಪಾಡಬೇಕು.

ಶ್ರೀ ಬಿ. ರಾಚಯ್ಯ.—ಇವರು ಮಂತ್ರಿಗಳಾಗಿದ್ದಾಗ ಬ್ರಾಹ್ಮಣ ಅಧಿಕಾರಿಗಳು ತಪ್ಪು ಮಾಡಿದ್ದು ಇದ್ದರೆ ಅದನ್ನು ವಹಿಸಿಕೊಳ್ಳುತ್ತಾ ಇದ್ದರೆ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪರಿಶಿಷ್ಟ ಜಾತಿಗೆ ಸೇರಿದ ಅಧಿಕಾರಿಗಳ ಬಗ್ಗೆ ಇಷ್ಟು ಲಘುವಾಗಿ ಮಾತನಾಡಿಲ್ಲ.

ಶ್ರೀ ಬಿ. ರಾಚಯ್ಯ.—ನಾನು ಜವಾಬ್ದಾರಿಯನ್ನು ಹೊತ್ತುಕೊಂಡು ಹೇಳುತ್ತಿದ್ದೇನೆ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕನ್ನಡದ ಹೆಸರಿನಲ್ಲಿ ಅಧಿಕಾರಿಗಳ ಮೇಲೆ ಆರೋಪ ಮಾಡಿದರೆ ಒಳ್ಳೆಯದೇ ? ಪರಿಶಿಷ್ಟ ಜಾತಿಗೆ ಸೇರಿದ್ದಾರೆಂದು ಬೆಂಬಲ ವ್ಯಕ್ತಪಡಿಸಿದರೆ ಅದು ರಾಜಕೀಯ ಆಗುತ್ತದೆಯೋ ? ಎಲ್ಲಾ ಚರ್ಚೆ ಕೇಳಿದ ಮೇಲೆ ಬಹಳ ಸ್ಪಷ್ಟವಾದ ರೀತಿಯಲ್ಲಿ ಆರೋಪ ಸರ್ಕಾರದ ಮೇಲೆ ಮಾಡಿದ್ದೇವೆ, ಇದರಲ್ಲಿ ಎಷ್ಟೆಷ್ಟು ಮಂತ್ರಿಗಳ, ಮುಖ್ಯಮಂತ್ರಿಗಳ ಪಾಲು ಇದೆಯೋ ಅದರ ಜವಾಬ್ದಾರಿಯನ್ನು ಅವರೇ ಹಂಚಿಕೊಳ್ಳಲಿಕ್ಕೆ ನನ್ನದು ಅಭ್ಯಂತರವಿಲ್ಲ. ನೇರವಾಗಿ ಬಂದಿರತಕ್ಕ ವಿಚಾರ ಅಂದರೆ, ಅಲ್ಲಿರತಕ್ಕ ಅಧ್ಯಕ್ಷರನ್ನು ಉಚ್ಚಾಟಿಸಲಿಕ್ಕೆ ಕಾರ್ಮಿಕನೆಯ ಬೆಳತೆ, ಆಯಾಮ, ಔಚಿತ್ಯ ಮೀರಿ ರಾಜ್ಯದಲ್ಲಿರತಕ್ಕ ಪೋಲೀಸ್ ದುರುಪಯೋಗ ಮಾಡಿ ಒಂದು ಕೆಲಸ ಮಾಡುತ್ತಿದ್ದಾರೆ. ಆ ಒಂದು ವ್ಯೂಹಕ್ಕೆ ಸರ್ಕಾರ ಬೆಂಬಲವನ್ನು ಕೊಡತಕ್ಕದ್ದು ಅಕ್ಷಮ್ಯ ಅಪರಾಧವಾಗುತ್ತದೆ. ಆದ್ದರಿಂದ, ದಯವಿಟ್ಟು ತಕ್ಷಣದಿಂದ ಇದರ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕು. ತಾವೇ ಇದರ ಬಗ್ಗೆ ಸಾಬೀತು ಮಾಡಿ ಕೊಡಬೇಕು, ಇವೊತ್ತು ಸರ್ಕಾರದ ಮೇಲೆ ಸಂಪೂರ್ಣ ಜವಾಬ್ದಾರಿ ಇದೆ. ಇದರ ಬಗ್ಗೆ ಮಾನ್ಯ ವೀರಪ್ಪಮೊಯಿಲಿಯವರು ಸಾಕಷ್ಟು ತಿಳಿಸಿದ್ದಾರೆ. ತಾವು ಸ್ಥಳೀಯ ಪೋಲೀಸ್ ಅಧಿಕಾರಿಗಳ ಮುಖಾಂತರ ಎನ್‌ಕ್ವಯಿರಿ ಮಾಡಿದರೆ ಬಗೆಹರಿಯುವುದಿಲ್ಲ. ಒಂದುಸಾರಿ ಪೋಲೀಸರನ್ನು ಒಂದು ದಾರಿಯಲ್ಲಿ ಪ್ರಬಲವಾದ ರೀತಿಯಲ್ಲಿ ಉಪಯೋಗಿಸಿದ್ದೀರಿ. ಈಗ ಅವರು ಸತ್ಯ ಕಾಪಾಡಬೇಕೆಂದರೆ ಅಸಹಾಯಕರಾಗುತ್ತಾರೆ. ಆದ್ದರಿಂದ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲಿಕ್ಕೆ ಸಿ.ಬಿ.ಐ. ಗೆ ಒಪ್ಪಿಸಿ. ತಕ್ಷಣ ಅಲ್ಲಿ ರಕ್ಷಣೆಯ ವ್ಯವಸ್ಥೆ ಮಾಡಬೇಕು. ಅಲ್ಲಿಯ ಅಧ್ಯಕ್ಷರ ಮೇಲೆ ಯಾವುದೇ ರೀತಿಯ ವಿಚಾರ ಇದ್ದರೂ ಅದರ ಬಗ್ಗೆ ಕೇಂದ್ರಸರ್ಕಾರದ ಜೊತೆ ವ್ಯವಹಾರ ಮಾಡಿ, ಬಂದರಿನ ಕೀರ್ತಿಗೆ ಧಕ್ಕೆ ಬರದಂತೆ ಸುವ್ಯವಸ್ಥಿತ ರೀತಿಯಲ್ಲಿ ಅಲ್ಲಿ ಬಂದೋಬಸ್ತು ಮಾಡಬೇಕೆಂದು ಗೃಹಸಚಿವರಲ್ಲಿ ಒತ್ತಾಯಪಡಿಸುತ್ತೇನೆ. ಈ ವಿಚಾರದಲ್ಲಿ ಬಹಳ ಸ್ಪಷ್ಟವಾದ ರೀತಿಯಲ್ಲಿ ನಿಲುವನ್ನು ತೆಗೆದುಕೊಳ್ಳಬೇಕು. ಮಾನ್ಯ ರಾಚಯ್ಯನವರು ಹಿರಿಯ ಸಚಿವರು ಅವರು ಬಹಳ ಸ್ಪಷ್ಟವಾದ, ನಿರ್ದಿಷ್ಟವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಿರೀಕ್ಷೆ ಮಾಡುತ್ತೇನೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆ ಅಂದರೆ ನಾನು ಈ ಕಡೆ ಅಸೆಂಬ್ಲಿ ಸದಸ್ಯನಾಗಿ ಭಾಷಣ ಮಾಡಿದ್ದೇನೆ ಹಿಂದೆ ಮಂತ್ರಿಯಾಗಿಯೂ ಉತ್ತರ ಕೊಟ್ಟಿದ್ದೇನೆ. ಉತ್ತರ ಪ್ರತ್ಯುತ್ತರ ಪ್ರಶ್ನೆ ಅಲ್ಲ. ತಾವು ಗೃಹಸಚಿವರಾಗಿ ಯಾವುದೇ ರೀತಿಯ ತೊಂದರೆಯಾಗದಂತೆ ಕೆಲಸ ನಿರ್ವಹಿಸಬೇಕು ಅದು, ಜನತೆಗೆ ಸಾಬೀತಾಗುವಂಥ ರೀತಿಯಲ್ಲಿ ಆಗಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ. ಅಮರನಾಥ ಶೆಟ್ಟಿ (ಮೂಡಬಿದರೆ).—ಸನ್ಮಾನ್ಯ ಅಧ್ಯಕ್ಷರೆ, ನವ ಮಂಗಳೂರು ಬಂದರಿನ ವಿಷಯದಲ್ಲಿ ಈಗತಾನೇ ತುಂಬಾ ಚರ್ಚೆ ನಡೆದಿದೆ ದಿನಾಂಕ ೨೪–೮–೧೯೮೫ ರಂದು ರಾತ್ರಿ ೧೦–೩೦ ಕ್ಕೆ ನಡೆದಂಥ ಘಟನೆ ವಿಷಯದಲ್ಲಿ ಸ್ವಲ್ಪ ಹಿನ್ನೆಲೆಯನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸತತವಾಗಿ ೧೮–೬–೧೯೮೫ ರಿಂದ ೨೮–೬–೧೯೮೫ ರವರೆಗೆ ಇಲ್ಲೀಗಲ್ ಲಾಕ್‌ಔಟ್ ಅನ್ನು ಆ ಬಂದರಿನ ಅಧಿಕಾರ ವರ್ಗದವರು ಮಾಡಿದ್ದಾರೆ, ಎನ್ನುವ ವಿಷಯವನ್ನು ಈ ಸಂದರ್ಭದಲ್ಲಿ ನೆನಪಿಸಿ ಕೊಳ್ಳುತ್ತೇನೆ. ಆಗ ಇವರು ಕೇಂದ್ರಸರ್ಕಾರಕ್ಕೆ ಬೇಕಾದಷ್ಟು ಸಾರಿ ಟೆಲಿಗ್ರಾಮ್ ಮುಖಾಂತರ ಇದನ್ನು ಸರಿಪಡಿಸಿಕೊಡಬೇಕೆಂದು ಮನವಿ ಕಳುಹಿಸಿದಾಗ ಅದಕ್ಕೆ ಸರಿಯಾದ ಉತ್ತರ ದೊರಕಲಿಲ್ಲ.

(ಗೊಂದಲ)

ಶ್ರೀ ಬಿ. ಎ. ಉಮರಬ್ಬ.—ಇಲ್ಲೀಗಲ್ ಲಾಕ್‌ಔಟ್ ಏತಕ್ಕೆ ಆಯಿತು ?

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಉಮರಬ್ಬ ರವರೇ ಇಲ್ಲಿಯ ಸಭೆಯ ನಡವಳಿಕೆ ಬಗ್ಗೆ ತಾವೇ ಹೇಳುತ್ತಿರುತ್ತೀರಿ, ಆದ್ದರಿಂದ, ಮಾನ್ಯ ಸದಸ್ಯರು ಮಾತನಾಡುತ್ತಿರಬೇಕಾದರೆ ತಾವು ಅವರಿಗೆ ಅವಕಾಶ ಮಾಡಿಕೊಡಬೇಕು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಅಮರನಾಥ್ ಶೆಟ್ಟಿ.—ಇಲ್ಲೀಗಲ್ ಲಾಕೌಟ್ ಇದ್ದಾಗ ಅವರು ಕೆಲಸಕ್ಕೆ ಹೋದರೂ ಕೂಡ ಅವರನ್ನು ತೆಗೆದುಕೊಳ್ಳದ ರೀತಿಯಲ್ಲಿ ಇದ್ದುದರಿಂದ ಎಚ್. ಎಮ್. ಎಸ್. ವರ್ಕರ್ಸ್ ಎನ್ನುವ ಒಂದೇ ಒಂದು ಕಾರಣದಿಂದಾಗಿ ೫೮ ಮಂದಿ ಕಾರ್ಮಿಕರನ್ನು ಸಸ್ಪೆಂಡ್ ಮಾಡಿದ್ದಾರೆ ಆ ೫೮ ಮಂದಿ ಕಾರ್ಮಿಕರು ೮೫ ದಿವಸಗಳಿಂದಲೂ ಹಂಗರ್ ಸ್ಟ್ರೈಕ್ ಮಾಡುತ್ತಾ ಬಂದರು ಎದುರುಗಡೆಯಲ್ಲಿ ಟೆಂಟ್ ಹಾಕಿಕೊಂಡು ಕುಳಿತುಕೊಂಡು ನಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳುವ ದೃಷ್ಟಿಯಿಂದ ಸತ್ಯಾಗ್ರಹ ಮಾಡಿಕೊಂಡು ಬಂದರು. ಅವರಿಗೆ ಯಾವುದೇ ಒಂದು ನ್ಯಾಯವನ್ನು ಒದಗಿಸಲಿಲ್ಲ. ದಿನಾಂಕ

೨೪–೮–೧೯೮೫ ರಂದು ೧೦–೩೦ ಗಂಟೆಗೆ ಕೆಲವೊಂದು ಜನಗಳು ಬಂದು ಅವರ ಟೆಂಟ್ ಕೀಳಲಿಕ್ಕೆ ಮತ್ತು ಅವರಿಗೆ ಹೊಡೆಯಲಿಕ್ಕೆ ಬಂದಾಗ ಅಲ್ಲಿದ್ದವರು ಪ್ರತಿ ಭಟನ್ ಮಾಡಿ ಪೋಲೀಸರಿಗೆ ದೂರು ಕೊಟ್ಟರು. ಆ ಸಂದರ್ಭದಲ್ಲಿ ಅಲ್ಲಿಗೆ ಪೋಲೀಸರು ಬಂದಾಗ ಯಾರು ಯಾರು ಸಿಕ್ಕಿದ್ದಾರೆ ಅಂದರೆ ಇಬ್ಬರು ಅಧಿಕಾರಿಗಳು, ಇಬ್ಬರು ಮೇಸ್ತ್ರಿಗಳು ಸಿಕ್ಕಿದ್ದಾರೆ, ಇವರನ್ನು ಅರೆಸ್ಟ್ ಮಾಡಿ ಸ್ಟೇಷನ್‌ಗೆ ಕೊಂಡು ಹೋಗಿದ್ದಾರೆ. ಪೋಲೀಸರು ಸ್ಥಳಕ್ಕೆ ಹೋದಾಗ ಸಣ್ಣ ಲಾಠಿ ಚಾರ್ಜ್ ಮಾಡಿದ್ದಾರೆ. ಎಚ್.ಎಮ್.ಎಸ್. ಇರಬಹುದು, ಇಂಟಕ್ ಇರಬಹುದು, ಅಲ್ಲಿ ಸೇರಿರತಕ್ಕವರೆಲ್ಲರಿಗೂ ಪೆಟ್ಟು ಆಗಿರಬಹುದು ನಾಲ್ಕು ಮಂದಿ ಪೋಲೀಸ್‌ನಲ್ಲಿ ಏನು ಇಟ್ಟಿದ್ದರು ಅವರನ್ನು ರಾತ್ರಿ ಎರಡೂ ಮುಕ್ಕಾಲು ಗಂಟೆಗೆ ಬ್ಯಾಂಡ್ ಮುಚ್ಚಳಿಕೆ ಜಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಈಗ ಇದರ ಬಗ್ಗೆ ಎರಡು ಗಂಟೆಯಿಂದ ಇಲ್ಲಿ ಚರ್ಚೆಯಾಗುತ್ತಿದೆ. ಪೋಲೀಸರು ಗಲಾಟೆಯಾದಂಥ ಸಂದರ್ಭದಲ್ಲಿ ಅಲ್ಲಿರತಕ್ಕವರು ಅಧಿಕಾರಿಗಳೇ ಆಗಲಿ, ಅಥವಾ ಅವರು ಎಷ್ಟೇ ದೊಡ್ಡವರಾಗಿರಲಿ, ಆ ಜನರನ್ನು ಬಂಧಿಸಲೇಬೇಕಾಗುತ್ತದೆ. ಅಲ್ಲಿ ೫೮ ಮಂದಿ ವರ್ಕರ್ಸ್ ೮೫ ದಿವಸಗಳಿಂದಲೂ ಹೊಟ್ಟೆಗಿಲ್ಲದೇ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ವಿಷಯದಲ್ಲಿ ಇದುವರೆಗೂ ಯಾರಾದರೂ ಮಾತನಾಡಿದ್ದಾರೆಯೇ ?

(ಗೊಂದಲ)

ಅಲ್ಲಿ ೮೫ ದಿವಸಗಳಿಂದಲೂ ಹೊಟ್ಟೆಪಾಡಿಗೋಸ್ಕರ ಸತ್ಯಾಗ್ರಹ ಮಾಡುತ್ತಿದ್ದಾರಲ್ಲ, ಅವರುಗಳ ಬಗ್ಗೆ ಕಾರ್ಮಿಕ ಮುಖಂಡರುಗಳು ಯಾರಾದರೂ ಹೇಳಿದ್ದಾರೆಯೇ ?

(ಗೊಂದಲ)

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ,...

ಉಪಾಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ. ಅಮರನಾಥ್‌ಶೆಟ್ಟಿ.—೮೫ ದಿವಸಗಳಿಂದಲೂ ಸತ್ಯಾಗ್ರಹ ಮಾಡುತ್ತಿರುವವರ ವಿಷಯದಲ್ಲಿ, ಅವರಿಗೋಸ್ಕರ ಮಾತನಾಡಿದ ಕಾರ್ಮಿಕ ಮುಖಂಡರು ಒಬ್ಬರೂ ಇಲ್ಲ. ಇವೊತ್ತು ಅಲ್ಲಿ ಟೆಂಟ್ ಕೀಳುವ ಸಂದರ್ಭದಲ್ಲಿ ಗಲಾಟೆಯಾದಾಗ ಪೋಲೀಸರು ಬಂದು ತಪ್ಪುಮಾಡಿದಂಥ ಅಧಿಕಾರಿಗಳನ್ನು ಒಳಗೆ ಹಾಕಿದ್ದಕ್ಕೆ ಅದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ.

ದಿನಾಂಕ ೨೪–೮–೧೯೮೫ ರಂದು ಅಲ್ಲಿ ಯಾರ್ಯಾರನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಂಡಿದ್ದರೋ ಅವರೆಲ್ಲರನ್ನೂ ಸಹ ರಾತ್ರಿ ೧೦–೩೦ ನಿಮಿಷದಲ್ಲಿ ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆಂದು ಸಹ ನಾನು ತಿಳಿದುಕೊಂಡಿದ್ದೇನೆ. ದಿನಾಂಕ ೨೫–೮–೧೯೮೫ ರಂದು ಬೆಳಗ್ಗೆ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಎಸ್. ಪಿ. ಯವರು ಬಂದು ವಿಚಾರಣೆಯನ್ನು ಮಾಡಿದ ವಿಷಯವನ್ನು ಸಹ ನಾನು ತಿಳಿದುಕೊಂಡಿದ್ದೇನೆ. ಅಲ್ಲಿಯವರೆವಿಗೂ ಈ ಬಗ್ಗೆ ಯಾರೂ ಸಹ ಕಂಪ್ಲೆಂಟ್ ಕೊಟ್ಟಿಲ್ಲ. ದಿನಾಂಕ ೨೫–೮–೧೯೮೫ ರಂದು ಸಾಯಂಕಾಲ ಎಸ್. ಪಿ. ಯವರು ಐ ಬಿ. ಯಲ್ಲಿದ್ದಾಗ ಅಲ್ಲಿಗೆ ಯಾರೋ ಎರಡು ಮಂದಿ ಹೋಗಿ ಆ ಎಸ್.ಪಿ. ಯವರ ಕೈಗೆ ಎರಡು ಕವರುಗಳನ್ನು ಕೊಟ್ಟು ಬಂದಿದ್ದಾರೆ. ಈಗ ಎಸ್.ಪಿ. ಯವರು ಅದನ್ನು ತೆಗೆದು ನೋಡಿದಾಗ ಈ ಕವರಿನಲ್ಲಿ ಕಂಪ್ಲೆಂಟ್‌ಗಳು ಇದ್ದವು. ಆದರೆ ದಿನಾಂಕ ೨೫–೮–೧೯೮೫ ರಂದು ಬೆಳಗ್ಗೆ ಯಾರೂ ಕಂಪ್ಲೆಂಟ್ ಕೊಟ್ಟಿಲ್ಲ. ಅವರು ೬.೩೦ ನಿಮಿಷದಲ್ಲಿ ಐ.ಬಿ. ಯಲ್ಲಿ ತಂಗಿದ್ದಾಗ ಅಲ್ಲಿಗೆ ಯಾರೋ ಕಂಪ್ಲೆಂಟ್ ತೆಗೆದುಕೊಂಡು ಹೋಗಿ ಕೊಟ್ಟರು ಎನ್ನತಕ್ಕಂತ ವಿಷಯವನ್ನು ಸಹ ನಾನು ತಿಳಿದುಕೊಂಡಿದ್ದೇನೆ. ಇನ್ನು ನನ್ನ ಮಿತ್ರರಾದ ಹಾಗೂ ಶಾಸಕರಾದ ಶ್ರೀಮಾನ್ ಉಮರಬ್ಬರವರು ಮಾತನಾಡುತ್ತಾ ಹೇಳಿದರು ಆ ಅಧ್ಯಕ್ಷರ ಮೇಲೆ ಇರುವಂತಹ ಸಿ.ಬಿ.ಐ. ಎನ್‌ಕ್ವೈಯರಿ ಜನತಾ ಸರ್ಕಾರದಿದ್ದಾಗ ಆಜ್ಞೆ ಮಾಡಿದ್ದು ಎಂದು. ಆದರೆ ಆಗ ಅವರು ಕೂಡ ನಮ್ಮ ಜನತಾ ಪಕ್ಷದಲ್ಲಿ ಇದ್ದರು. ನನ್ನ ಜೊತೆಯಲ್ಲಿಯೇ ಇದ್ದರು. ಇದನ್ನು ಅವರು ಮರೆಯಬಾರದು. ಅವರು ಎಸ್.ಸಿ. ಎಸ್.ಟಿ ಜಾತಿಗೆ ಸೇರಿದವರು ಎಂದ ನಮ್ಮ ವಿರೋಧ ವಿಲ್ಲ. ಅವರ ಮೇಲೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಆದರೆ ಯಾವ ಒಬ್ಬ ಅಧಿಕಾರಿಯೇ ಆಗಲಿ ತಪ್ಪು ಮಾಡಿದಾಗ, ಯಾವುದಾದರೊಂದು ಅನ್ಯಾಯ ಮಾಡಿದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಅವರು ಎಷ್ಟೇ ದೊಡ್ಡವರು ಇರಬಹುದು. ತಪ್ಪು ಎಲ್ಲರಿಗೂ ತಪ್ಪೆ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮಾನ್ಯ ಮುಖ್ಯ ಮಂತ್ರಿಗಳು ೧೯೮೫ನೇ ಇಸವಿಯಲ್ಲಿ ಬರದಂತಹ ಒಂದು ಪತ್ರವನ್ನು ತೆಗೆದುಕೊಂಡು ಬಂದು ಇಲ್ಲಿ

ಪ್ರಸ್ತಾಪ ಮಾಡುವುದು ಸರಿಯಲ್ಲ. ಮಾಜಿ ಸದಸ್ಯರಾದ ಶ್ರೀಮಾನ್ ಲೋಕಯ್ಯಶೆಟ್ಟಿಯವರು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆಯುವುದರಲ್ಲಿ ಏನು ತಪ್ಪಿದೆ ? ಅಲ್ಲಿಂದ ಸುಮಾರು ೧೫ ಜನ ಶಾಸಕರು ಚುನಾಯಿಸಿ ಬಂದಿದ್ದಾರೆ. ಅವರು ಪತ್ರ ಬರೆಯಲಿಲ್ಲವೆಂದು ಇವರೂ ಸಹ ಪತ್ರ ಬರೆಯ ಬಾರದೆಂದು ಏನೂ ಇಲ್ಲ. ಅಷ್ಟೇ ಅಲ್ಲ ೧೯೮೪ನೇ ಇಸವಿಯಲ್ಲಿ ಒಂದು ಸಾರಿ ಮಾನ್ಯ ಮುಖ್ಯಮಂತ್ರಿ ಗಳು ಅಲ್ಲಿಗೆ ಭೇಟಿ ನೀಡಿದ್ದಾಗ ಅಲ್ಲಿನ ಕಾರ್ಮಿಕರು ಕೂಡಿಕೊಂಡು ಅಲ್ಲಿನ ಅಧ್ಯಕ್ಷರನ್ನು ತೆಗೆಯಬೇಕು. ಅವರಿಂದ ನಮಗೆ ತೊಂದರೆಯಾಗಿದೆ ಎಂದು ಸ್ಟ್ರೈಕ್ ಸಹ ಮಾಡಿದ್ದರು. ಇದೇ ವಿಷಯವನ್ನು ಲೋಕಯ್ಯಶೆಟ್ಟರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದು, ಈ ವಿಷಯವನ್ನು ನಾವು ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದರಿಂದ ಅವರು ಪತ್ರ ಬರೆದಿದ್ದಾರೆ. ನಾವು ಅಲ್ಲಿನ ಪರಿಸ್ಥಿತಿ ಯನ್ನು ತಿಳಿಸಿದ್ದರ ಮೇರೆಗೆ ಮಾನ್ಯಮುಖ್ಯಮಂತ್ರಿಗಳು ಪತ್ರ ಬರೆಯುವುದಕ್ಕೆ ಹಕ್ಕು ಇದೆ. ಅಲ್ಲಿನ ಸ್ಥಳೀಯ ಶಾಸಕರು ಹೇಳಿದ್ದನ್ನು ಮಾನ್ಯ ಮುಖ್ಯಮಂತ್ರಿಗಳು ನಂಬಬೇಕಾಗುತ್ತದೆ. ಮತ್ತೆ ಅಲ್ಲಿನ ಜನರೇ ಹೇಳುತ್ತಿರುವಾಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ನಂಬಬೇಕಾಗುತ್ತದೆ. ಈ ವಿಷಯ ದಲ್ಲಿ ಮಾನ್ಯ ಮುಖ್ಯಮಂತ್ರಿಗಳ ತಪ್ಪೇನು ಇಲ್ಲ. ಈ ವಿಷಯ ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿರುವು ದನ್ನು ಸಹ ಮಾನ್ಯ ಸದಸ್ಯರಾದ ಶ್ರೀ ವೀರಪ್ಪ ಮೊಯ್ಲಿಯವರು ಹೇಳಿದರು. ಆದರೆ ನಾವು ಮೊನ್ನೇ ತಾನೇ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಮಾನ್ಯ ಗೃಹ ಸಚಿವರ ಜೊತೆಯಲ್ಲಿ ಮಾತು ಕತೆ ಸಹ ಮಾಡಿದ್ದೇವೆ. ಈ ಒಂದು ಮುಷ್ಕರ ಸುಮಾರು ೮೫ ದಿವಸಗಳಿಂದ ನಡೆಯುತ್ತಿದೆ. ಅಲ್ಲಿ ಯಾರಿಗೂ ಯಾವ ರೀತಿಯಾದಂಥ ತೊಂದರೆಯನ್ನು ಸಹ ಕೊಟ್ಟಿಲ್ಲ. ಯಾವುದೇ ಕಾರಣದಿಂದ ಅಲ್ಲಿ ಶಾಂತಿ ಭಂಗವಾಗದಂತೆ ಅವರು ಮುಷ್ಕರವನ್ನು ಮಾಡುತ್ತಿದ್ದಾರೆ. ಅಲ್ಲಿನ ಸ್ಥಳೀಯ ಪೋಲೀಸಿ ನವರು ಸಹ ಹೆಚ್ಚು ನಿಗಾ ವಹಿಸಿ ಕೆಲಸ ಮಾಡುತ್ತಿದ್ದಾರೆ. ಪಣಂಬೂರಿನ ಪೋಲೀಸಿನವರು ಹಾಗೂ ಪೋಲೀಸ್ ಡಿ.ವೈ.ಎಸ್.ಪಿ ಎಸ್.ಪಿ. ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ಸ್ ಹಾಗೂ ಪೋಲೀಸ್ ಇನ್ಸ್ ಪೆಕ್ಟರ್‌ಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪೋಲೀಸಿನವರ ಬಗ್ಗೆ ನಾವು ಯಾರೂ ಸಂಶಯವನ್ನು ವ್ಯಕ್ತಪಡಿಸುವುದು ಸರಿಯಲ್ಲ. ಇವತ್ತು ನಾವು ಅಧಿಕಾರದಲ್ಲಿರಬಹುದು. ನಾಳೆ ನೀವು ಅಧಿಕಾರದಲ್ಲಿರಬಹುದು. ಅಧಿಕಾರ ಯಾರಿಗೂ ಶಾಶ್ವತವಲ್ಲ. ಸರ್ಕಾರಿ ಆಜ್ಞೆಯ ಪ್ರಕಾರ ಯಾರಾದರೂ ಒಬ್ಬ ಅಧಿಕಾರಿ ಒಂದೇ ಕಡೆ ಸುಮಾರು ೩–೪ ವರ್ಷಗಳು ಕೆಲಸ ಮಾಡಿದ ಮೇಲೆ ಆ ಅಧಿಕಾರಿಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕೆಂದು ಇದೆ. ಆದರೆ ಈ ಅಧ್ಯಕ್ಷರು ಅಲ್ಲಿ ಸುಮಾರು ೬–೭ ವರ್ಷ ಗಳಿಂದ ಅಲ್ಲಿಯೇ ಇದ್ದಾರೆ. ಇವರು ಸುಮಾರು ೬–೭ ವರ್ಷಗಳಿಂದ ಒಂದೇ ಕಡೆ ಇರುವುದಕ್ಕೆ ಮತ್ತು ಅವರನ್ನು ಉಳಿಸಿಕೊಳ್ಳುವುದಕ್ಕೆ ಈ ಜನರಿಗೆ ಏನು ಅಷ್ಟೊಂದು ಇಂಟ್ರೆಸ್ಟ್ ಮತ್ತು ಆ ಅಧ್ಯಕ್ಷರನ್ನು ಅಲ್ಲಿಯೇ ಉಳಿಸಿಕೊಳ್ಳುವುದಕ್ಕೆ ಈ ಜನ ಸಾಕಷ್ಟು ಪ್ರಯತ್ನ ಮಾಡುತ್ತಿರುವ ಪುರಾವೆಗಳು ಕೂಡ ಇವೆ. ಅವರನ್ನು ಉಳಿಸಿಕೊಳ್ಳುವುದಕ್ಕೆ ಕೆಲವು ಜನ ಶಾಮೀಲಾಗಿದ್ದಾರೆ ಎನ್ನುವ ಸುದ್ದಿಯನ್ನು ಸಹ ನಾನು ಕೇಳಿದ್ದೇನೆ. ಇದನ್ನು ಯಾರು ಬೇಕಾದರೂ ವಿಚಾರಣೆ ಮಾಡಿ ಕೇಳಲಿ, ಅವರಿಗೆ ಗೊತ್ತಾಗುತ್ತದೆ. ಅಲ್ಲಿ ಸುಮಾರು ೧,೨೫೫ ಜನ ಕಾರ್ಮಿಕರು ಇದ್ದಾರೆ, ಅವರಲ್ಲಿ ಸುಮಾರು ೧,೦೦೦ ಜನ ಕಾರ್ಮಿಕ ವರ್ಗ ಹೆಚ್.ಎಂ.ಎಸ್. ಗ್ರೂಪ್ ಕಡೆ ಇರುವುದಕ್ಕೆ ಬಯಸುತ್ತಿದ್ದಾರೆ. ಈ ಅಧ್ಯಕ್ಷರಿಂದ ಅಲ್ಲಿನ ಕಾರ್ಮಿಕರಿಗೆ ಯಾವುದೇ ರೀತಿಯ ಅನುಕೂಲವಿಲ್ಲ. ಅವರಿಗೆ ಪ್ರತಿದಿವಸ ತೊಂದರೆಯನ್ನು ಕೊಡುತ್ತಿದ್ದಾರೆ. ಇದರಿಂದ ಸರ್ಕಾರದವರು ಈ ಕೂಡಲೇ ಆ ಅಧಿಕಾರಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ನಮ್ಮ ರಾಜ್ಯದಲ್ಲಿ ಯಾರಾದರೂ ಕನ್ನಡ ಬರುವಂತಹ ಕನ್ನಡದ ಅಧಿಕಾರಿಯನ್ನು ನೇಮಿಸಲಿ ಎಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಮತ್ತು ಈ ಕೆಲಸವನ್ನು ಸರ್ಕಾರ ಕೂಡಲೇ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಅಡ್ಯಂತಾಯ (ಸುರತ್ಕಲ್).—ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಸುರತ್ಕಲ್ ಕ್ಷೇತ್ರದಿಂದ ಚುನಾಯಿತನಾಗಿ ನಾನು ಬಂದಿರುವುದರಿಂದ ಆ ಬಗ್ಗೆ ಸ್ವಲ್ಪ ವಿಷಯ ತಿಳಿದು ಕೊಂಡಿರುವುದರಿಂದ ನಾನು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು.—ತಾವು ಕೇವಲ ೧೦ ನಿಮಿಷದಲ್ಲಿ ಮುಗಿಸಿ,

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸುರತ್ಕಲ್‌ನಿಂದ ಚುನಾಯಿತರಾಗಿ ಬಂದಿರುವುದರಿಂದ ಅವರು ಹೇಳಿದ ವಿಷಯ ಒಂದು ವೇಳೆ ಸತ್ಯವಿದ್ದರೂ

ಇರಬಹುದು. ಅದನ್ನು ಮಾನ್ಯ ಮಂತ್ರಿಗಳು ನಂಬಲೇ ಬೇಕು. ಹಾಗೇ ಮಾನ್ಯ ಸದಸ್ಯರಾದ ಅಮರನಾಥಶೆಟ್ಟಿಯವರು ಅಪ್ಪಣೆ ಕೊಡಿಸಿದ್ದಾರೆ.

ಶ್ರೀ ಬಿ. ಎನ್. ಬಚ್ಚೇಗೌಡ.—ಸ್ವಾಮಿ, ಅವರ ಪಕ್ಷಕ್ಕೆ ಎಷ್ಟು ನಿಮಿಷಗಳು ಕೊಟ್ಟಿದ್ದೀರಿ ?

ಶ್ರೀ ಬಿ. ಎ. ಉಮರಬ್ಬ.—ತಮ್ಮ ಪಕ್ಷದವರು ಮಾತನಾಡುವಾಗ ಏತಕ್ಕೆ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಲಿಲ್ಲ ?

ಉಪಾಧ್ಯಕ್ಷರು.—ಆಯಿತು ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಎಂ. ಅಡ್ಯಂತಾಯ.—ಸನ್ಮಾನ್ಯ ಅಧ್ಯಕ್ಷರೇ, ನವಮಂಗಳೂರಿನ ಸುರತ್ಕಲ್ ಕ್ಷೇತ್ರದಿಂದ ಚುನಾಯಿಸಿ ಬಂದಿರತಕ್ಕಂಥ ಶಾಸಕ ನಾನು. ಈ ನವಮಂಗಳೂರಿನ ಬಂದರಿನ ಬಗ್ಗೆ ಈಗಾಗಲೇ ಮಾತನಾಡಿರತಕ್ಕಂಥ ಹಿರಿಯ ಸದಸ್ಯರಾದ ಶ್ರೀಮಾನ್ ವೀರಪ್ಪಮೊಯ್ಲಿಯವರು ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಆದರೂ ಕೂಡ ನಾನು ಕೇವಲ ಎರಡೇ ಎರಡು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನವಮಂಗಳೂರು ಬಂದರು ಇಡೀ ದೇಶದಲ್ಲಿಯೇ ಒಂದು ಪ್ರಮುಖವಾಂಥ ಬಂದರಾಗಿದೆ. ಮತ್ತು ಇಡೀ ದೇಶದಲ್ಲಿ ಸುಮಾರು ೧೦ ಬಂದರುಗಳ ಪೈಕಿ ಅತಿ ಕಟ್ಟುನಿಟ್ಟಾಗಿ ಕೆಲಸ ಮಾಡುತ್ತಿರುವ ಬಂದರೆಂದರೆ ಈ ನಮ್ಮ ನವಮಂಗಳೂರು ಬಂದರು. ಈ ನವಮಂಗಳೂರು ಬಂದರಿನಲ್ಲಿ ಉತ್ಪಾದನೆ ಕೂಡ ಹೆಚ್ಚು ಮಾಡುವ ಬಂದರು ಈ ನವಮಂಗಳೂರು ಬಂದರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ ಸುಮಾರು ೬ ವರ್ಷಗಳ ಹಿಂದೆ ಈ ಬಂದರಿನಲ್ಲಿ ಕೇವಲ ಒಂದು ಮೆಟ್ರಿಕ್‌ಟನ್ ಆಮದು ಮತ್ತು ರಫ್ತು ಆಗುತ್ತಿತ್ತು ಆದರೆ ಈವತ್ತಿನ ದಿವಸ ಈ ಬಂದರಿನಲ್ಲಿ ಸುಮಾರು ೪ ಮೆಟ್ರಿಕ್ ಟನ್ ನಷ್ಟು ಆಮದು ಮತ್ತು ರಫ್ತು ಆಗುತ್ತಿದೆ. ಈ ನವಮಂಗಳೂರು ಬಂದರಿನಲ್ಲಿ ಕಾರ್ಮಿಕರಲ್ಲಿ ಒಳ್ಳೆಯ ಶಿಸ್ತು ಮತ್ತು ಸಂಯಮ ಇದೆ. ಒಳ್ಳೆಯ ಆಡಳಿತಗಾರರೂ ಇದ್ದಾರೆ. ಆದ್ದರಿಂದಲೇ ನಮ್ಮ ಉತ್ಪಾದನಾ ಸಾಮರ್ಥ್ಯ ಕೂಡ ಜಾಸ್ತಿಯಾಗಿದೆ ಎಂದು ನಾವು ಹೇಳಬಹುದು. ಈ ನವಮಂಗಳೂರು ಬಂದರಿನಲ್ಲಿ ಮೂಲ ವರ್ಗ ಒಂದು ಇತ್ತು. ಈ ಒಂದು ಏಜೆನ್ಸಿ ಎಂದು ನಾವು ಏನು ಹೇಳುತ್ತೇವೆ. ಅಲ್ಲಿ ಒಡಕು ಹುಟ್ಟಿ ೧೯೮೩ನೇ ಇಸವಿಯಲ್ಲಿ ಒಂದು ವೆರಿಫಿಕೇಶನ್ ಮಾಡಿದಂತಹ ಸಂದರ್ಭದಲ್ಲಿ ಮಾನ್ಯತೆ ಸಿಕ್ಕಿದಂತಹ ಕಾರ್ಮಿಕ ಸಂಘಕ್ಕೆ ಮತ್ತೆ ೧೯೮೪ನೇ ಇಸವಿಯಲ್ಲಿ ವೆರಿಫಿಕೇಶನ್ ನಡೆದಾಗ ಅಲ್ಲಿನ ಕಾರ್ಮಿಕ ಸಂಘದವರು ಕೇಂದ್ರ ಸಂಘಕ್ಕೆ ಯಾವುದೇ ರೀತಿಯ ಕಾಗದ ಪತ್ರಗಳನ್ನು ಇದುವರೆವಿಗೂ ನೀಡಿಲ್ಲ. ಈ ಬಗ್ಗೆ ಅಲ್ಲಿನ ಸಂಘದವರಿಗೆ ಯಾವುದೇ ರೀತಿಯ ಕಾಳಜಿ ಇಲ್ಲ. ಈ ಒಂದು ಕಾರ್ಮಿಕ ಸಂಘದಲ್ಲಿ ಎರಡು ಜನರಿಗೆ ಪಾಸು ಬೇಕಾಗಿರುವುದಕ್ಕಾಗಿ ನಾವು ಕಾರ್ಮಿಕ ಮುಖಂಡರೆಂದು ಹೇಳಿಕೊಂಡು ನೇರವಾಗಿ ಬಂದರಿನ ಒಳಗೆ ಹೋಗಿ ಬರುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕಾಗಿ ನಡೆಯುವ ಪ್ರಯತ್ನ, ಅಲ್ಲಿ ಸುಮಾರು ೫೦ ಜನ ಗೂಂಡಾಗಳಿಗೆ ಪೋಲೀಸಿನವರ ಸಂಪೂರ್ಣ ಬೆಂಬಲ ಮತ್ತು ಸಹಕಾರಗಳಿಂದಾಗಿ ಈ ಒಂದು ಕೆಲಸ ನಡೆಯುತ್ತಿದೆ.

ಇದರಿಂದ ನಮ್ಮ ದೇಶಕ್ಕೆ ಮಾತ್ರವಲ್ಲ, ನಮ್ಮ ಕರ್ನಾಟಕ ಸರ್ಕಾರಕ್ಕೂ ಮತ್ತು ಕರ್ನಾಟಕ ರಾಜ್ಯಕ್ಕೂ ಬಹಳ ದೊಡ್ಡ ಆಘಾತವನ್ನುಂಟು ಮಾಡುತ್ತಿದೆ. ಇಷ್ಟೆಲ್ಲಾ ನಡೆದಿರುವಾಗಲೂ ನಮ್ಮ ಕರ್ನಾಟಕ ಸರ್ಕಾರ ಕೇವಲ ಮೂಕಪ್ರೇಕ್ಷಕನ ರೀತಿಯಲ್ಲಿ ಕುಳಿತಿರುವುದನ್ನು ನೋಡಿದರೆ ನನಗೆ ಬಹಳ ಬೇಸರವಾಗುತ್ತದೆ. ಮಾನ್ಯ ಅಮರನಾಥಶೆಟ್ಟರು ಕೆಲವೊಂದು ವಿಚಾರಗಳನ್ನು ಹೇಳಿದರು. ಅವರ ಬಗ್ಗೆ ನನಗೆ ಅಭಿಮಾನ ಇದೆ. ಸುಮಾರು ೮೫ ಜನ ಕಾರ್ಮಿಕರು ೫೫ ದಿವಸಗಳ ಕಾಲ ಮುಷ್ಕರ ಮಾಡಿದರು ಎಂಬ ಮಾತನ್ನು ಅವರು ಹೇಳಿದರು. ಈ ಮುಷ್ಕರದ ಅವಧಿಯಲ್ಲಿ ಯಾವ ಕಾರ್ಮಿಕರನ್ನೇ ಆಗಲೀ ಕೆಲಸದಿಂದ ವಜಾ ಮಾಡಿಲ್ಲ. ಅಂತಹ ಒಂದು ಕೆಲಸವನ್ನು ಅಲ್ಲಿನ ಆಡಳಿತ ವರ್ಗ ಮಾಡಿಲ್ಲ. ಅಷ್ಟೇ ಅಲ್ಲ, ಇಲ್ಲಿಯವರೆಗೆ ಯಾವ ಕಾರ್ಮಿಕರ ಮೇಲೂ ಅಲ್ಲಿನ ಆಡಳಿತ ವರ್ಗ ಶಿಸ್ತಿನ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ನಮ್ಮ ದೇಶದಲ್ಲಿರುವಂತಹ ಇತರೇ ಸಾರ್ವಜನಿಕ ವಲಯದಲ್ಲಿರುವಂತಹ ಕಾರ್ಖಾನೆಗಳಲ್ಲಿ ಏನು ನಡೆದಿದೆ ಎಂಬುದು ನಮಗೆಲ್ಲಾ ಗೊತ್ತಿದೆ. ಬಿ.ಟಿ.ಎಸ್.ನಲ್ಲಿ ಮತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಮಾನ್ಯ ಸಿಂಧ್ಯಾ ಅವರೇ ಹೇಳಲಿ. ರಾಯಬಾಗ್‌ನ ಸಕ್ಕರೆ ಕಾರ್ಖಾನೆಯಲ್ಲಿ ಏನು ನಡೆದಿದೆ ಎಂಬುದನ್ನು ಸರ್ಕಾರದವರು ನೋಡಲಿ. ಅಲ್ಲಿ ಎಷ್ಟು ಜನರಿಗೆ ಕೆಲಸ ಹೋಗಿದೆ ಎಂಬುದನ್ನು

ಸರ್ಕಾರದವರೇ ಹೇಳಲಿ? ಅದೆ ನಮ್ಮ ನವಮಂಗಳೂರು ಬಂದರಿನ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಈಗ ಹಾಲಿ ಇರುವಂತಹ ಅಧ್ಯಕ್ಷರ ಕಾಲಾವಧಿಯಲ್ಲಿ ಒಬ್ಬ ಕಾರ್ಮಿಕನನ್ನೂ ಸಹ ಕೆಲಸದಿಂದ ತೆಗೆದುಹಾಕಿಲ್ಲ ಕಾರ್ಮಿಕರ ಬಗ್ಗೆ ಇಷ್ಟೊಂದು ಅನುಕಂಪ ಇರುವಂತಹ ಒಬ್ಬ ವ್ಯಕ್ತಿಯ ಮೇಲೆ ಕ್ಷುಲ್ಲಕವಾದಂಥ ಅಪವಾದವನ್ನು ಯಾರೇ ಆಗಲಿ ಹೊರಿಸುವುದು ಸರಿಯಲ್ಲ. ಬಂದರಿನಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ಕೇವಲ ಕೆಲವೇ ಜನ ಕಾರ್ಮಿಕರು ಬಲಾತ್ಕಾರದಿಂದ ನಿಲ್ಲಿಸುವುದಕ್ಕೆ ಹೊರಟಂತಹ ಸಂದರ್ಭದಲ್ಲಿ ಆಡಳಿತ ವರ್ಗದವರು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ತಪ್ಪೇನಿದೆ? ಮಾನ್ಯ ವೀರಪ್ಪಮೊಯ್ಲಿ ಅವರು ಮಾತನಾಡುತ್ತಿರುವಾಗ ಶ್ರೀಮಾನ್ ಬೊಮ್ಮಾಯಿ ಅವರು ಮಧ್ಯೆ ಪ್ರವೇಶ ಮಾಡಿ ನವಮಂಗಳೂರು ಬಂದರಿನ ಚೇರ್‌ಮನ್ ಅವರ ಮೇಲೆ ಅಪಾದನೆಗಳಿರುವುದರಿಂದ ಸಿ.ಬಿ.ಐ. ನಿಂದ ತನಿಖೆ ನಡೆಯುತ್ತಿರುವುದಾಗಿ ಹೇಳಿದರು. ಅದಕ್ಕೆ ಮಾನ್ಯ ಉಮರಬ್ಬ ಅವರು ಸಮರ್ಪಕ ವಾದಂಥ ಉತ್ತರವನ್ನು ಕೊಟ್ಟರು. ಇದೇ ನವಮಂಗಳೂರಿನ ಬಂದರ್ ಬಗ್ಗೆ ಲೋಕಸಭೆಯ ಎಸ್ಟಿ- ಮೇಟ್ ಕಮಿಟಿಯವರು ತಮ್ಮ ವರದಿಯಲ್ಲಿ ಈ ರೀತಿ ಹೇಳಿದ್ದಾರೆ.—

"The Committee find that in in actual practice by and large I A.S. officers are appointed Chairmen of Major Port Trusts. Out of the 10 Chairman at present 9 belongs to IAS cadre as on 1st December, 1981".

"The Committee are of the view that the Port administration, like Railways and Airport administration is highly specialised affair for which professionals who are committed and soaked in the Ports culture and port problems would be better suited to head the Port Trusts."

"If only such officer is not available from amongst the port services the question of encouraging the I.A,S. or other such officer from the general cadre should arise."

ಇದನ್ನು ನಾನು ಇಲ್ಲಿ ಏತಕ್ಕೆ ಉಲ್ಲೇಖ ಮಾಡಿದೆ ಎಂದರೆ, ನಮ್ಮ ದೇಶದಲ್ಲಿರುವಂತಹ ಇಂತಹ ಹತ್ತು ಬಂದರ್‌ಗಳ ಪೈಕಿ ೯ ಬಂದರ್‌ಗಳಲ್ಲಿ ಐ.ಎ.ಎಸ್. ಅಧಿಕಾರಿಗಳು ಇದ್ದರೆ, ಇಲ್ಲಿ ಮಾತ್ರ ತಾಂತ್ರಿಕಜ್ಞಾನ ಪಡೆದಂಥ ಅಧಿಕಾರಿ (ಅಂದರೆ ಟೆಕ್‌ನೋ—ಕ್ರಾಟ್) ಇದ್ದಾರೆ. ಇಲ್ಲಿ ಮೊದಲು ಒಂದು ಮಿಲಿಯ ಟನ್‌ನಷ್ಟು ಸರಕಿನ ವ್ಯವಹಾರ ನಡೆಯುತ್ತಿದ್ದರೆ ಈಗ ಅದು ೪ ಮಿಲಿಯ ಟನ್‌ಗೆ ಹೆಚ್ಚಿದೆ. ಇಲ್ಲಿ ಕೆಲಸ ಮಾಡುವಂತಹ ಕಾರ್ಮಿಕರ ಮತ್ತು ಆಡಳಿತವರ್ಗದವರ ನಡುವೆ ಒಂದು ಒಳ್ಳೆಯ ಸಮಧುರವಾದಂಥ ಬಾಂಧವ್ಯ ಬೆಳೆದುಕೊಂಡು ಬಂದಿದೆ. ಇಲ್ಲಿನ ಕಾರ್ಮಿಕ ವರ್ಗದವರು ಮೊದಲಿನಿಂದಲ್ಲೂ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇಂತಹ ಒಂದು ಸುಮಧುರವಾದಂಥ ಬಾಂಧವ್ಯದ ಮಧ್ಯೆ ಯಾರೋ ಕೆಲವರು ಹುಳಿ ಹಿಂಡಲು ಹೊರಟಿದ್ದಾರೆ, ತಮ್ಮ ಇಬ್ಬರು ಮುಖಂಡರುಗಳಿಗೆ ಪಾಸ್ ಕೊಡಲಿಲ್ಲವೆಂಬ ಕಾರಣದಿಂದ ಇಷ್ಟೆಲ್ಲಾ ಗಲಾಟೆ ಮಾಡಿದ್ದಾರೆ. ಮತ್ತೊಂದು ಮುಖ್ಯವಾದ ಸಂಗತಿ ಎಂದರೆ ನನಗೆ ನವಮಂಗಳೂರ್ ಬಂದರ್‌ನ ಚೇರ್‌ಮನ್ ಅವರೇ ಹೇಳಿದ ಪ್ರಕಾರ ಅಲ್ಲಿ ಈಗ ಕೆಲಸ ಮಾಡುತ್ತಿರುವ ೧೨೫೦ ಕಾರ್ಮಿಕರು ಇನಿದಾರೆ, ಅವರಿಗೆ ಪೂರ್ಣವಾದಂಥ ಸ್ವಾತಂತ್ರ್ಯವಿದೆ. ಈ ಕಾರ್ಮಿಕ ವರ್ಗದವರಿಗೂ ಮತ್ತು ಅಲ್ಲಿನ ಮಾಲೀಕವರ್ಗದವರಿಗೂ ಒಂದು ರೀತಿಯ ಒಪ್ಪಂದವಾಗಿದೆ. ಈ ಒಂದು ಒಪ್ಪಂದದ ಪ್ರಕಾರ ಪ್ರತಿ ತಿಂಗಳಲ್ಲಿ ಬರುವಂತಹ ನಾಲ್ಕು ಭಾನುವಾರಗಳಂದು ಸಾರ್ವಜನಿಕ ರಜೆ ಇದ್ದರೂ ಸಹ ಇವರಿಗೆ ಸಂಬಳ ಸಿಗುತ್ತದೆ. ಇದರ ಜೊತೆಗೆ ಬೇರೆ ದಿನಗಳಲ್ಲಿ ಕೆಲಸ ಇರಲಿ ಅಥವಾ ಇಲ್ಲದಿರಲಿ ಈ ನಾಲ್ಕು ದಿನಗಳ ಜೊತೆಗೆ ಮತ್ತೆ ೧೮ ದಿನಗಳ ಸಂಬಳ ಗ್ಯಾರಂಟಿಯಾಗಿ ಸಿಕ್ಕೇ ಸಿಗುತ್ತದೆ. ಹೀಗೆ ಒಟ್ಟು ೨೨ ದಿನಗಳ ಸಂಬಳ ಇವರಿಗೆ ಒಂದು ತಿಂಗಳಲ್ಲಿ ಸಿಗುತ್ತದೆ. ಈ ಸಂಬಳದ ಜೊತೆಗೆ ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್‌ನ ಸೌಲಭ್ಯ. ಬೋನಸ್, ಗ್ರಾಚ್ಯುಯಿಟಿ ಮುಂತಾದ ಸೌಲಭ್ಯಗಳು ಸಹ ಸಿಗುತ್ತಿದೆ. ಇಂತಹ ಒಂದು ಸೌಲಭ್ಯ ಬೇರೆ ಕಡೆ ಇಲ್ಲ. ಈ ನವಮಂಗಳೂರಿನ ಬಂದರಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಿಗುತ್ತಿರುವ ಕೆಲವೊಂದು ಸೌಲಭ್ಯಗಳು ಟ್ಯೂಟಿಕೋರಿಯನಾ, ಪ್ಯಾರಾದ್ವೀಪ, ಹಾಲ್ದಿಯಾ ಮುಂತಾದ

ಬಂದರುಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಿಗುತ್ತಿಲ್ಲ. ಇಲ್ಲಿ ೨೨ ದಿವಸಗಳ ಸಂಬಳದ ಗ್ಯಾರಂಟಿ ಇರುವಂತೆ ಬೇರೆ ಕಡೆಗಳಲ್ಲಿ ಇಲ್ಲ. ಇಲ್ಲಿನ ನೌಕರರಿಗೆ ಕೆಲಸ ಒದಗಿಸುವ ಬಗ್ಗೆ ಆಗಿರುವಂತಹ ಒಪ್ಪಂದ ಏನಿದೆ, ಇಂತಹ ಒಂದು ಒಪ್ಪಂದ ಉಳಿದ ಮೂರು ಬಂದರುಗಳಲ್ಲಿ ಆಗಿಲ್ಲ, ಸೆಕ್ಷನ್ ೧೨ (೩) ಪ್ರಕಾರ ಇಲ್ಲಿ ಒಂದು ಒಪ್ಪಂದ ಆಗಿದೆ. ಈ ಕಾರಣದಿಂದ ಇಲ್ಲಿ ಕಾರ್ಮಿಕರ ಒಂದು ಹಿತರಕ್ಷಣೆ ಆಗಿಲ್ಲ ಎಂದು ಯಾರೇ ಆಗಲಿ, ಹೇಳುವಂತಹ ಪ್ರಮೇಯ ಬರುವುದಿಲ್ಲ. ಕೆಲಸ ಇರಲಿ ಅಥವಾ ಇಲ್ಲದಿರಲಿ, ತಿಂಗಳಲ್ಲಿ ಇಷ್ಟು ದಿವಸಗಳ ಕಾಲ ಸಂಬಳ ಕೊಡಲೇ ಬೇಕು ಎಂದು ಒಪ್ಪಂದವಾಗಿದೆ. ಇದರ ಜೊತೆಗೆ ನಾನು ಮೊದಲೇ ಹೇಳಿದಂತೆ ಇನ್ನಿತರ ಸವಲತ್ತುಗಳು ಸಹ ಸಿಗುತ್ತಿವೆ. ಇಲ್ಲಿ ಕೆಲಸ ಯಾವ ರೀತಿ ನಡೆಯುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಸ್ವಲ್ಪ ವಿವರಿಸಿ ಹೇಳಬೇಕಾಗುತ್ತದೆ. ಕೆಲಸದ ದಿವಸಗಳಲ್ಲಿ ೪ ಹಡಗುಗಳು ಬಂದರಲ್ಲಿ ಬಂದು ನಿಂತರೆ.........

ಉಪಾಧ್ಯಕ್ಷರು.—ಈಗ ತಾವು ಎಲ್ಲ ವಿವರಗಳಿಗೆ ಹೋಗಬೇಡಿ. ಸಮಯ ಸಾಕಷ್ಟು ಇಲ್ಲ. ಜಾಗ್ರತೆ ಮುಗಿಸಿ.

ಶ್ರೀ ಎನ್.ಎಂ. ಅಡ್ಯಂತಾಯ.—ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ, ಒಂದು ದಿವಸ ನಾಲ್ಕು ಹಡಗುಗಳು ಬರಬಹುದು, ಮತ್ತೊಂದು ದಿವಸ ೮ ಹಡಗುಗಳು ಬರಬಹುದು. ನಾಲ್ಕೇ ಹಡಗುಗಳು ಬಂದಾಗ ೧೨೫೫ ಜನ ಕಾರ್ಮಿಕರು ಸಾಕಾಗಬಹುದು. ಆದರೆ ೮ ಹಡಗುಗಳು ಬಂದಾಗ ಎರಡೂವರೆ ಸಾವಿರ ಕಾರ್ಮಿಕರು ಬೇಕಾಗಬಹುದು. ಆದರೆ ಈಗ ಸೆಕ್ಷನ್ ೧೨ (೩) ಪ್ರಕಾರ ಒಂದು ಒಪ್ಪಂದವಾಗಿದೆ. ಒಂದು ಒಪ್ಪಂದದ ಪ್ರಕಾರ ೧೨೫೫ ಕ್ಕಿಂತ ಜಾಸ್ತಿ ಕಾರ್ಮಿಕರು ಏನಾದರು ಬೇಕಾದರೆ.........

ಶ್ರೀ ಸಾಲೇರ್ ಸಿದ್ದಪ್ಪ.—ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಇವತ್ತಿನ ವಿಷಯಕ್ಕೂ ಇವರು ಮಾತನಾಡುತ್ತಿರುವುದಕ್ಕೂ ಏನು ಸಂಬಂಧ ಇದೆ ? ಅಲ್ಲಿ ಇವತ್ತು ಎಷ್ಟು ಹಡಗು ಬರುತ್ತವೆ ಹಾಗೂ ಎಷ್ಟು ಹಡಗು ಹೋಗುತ್ತವೆ ಎನ್ನುವುದಕ್ಕೂ, ಇವತ್ತು ಇಲ್ಲಿ ಇರತಕ್ಕ ವಿಷಯಕ್ಕೂ ಏನು ಸಂಬಂಧ ಇದೆ ? How all this is relevant to this matter. ಇವತ್ತು ಅವರಿಗೆ ಎಷ್ಟು ಸಂಬಳ ಸಿಗುತ್ತಿದೆ ಎಂಬುದು ಏಕೆ ಬೇಕು ?

ಉಪಾಧ್ಯಕ್ಷರು.—ಈಗ ಅಷ್ಟೊಂದು ವಿವರ ಅಗತ್ಯ ಇಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ನಾರಾಯಣ ಕುಮಾರ್ ಅವರು ಮಾತನಾಡುವಾಗ ಬಂದರಿನ ಅಧ್ಯಕ್ಷರು ಒಬ್ಬರು ಐ. ಎ. ಎಸ್. ಅಧಿಕಾರಿಗಳು ಆಗಿದ್ದಾರೆ ಎಂದು ಹೇಳಿದರು. ಆದ್ದರಿಂದ ಅಲ್ಲಿನ ವಿಷಯಗಳನ್ನು ಸ್ವಲ್ಪ ಹೇಳಬೇಕಾಗಿ ಬಂತು. ಆ ವಿಷಯ ಬಂದಾಗ ಬಂದರಿನ ವಿಷಯವನ್ನೂ ಹೇಳಬೇಕಲ್ಲವೇ ? ಇವತ್ತು ಅಲ್ಲಿ ಎಷ್ಟು ಮಿಲಿಯ ಟನ್ ಲೋಡ್ ಆಗುತ್ತದೆ, ಹಾಗೂ ಎಷ್ಟು ಮಿಲಿಯನ್‌ಟನ್ ಅನ್‌ಲೋಡ್ ಆಗುತ್ತದೆ ಎಂಬುದನ್ನು ಹೇಳಬೇಕಾಗುತ್ತದೆ. ಇವತ್ತು ಅಲ್ಲಿನ ಕೆಲಸ ಕಾರ್ಯಗಳು ವಿ.ಐ.ಎಸ್.ಎಲ್. ನ ಉಕ್ಕು ಕಾರ್ಖಾನೆಯ ಕೆಲಸದಂತೆ ಅಲ್ಲ. ಅಲ್ಲಿ ಒಂದು ದಿವಸ ಡಮರೇಜ್ ಆದರೆ ಸುಮಾರು ೩,೦೦೦ ಡಾಲರ್‌ನಷ್ಟು ನಮ್ಮ ದೇಶದ ಹಣವನ್ನು ಪರದೇಶದ ಹಡಗುಗಳಿಗೆ, ವಿದೇಶೀ ಕರೆನ್ಸಿ ರೂಪದಲ್ಲಿ ಕೊಡಬೇಕಾಗುತ್ತದೆ. ಇನ್ನು ನಾರಾಯಣ ಕುಮಾರ್ ಅವರು ಕರ್ನಾಟಕದ ಜನರಿಗೆ ಕೆಲಸ ಸಿಗಬೇಕೆಂದು ಹೇಳಿದರು.

ಉಪಾಧ್ಯಕ್ಷರು.—ಆದಷ್ಟು ಬೇಗ ಮುಗಿಸಿ.

ಶ್ರೀ ಎನ್. ಎಂ. ಅಡ್ಯಂತಾಯ,—ನನಗೆ ಇನ್ನೂ ೧೦ ನಿಮಿಷ ಬೇಕು.

ಉಪಾಧ್ಯಕ್ಷರು.—೧೦ ನಿಮಿಷ ಆಗುವುದಿಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಇವತ್ತು ಕನ್ನಡ ಮಾತನಾಡುವವರಿಗೆ ನವ ಮಂಗಳೂರು ಬಂದರಿನಲ್ಲಿ ಕೆಲಸ ಸಿಗಬೇಕೆಂದು, ಅಲ್ಲಿನ ಜನ ಕನ್ನಡ ಮಾತನಾಡಬೇಕೆಂದು ಅವರು ಹೇಳಿದರು. ಈ ನವ ಮಂಗಳೂರು ಬಂದರಿನಲ್ಲಿ......

ಶ್ರೀ ಎಂ. ವರದೇಗೌಡ.—ಇವರು ಏನು ಉತ್ತರ ಕೊಡುತ್ತಿದ್ದಾರೋ ಅಥವಾ ಭಾಷಣವನ್ನು ಮಾಡುತ್ತಿದ್ದಾರೋ ?

ಶ್ರೀ ಎನ್. ಎಂ. ಅಡ್ಯಂತಾಯ.—ಇವತ್ತು ಅಲ್ಲಿ ಇನ್ನೂ ನೂರು ಜನರಿಗೆ ಕೆಲಸ ಕೊಡುವಷ್ಟು ಅವಕಾಶ ಇದೆ. ಅಲ್ಲಿ ಇರುವ ನೂರಕ್ಕೆ ನೂರರಷ್ಟು ಕೆಲಸವನ್ನು ಅಲ್ಲಿನ ಸ್ಥಳೀಕರಿಗೆ ಕೊಡುವ ಬಗ್ಗೆ ಅಧ್ಯಕ್ಷರು ಭರವಸೆ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ......

ಉಪಾಧ್ಯಕ್ಷರು.—ಇನ್ನು ನೀವು ೬-೧೫ ರೊಳಗೆ ಭಾಷಣವನ್ನು ಮುಗಿಸಿ.

ಶ್ರೀ ಎನ್. ಎಂ. ಅಡ್ಯಂತಾಯ.—ನವ ಮಂಗಳೂರು ಬಂದರಿನಲ್ಲಿ ಮೊನ್ನೆ ದಿವಸ ೨೪ನೇ ತಾರೀಖಿನ ದಿವಸ......

ಶ್ರೀ ಜಿ. ನಾರಾಯಣ ಕುಮಾರ್.—ಮಂಗಳೂರಿನ ಜನ ಬಹಳ ಬುದ್ಧಿವಂತರಿದ್ದಾರೆ.

ಉಪಾಧ್ಯಕ್ಷರು,—ಅವರು ಇನ್ನು ಎರಡು ನಿಮಿಷ ಮಾತನಾಡಲಿ ಬಿಡಿ.

ಶ್ರೀ ಎನ್. ಎಂ. ಅಡ್ಯಂತಾಯ.—೨೪ನೇ ತಾರೀಖು ರಾತ್ರಿ ಸುಮಾರು ಹತ್ತೂವರೆ ಗಂಟೆಗೆ ನಡೆದ ವಿಷಯವನ್ನು ಬೇಸರದಿಂದ ಹೇಳಬೇಕಾಗುತ್ತದೆ. ಕರ್ನಾಟಕ ಸರ್ಕಾರದ ಪೋಲೀಸ್ ಅಧಿಕಾರಿಗಳು, ಒಬ್ಬ ಸಬ್ ಇನ್ಸ್‌ಪೆಕ್ಟರ್, ಒಬ್ಬ ಡಿ.ವೈ.ಎಸ್.ಪಿ. ಪ್ರೊಟೆಕ್ಟೆಟ್ ಏರಿಯಾದೊಳಗೆ ಬಂದು ಕಾರ್ಮಿಕರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಕಾರ್ಮಿಕರನ್ನು ಮಾತ್ರ ಅಲ್ಲ, ಕಾರ್ಮಿಕರನ್ನು ನಿಲ್ಲಿಸಿ, ಈ ೧೨೨೫ ಜನ ಕಾರ್ಮಿಕರನ್ನು ಕಂಟ್ರೋಲ್ ಮಾಡುವ ಅಧಿಕಾರವುಳ್ಳ ನೀವು ಎಂದು ಅವರ ಹೆಸರನ್ನು ಅನೌನ್ಸ್ ಮಾಡಿ ಇವರು ಏನೇನು ಡಿಸಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದೆ ? ಈ ಎಲ್ಲಾ ವಿಷಯದಲ್ಲಿ ಮೇಲಧಿಕಾರಿಯಾಗಿ ಕೇಂದ್ರ ಸರ್ಕಾರದ ಅಸಿಸ್ಟೆಂಟ್ ಟ್ರಾಫಿಕ್ ಮೇನೇಜರ್ ಇದ್ದಾರೆ. ಏನು ಇವರು ಅಸಿಸ್ಟೆಂಟ್ ಟ್ರಾಫಿಕ್ ಮೇನೇಜರ್ ? ಏನು ಅವರಿಗೆ ಕೋಡ್ ಆಫ್ ಎಥಿಕ್ಸ್ ಇಲ್ಲವೇನು ? ಒಬ್ಬ * * * ಸಬ್-ಇನ್ಸ್‌ಪೆಕ್ಟರ್......ಆ ಪೋಲೀಸ್ ಪೇದೆ......

(ಈ ಸಮಯದಲ್ಲಿ ಸುಮಾರು ೧೫-೨೦ ಜನ ಸದಸ್ಯರು ಒಟ್ಟಿಗೆ ಎದ್ದು ಮಾತನಾಡಲಾರಂಭಿಸಿದರು.)

ಉಪಾಧ್ಯಕ್ಷರು.—ಉಮರಬ್ಬ ಅವರೇ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಈ ರೀತಿ ಅವರು ಮಾತನಾಡುವುದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು.—ಅನಾವಶ್ಯಕವಾಗಿ ಪ್ರೊಲಾಂಗ್ ಮಾಡುವುದರಿಂದ......

ಶ್ರೀ ಬಿ. ರಾಚಯ್ಯ.—ಕಾರ್ಮಿಕ ಸಂಘಗಳಲ್ಲಿ ಅವರು ಆ ರೀತಿ ಮಾತನಾಡುವುದು ರೂಢಿಯಾಗಿದೆ. ಇವತ್ತು ಸಭೆಯ ಘನತೆ ಗೌರವ ಉಳಿದುಕೊಳ್ಳುವ ಹಾಗೆ ಅವರು ಭಾಷಣ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು.—ಅವರು ಉಪಯೋಗಿಸಿದ ಪದವನ್ನು ಕಡತದಿಂದ ತೆಗೆದುಹಾಕಬೇಕಾಗುತ್ತದೆ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ * * * ಎಂದರೆ, ಚಿಕ್ಕಪುಟ್ಟ ಅಧಿಕಾರಿಗಳಿಗೆ......

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಡಿ.ವೈ.ಎಸ್.ಪಿ.ಯಂತಹ ದೊಡ್ಡ ಅಧಿಕಾರಿಗಳಿಗೆ......

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಇದು ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯ ಪ್ರಶ್ನೆ.

(ಗೊಂದಲ)

---

* * * Expunged as ordered by the Chair.

ಉಪಾಧ್ಯಕ್ಷರು.—ಏನೇ ವಿವರಣೆ ಕೊಟ್ಟರೂ ಈ ಸದನದಲ್ಲಿ ಆ ಪದವನ್ನು ಬಳಸುವುದು ಸರಿಯಲ್ಲ. ಅದನ್ನು......

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೆ, ಒಬ್ಬ * * * ......

(ಈ ಸಮಯದಲ್ಲಿ ಶ್ರೀ ಜಿ. ನಾರಾಯಣ ಕುಮಾರ್ ಅವರು ಅಧ್ಯಕ್ಷಪೀಠದ ಮುಂದೆ ಬಂದು ಮಾನ್ಯ ಸದಸ್ಯರಾದ ಅಡ್ಯಂತಾಯ ಅವರು ಉಪಯೋಗಿಸಿದ ಪದವನ್ನು ವಾಪಸ್ ಪಡೆಯುವವರೆಗೆ ತಾವು ಧರಣಿ ಕೂರುವುದಾಗಿ ಹೇಳಿ ಅಧ್ಯಕ್ಷಪೀಠದ ಪಕ್ಕದಲ್ಲಿರುವ ಮೆಟ್ಟಿಲ ಮೇಲೆ ಧರಣಿ ಕುಳಿತರು.)

ಉಪಾಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರೇ, ತಮ್ಮ ಪದ ಪ್ರಯೋಗದ ಬಗ್ಗೆ ಸಭೆಯ ಮಾನ್ಯ ಸದಸ್ಯರು ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ತಾವು ಹೇಳಿದ ಪದವನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದ ಪಕ್ಷದಲ್ಲಿ ಆ ಪದವನ್ನು ಕಡತದಿಂದ ತೆಗೆಯುವ ಬಗ್ಗೆ ರೂಲಿಂಗ್ ಕೊಡಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ನೀವು ಏನು ಬೇಕಾದರೂ ವ್ಯಾಖ್ಯಾನ ಮಾಡಬಹುದು. ಆದರೆ......

ಶ್ರೀ ಎನ್. ಎಂ. ಅಡ್ಯಂತಾಯ.—ಸಣ್ಣಪುಟ್ಟ ಅಧಿಕಾರಿಗಳನ್ನು......

ಉಪಾಧ್ಯಕ್ಷರು.—ಹಾಗಾದರೆ ದೊಡ್ಡ ಅಧಿಕಾರಿಗಳನ್ನು ಪಂಚೆ ಎಂದು ಹೇಳುತ್ತೀರಾ ? ಅದು ಹಾಗೆ ಆಗುವುದಿಲ್ಲ. ಸಭೆಯ ಘನತೆಗೆ ತಕ್ಕಂತೆ ನಡೆದುಕೊಳ್ಳಬೇಕಾದುದು ಎಲ್ಲರ ಕರ್ತವ್ಯ. ಮಾನ್ಯ ನಾರಾಯಣ ಕುಮಾರ್ ಅವರೇ, ನೀವು ನಿಮ್ಮ ಸ್ಥಾನದ ಹತ್ತಿರ ಹೋಗಿ. ನೀವೂ ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಸದನ ಆ ಒಬ್ಬ ಸದಸ್ಯರ ಹಕ್ಕು ಅಲ್ಲ. ಕನ್ನಡವೇನೂ ಅವರ......

(ಗೊಂದಲ)

ಶ್ರೀ ಬಿ. ರಾಚಯ್ಯ.—ಮಾನ್ಯ ವೀರಪ್ಪ ಮೊಯ್ಲಿ ಅವರು ಮಂತ್ರಿಗಳಾಗಿದ್ದವರು. ಅವರು ಈ ಬಗ್ಗೆ ಭಾಷಣ ಮಾಡುವಾಗ ಒಂದಾದರೂ ಅನ್‌ಪಾರ್ಲಿಮೆಂಟರಿ ಪದವನ್ನು ಉಪಯೋಗಿಸಿದರೇ ?

ಶ್ರೀ ಎನ್. ಎಂ. ಅಡ್ಯಂತಾಯ.—ಇದು ಅನ್‌ಪಾರ್ಲಿಮೆಂಟರಿ ಎಲ್ಲಾಗುತ್ತದೆ ?

(ಗೊಂದಲ)

ಉಪಾಧ್ಯಕ್ಷರು.—ಪಾರ್ಲಿಮೆಂಟರಿ, ಅನ್‌ಪಾರ್ಲಿಮೆಂಟರಿ ಎನ್ನುವ ಪ್ರಶ್ನೆ ಅಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ಬಗ್ಗೆ ಸದನದ ಅಭಿಪ್ರಾಯ ಏನೆಂದು ಗೊತ್ತಾಗಿದೆ. ಈಗ......

(ಗೊಂದಲ)

ಉಪಾಧ್ಯಕ್ಷರು.—ಇನ್ನೂ ಎಷ್ಟು ಹೊತ್ತು ಗೊಂದಲ ಮಾಡಬೇಕೆಂದಿದ್ದೀರಿ ?

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಇಲ್ಲಿ ಅವರ ಹರಿಕಥೆಯನ್ನು ಕೇಳುವುದಕ್ಕೆ ಬಂದಿಲ್ಲ. ಈ ವಿಷಯದ ಬಗ್ಗೆ ಮಾನ್ಯ ವೀರಪ್ಪ ಮೊಯ್ಲಿಯವರು ಎರಡು ಗಂಟೆಗಳ ಕಾಲ ಮಾತನಾಡಿದ್ದಾರೆ. ಆದರೆ ಅವರು ಮಾತನಾಡುವಾಗ ಒಂದೂ ಅನ್‌ಪಾರ್ಲಿಮೆಂಟರಿ ಪದವನ್ನು ಉಪಯೋಗಿಸಿಲ್ಲ. ಆದರೆ, ಆ ಕಡೆ ಮಾನ್ಯ ಸದಸ್ಯರು ಏನೂ ಬೇಕಾದರೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಸದನದ ಗೌರವಕ್ಕೆ ತಕ್ಕಂತೆ ಅವರು ನಡೆದುಕೊಳ್ಳಬೇಕಾಗುತ್ತದೆ.

---

* * * Expunged as ordered by the Chair.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರು ಕ್ಷಮಾಪಣೆ ಕೇಳಬೇಕು. ಅವರು ಹೇಗೆಂದರೆ ಹಾಗೆ ಮಾತನಾಡುವುದು ಅಲ್ಲ. We are not prepare to allow this.

(ಗೊಂದಲ)

ಉಪಾಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸಿಂಧ್ಯ ಅವರೇ ದಯಮಾಡಿ ಕುಳಿತುಕೊಳ್ಳಿ. I am on my legs. ನಾನು ನಿಂತುಕೊಂಡಾಗ ಸದಸ್ಯರು ಕುಳಿತುಕೊಳ್ಳಬೇಕಾಗುತ್ತದೆ. ಸಿಂಧ್ಯಾ ಅವರೇ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸಭಾಧ್ಯಕ್ಷರಿಗೆ, ನಾನು ನನ್ನ ಅಭಿಪ್ರಾಯಗಳನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ದಯಮಾಡಿ ಇಬ್ಬರೂ ಕುಳಿತುಕೊಳ್ಳಿ. ಸ್ವಾಮಿರಾವ್, ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಅನ್‌ಪಾರ್ಲಿಮೆಂಟರಿ ಶಬ್ದ ಇದನ್ನು ತೆಗೆದುಹಾಕಿ ಎಂದು ಹೇಳುವುದು ಸರಿಯಲ್ಲ......

ಶ್ರೀ ಬಿ. ರಾಚಯ್ಯ.—ತಾವು ಒಳ್ಳೆಯ ಅನುಭವಿಗಳು, ವಿರೋಧ ಪಕ್ಷದ ನಾಯಕರಾಗಿದ್ದವರು, ಮಂತ್ರಿಯಾಗಿದ್ದವರು. ತಾವು ಈ ಪದದ ಉಪಯೋಗ ಸರಿಯೆಂದು ಹೇಳಿ. ಇದು ಶಾಸನ ಸಭೆ, ಮಾರ್ಕೆಟ್ಟು ಅಲ್ಲ. ಇಂತಹ ಪದಗಳನ್ನು ಅಲ್ಲಿ ಮಾತನಾಡಬಹುದೇ, ಇಲ್ಲಿ ಆ ರೀತಿ ಮಾತನಾಡುವ ಹಾಗೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸನ್ಮಾನ್ಯ ಸದಸ್ಯರು ಮಾತನಾಡುವಾಗ, ವಾತಾವರಣ ಏನಾಗಿದೆ, ಎಂದರೆ ಉದ್ವೇಗದ ವಾತಾವಣ ಬಂದುಬಿಟ್ಟಿದೆ. ಈ ಉದ್ವೇಗದ ವಾತಾವರಣಕ್ಕೆ ಬೆಂಕಿಹಚ್ಚಿದವರು ಹೊರಟು ಹೋಗಿದ್ದಾರೆ. ಬಹಳ ಶಾಂತಿಯುತವಾಗಿ, ಬಹಳ ಕಡಿಮೆ ಸಮಯದಲ್ಲಿ ಗಂಭೀರವಾಗಿ ಮಾತನಾಡಿದ್ದರೆ, ಬಹುಶಃ ಇದು ಇತ್ಯರ್ಥವಾಗಿ ಎಲ್ಲಾ ಪರಿಸಮಾಪ್ತಿಯಾಗುತ್ತಿತ್ತು. ಉದ್ವೇಗದ ವಾತಾವರಣಕ್ಕೆ ಒಂದು ಕೈ ಬೀಸಿದರೆ ಕೈಚಪ್ಪಾಳೆ ಆಗುವುದಿಲ್ಲ. ಎರಡೂ ಕೈ ಬೀಸಿದರೇನೇ ಚಪ್ಪಾಳೆಯಾಗುವುದು. ಉದ್ವೇಗದ ವಾತಾವರಣದಲ್ಲಿ ಮಾತನಾಡುವಾಗ ಕೆಲವು ಶಬ್ದಗಳು ಕೂಡ ತಪ್ಪಿ ಬರುತ್ತವೆ. ಹಾಗೆ ತಪ್ಪಾಗಿದ್ದರೆ ಅದನ್ನು ಪರಿಹಾರ ಮಾಡಲಿಕ್ಕೆ ಮಾರ್ಗ ಇದೆ, ತಪ್ಪಿದ್ದೀರಿ ಎಂದು ಹೇಳಿದರೆ, ಯಾವ ಅರ್ಥದಲ್ಲಿ ಹಾಗೆ ಹೇಳಿದ್ದೇನೆ ಎಂದು ಅವರು ಹೇಳುತ್ತಾರೆ. ತಪ್ಪಾಗಿದ್ದರೆ ಅದನ್ನು ಒಪ್ಪುತ್ತಾರೆ......

ಶ್ರೀ ಬಿ. ರಾಚಯ್ಯ.—ನೀವು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದವರು. ದಯಮಾಡಿಟ್ಟು ವಿಷಯವನ್ನು ತೇಲಿಸಿಕೊಂಡು ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಲ್ಲ. ಇಲ್ಲಿ ಯಾರನ್ನೂ ಅವಮಾನ ಮಾಡಬೇಕು ಅಂತ ಅಲ್ಲ. ಆ ಶಬ್ದವನ್ನು ಕಡತದಿಂದ ತೆಗೆದುಹಾಕಬೇಕು ಅಂತ ಹೇಳಿದ್ದೀರಿ. ತೆಗೆಯುವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಅದನ್ನು ತೆಗೆಯಬಾರದು ಎಂದು ಯಾರೂ ಇಲ್ಲಿ ಚರ್ಚೆ ಮಾಡಿಲ್ಲ. ಆದ್ದರಿಂದ ಇಲ್ಲಿಗೇ, ಪರಿಸಮಾಪ್ತಿ ಮಾಡಿ. ಆದರೆ, ಒಂದು ವಿಷಯ ಮಾತ್ರ ನನಗೆ ಆಶ್ಚರ್ಯವಾಗಿದೆ. ಟ್ರೆಜರಿ ಬೆಂಚಿನವರು ಒಂದು ಶಬ್ದವನ್ನು ವಿತ್‌ಡ್ರಾ ಮಾಡಬೇಕೆಂದು ಈ ತರಹ ನಿಯಮ ಉಲ್ಲಂಘನೆ ಮಾಡಿ ಈ ತರಹ ಸ್ಪೀಕರ್ ಬಾಕ್ಸ್ ಹತ್ತಿರ ಕುಳಿತುಕೊಂಡು ಗಲಾಟೆ ಮಾಡಿದ್ದನ್ನು ನಾನು ನೋಡಿರಲಿಲ್ಲ. ಆದ್ದರಿಂದ ಅವರು ಸ್ವಲ್ಪ ತಾಳ್ಮೆಯಿಂದ ಇರಬೇಕಾಗುತ್ತದೆ. ವಿರೋಧಪಕ್ಷ ಅಂದ ಮೇಲೆ, ಕೆಲವು ಸಲ ಕೆಲವು ಶಬ್ದಗಳ ಉಪಯೋಗ ಆಗುತ್ತದೆ. ಉಪಯೋಗವಾದಂಥ ಶಬ್ದವನ್ನು ತೆಗೆಯಲಿಕ್ಕೆ ನಮ್ಮದು ಯಾರದ್ದೂ ಆಕ್ಷೇಪಣೆ ಇಲ್ಲ, ಅಂತಹ ಪದಗಳ ಉಪಯೋಗ ಮಾಡುವುದು ಬೇಡ. ಆದರೆ ಈ ರೀತಿಯಲ್ಲಿ ಟ್ರೆಜರಿ ಬೆಂಚಿನವರು ವರ್ತನೆ ಮಾಡಿದರೆ, ಅದು ಬೇಜವಾಬ್ದಾರಿತನದ ವರ್ತನೆಯೆಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಈಗಾಗಲೇ ನಾನು ಹೇಳಿದ್ದೇನೆ ಮಾನ್ಯ ಸದಸ್ಯರು, ಆಡಿದ ಮಾತನ್ನು ಹಿಂದಕ್ಕೆ ಪಡೆಯಬೇಕು. ಇಲ್ಲದಿದ್ದರೆ ಅದನ್ನು ಕಡತದಿಂದ ತೆಗೆದುಹಾಕುವುದಕ್ಕೆ ಆಜ್ಞೆ ಮಾಡುತ್ತೇನೆ ಎಂದು

ಹೇಳಿದ್ದೇನೆ. ಆದ್ದರಿಂದ ನೀವು ಶ್ರೀ ನಾರಾಯಣಕುಮಾರ್ ರವರೇ ನೀವು ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ.

(ಶ್ರೀ ಜಿ. ನಾರಾಯಣಕುಮಾರ್ ಅವರು ತಮ್ಮ ಸ್ಥಾನಕ್ಕೆ ಮರಳಿದರು)

ಉಪಾಧ್ಯಕ್ಷರು.—ಆದ್ದರಿಂದ ಮಾನ್ಯ ಸದಸ್ಯರು ವಿಷಾದ ವ್ಯಕ್ತಪಡಿಸುವುದು ಒಳ್ಳೆಯದೆಂದು ಭಾವಿಸುತ್ತೇನೆ. ಎಷ್ಟೋ ವಿಷಯಗಳನ್ನು ಸಭೆಯ ನಡವಳಿಕೆಗಳಲ್ಲಿ ಅನುಭವದಿಂದ ಕಲಿತುಕೊಳ್ಳ ಬೇಕಾಗುತ್ತದೆ.

ಶ್ರೀ ಎನ್, ಎಂ ಅಡ್ಯಂತಾಯ.—ನಾನು ಯಾವುದೇ ಒಂದು ಶಬ್ದವನ್ನು ಯಾರನ್ನೂ ಹಿಯ್ಯಾಳಿ ಸಲಿಕ್ಕೆ ಹೇಳಿದ್ದು ಅಲ್ಲ. ಕೋಡರ್ ಆಫ್ ಸರ್ವಿಸ್ ಅಂಡ್ ಕಾಂಡಕ್ಟ್ ಪ್ರಕಾರ ಒಬ್ಬ ಅಧಿಕಾರಿ, ತನಗಿಂತ ಮೇಲ್ದರ್ಜೆಯಲ್ಲಿರತಕ್ಕಂಥ ಅಧಿಕಾರಿ ಮೇಲೆ ಕೈಮಾಡುವಹಾಗಿಲ್ಲ. ***ಇಲ್ಲಿ ಅಧಿಕಾರಿ ಎಂಬ ರೀತಿಯಲ್ಲಿ ಹೇಳಿದ್ದರಿಂದ, ಏನಾದರೂ ಇದರಲ್ಲಿ ತಪ್ಪಾಗಿದ್ದರೆ ನಾನು ಅದನ್ನು ಹಿಂದಕ್ಕೆ ತೆಗೆದು ಕೊಳ್ಳುತ್ತೇನೆ.***

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಒಂದು ವಿಷಯ ಕೇಳಿಬಿಡುತ್ತೇನೆ. ನೀರಾವರಿ ರಾಜ್ಯ ಸಚಿವರನ್ನು ಹೇಗೆ ಕರೆಯಬೇಕು? ಚಿಕ್ಕ ನೀರಾವರಿ ಮಂತ್ರಿ ಯೆಂದು.. ...

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇದು ಒಂದು ಕೊನೆಗೆ ಬಂದಿದೆ. ಮಾನ್ಯ ಸದಸ್ಯರು ವಿಶಾದ ವ್ಯಕ್ತ ಪಡಿಸಿದ್ದಾರೆ. ನೀವು ಮಂತ್ರಿಗಳನ್ನು ಸಣ್ಣ ಮಂತ್ರಿಯೆಂದೇ ಕರೆಯಿರಿ. ದೊಡ್ಡಮಂತ್ರಿಯೆಂದೇ ಕರೆಯಿರಿ ಜನತೆಯ ದೃಷ್ಟಿಯಿಂದ ಏನು ಎನ್ನುವುದು ತೀರ್ಮಾನವಾಗುತ್ತದೆ. ಸದನದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬುದನ್ನು ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಆ ದೃಷ್ಟಿ ಯಿಂದ ಈ ಚರ್ಚೆಯನ್ನು ಮುಗಿಸಬೇಕಾದುದು ಸೂಕ್ತ.

ಶ್ರೀ ಎಂ. ಪಿ. ಪ್ರಕಾಶ್.—ಉಪಾಧ್ಯಕ್ಷರೇ, ಚೀಫ್ ವಿಪ್ ಅವರನ್ನು ಚೀಪ್‌ವಿಪ್ ಅಂತ ಕರೆದರೆ ಏನು ಆಗಬಹುದು?

ಶ್ರೀ ಬಿ. ಸ್ವಾಮಿರಾವ್.—ಇದು ಯಾವ ದೊಡ್ಡ ಅಪರಾಧವೆಂದು ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ ಹಳ್ಳಿಯ ಭಾಷೆಯಲ್ಲಿ......

ಉಪಾಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಮಾತನಾಡಲಿಕ್ಕೆ ನಾನು ಅವಕಾಶ ಕೊಟ್ಟಿಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಸನ್ಮಾನ್ಯ ಉಪಾಧ್ಯಕ್ಷರೇ, ೨೫ನೇ ತಾರೀಕು ರಾತ್ರಿ ಈ ಪ್ರೊಟೆಕ್ಟೆಡ್ ಏರಿಯಾದಲ್ಲಿ, ಅಂತರಾಷ್ಟ್ರೀಯ ಬಂದರಾಗಲೀ, ಇನ್ನೊಂದೇ ಆಗಲಿ, ಅಂತಹ ಸ್ಥಳಗಳ ಒಳಗಡೆ ಹೋಗಬೇಕಾದರೆ ಅಲ್ಲಿ ಕಸ್ಟಮ್ಸ್ ಎಂಕ್ಲೋಜರ್ಸ್ ಕೂಡ ಇದೆ. ಈ ಕಸ್ಟಮ್ಸ್ ಎಂಕ್ಲೋಜರ್ಸ್ ಒಳಗಡೆಹೋಗಿ, ಅಲ್ಲಿ ಅವರಿಗಿಂತ ಸೇವೆಯಲ್ಲಿ ಅತ್ಯಂತ ಹಿರಿಯರಾದ ಅಧಿಕಾರಿಗಳ ಮೇಲೆ ಮತ್ತು ಕಾರ್ಮಿಕರ ಮೇಲೆ ದಪ್ಪ ಲಾಟಿಯಿಂದ ಹೊಡದರೆ ಏನಾಗುತ್ತದೆ ಎಂದು ಅವರ ಹತ್ತಿರ ಭಾಷಣ ಬಿಗಿದು. ನಂತರ ವ್ಯಾನಿನಲ್ಲಿ ದೂಡಿ, ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಮೂರು ಗಂಟೆಯವರಿಗೆ ಲಾಕಪ್‌ನಲ್ಲಿ ಇಟ್ಟಿದ್ದಾರೆ. ಅದಲ್ಲದೆ, ೨೫ನೇ ತಾರೀಕು, ನವಮಂಗಳೂರು ಬಂದರಿನ ಒಳಹೋಗಿ ಅವರ ಮೇಲೆ ಹೊಡೆದಿದ್ದರಿಂದ, ಅರೆಸ್ಟ್ ಮಾಡಿದ್ದರಿಂದ ಅವರಿಗೆ ಸರ್ವಿಸ್ ಅಂಡ್ ಕಾಂಡಕ್ಟ್ ರೂಲ್ಸ್ ಅಪ್ಲೈ ಆಗುತ್ತದೆ. ಆದ್ದರಿಂದ ಅವರು ಬೆಳಗಿನ ಜಾವ ಮೂರು ಗಂಟೆಗೆ ನವಮಂಗಳೂರು ಬಂದರಿನ ಅಧ್ಯಕ್ಷರಲ್ಲಿ ದೂರು ಕೊಟ್ಟಕೂಡಲೇ, ಅವರು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೋಲೀಸ್ ಅಧಿಕಾರಿಗಳು ಹಾಗೂ ಡಿ.ಐ.ಜಿ. ಯವರಿಗೆ ಫೋನು ಮೂಲಕ ಕಂಪ್ಲೇಂಟು ಕೊಟ್ಟು ವಿಚಾರಣೆ ನಡೆಸುವಂತೆ ಹೇಳಿ ದ್ದಾರೆ. ಅದರಂತೆ,ಈ ಮೂರೂ ಜನ ಅಧಿಕಾರಿಗಳು,ನವಮಂಗಳೂರು ಬಂದರಿಗೆ ಬಂದು ತಪಾಸಣೆ ನಡೆಸಿ ದ್ದಾರೆ. ಅದನ್ನು ಚೇರ್ಮನ್ನರ ಸಮ್ಮುಖದಲ್ಲೇ ಮಾಡಿದ್ದಾರೆ. ಬೆಳಿಗ್ಗೆ ೧೧ ಗಂಟೆಯಿಂದ ಸುಮಾರು ಒಂದೂವರೆ ಗಂಟೆವರೆಗೆ ನವಮಂಗಳೂರು ಬಂದರಿನ ಸೆಂಟ್ರಲ್ ಸೆಕ್ಯೂರಿಟಿಫೋರ್ಸ್‌ನ ಅಸಿಸ್ಟೆಂಟ್ ಕಮಾಂಡೆಂಟ್ ಅವರ ಸಮ್ಮುಖದಲ್ಲೇ ಅನ್ವೇಷಣೆ ನಡೆದದ್ದು ಒಳಗಡೆ ಸಂಪೂರ್ಣವಾಗಿ ಅವರಿಗೆ ಮನ

* Matter expanded as order by the Chain.

ವರಿಕೆಯಾಗಿದೆ. ಈ ಪೋಲೀಸ್ ಅಧಿಕಾರಿಗಳು ಕುಡಿದು ಮತ್ತರಾಗಿ ಹೊಡೆದಿದ್ದಾರೆ ಎಂಬುದು ಕೂಡ ಹೊರಬಿದ್ದಿದೆ. ಮಾನ್ಯ ವೀರಪ್ಪ ಮೊಯ್ಲಿಯವರು ಈ ವಿಷಯವನ್ನು ಉಲ್ಲೇಖ ಮಾಡಿದ್ದಾರೆ. ಪೇಪರ್‌ನಲ್ಲಿ ಬಂದಿದೆ. ಈ ಅಧಿಕಾರಿಗಳು ಮಾಡಿದ ತಪ್ಪನ್ನು ಮುಚ್ಚಿಡುವ ಪ್ರಯತ್ನವನ್ನು ಅನಂತರ ದಕ್ಷಿಣ ಕನ್ನಡ ಜಿಲ್ಲೆಯ ಪೋಲೀಸ್ ಅಧಿಕಾರಿಗಳು ಮಾಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಅವರು ದೊಡ್ಡ ರಾಜಕೀಯ ಮುಖಂಡರಾಗಿ ಪ್ರತಿಸಲವೂ ಪ್ರೆಸ್ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ.

ಮಂಗಳೂರು ಹಾರ್ಬರ್ ಏಜೆನ್ಸಿ ಎಂದು ಏನು ಇದೆ ಅವರ ಹತ್ತಿರ ಅನ್ವೇಷನ್ ಮಾಡಬೇಕೆಂದು ಏನು ಮಾಡಿರುತ್ತಾರೆ ಅವರ ಹತ್ತಿರ ಅರ್ಧಗಂಟೆಗಳ ಕಾಲ ಎನ್‌ಕ್ವೈಯರಿ ಮಾಡಿ ಪ್ರೆಸ್ ಸ್ಟೇಟ್‌ಮೆಂಟ್ ಕೊಡುವಾಗ್ಗೆ ಒಂದು ದೊಡ್ಡ ರಾಜಕೀಯವನ್ನೇ ಮಾಡಿದ್ದಾರೆ. ಆದುದರಿಂದ ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನವಮಂಗಳೂರು ಬಂದರು ಏನು ಇರುತ್ತದೆ ಅದು ಒಂದು ಒಳ್ಳೆಯ ಬಂದರಾಗಿರುತ್ತದೆ. ಅಂಥ ಒಂದು ಬಂದರನ್ನು ದಯವಿಟ್ಟು ಹಾಳುಮಾಡಬಾರದು. ಅದೇರೀತಿಯಲ್ಲಿ ಸೆಂಟ್ರಲ್ ಸೆಕ್ಯೂರಿಟಿ ಫೋರ್ಸ್ ನವಮಂಗಳೂರು ಬಂದರು ಬಗ್ಗೆ ಚೇರ್‌ಮನ್‌ರವರು ಜಿಲ್ಲಾಧಿಕಾರಿಗಳಿಗೆ ಬರೆದಂಥ ಒಂದು ಕಾಗದಲ್ಲಿ ಸಂಪೂರ್ಣವಾಗಿ, ವಿವರವಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ನವಮಂಗಳೂರು ಬಂದರಿನ ಎಲ್ಲ ಅಧಿಕಾರಿವರ್ಗದವರು ಪೋಲೀಸ್ ದೌರ್ಜನಕ್ಕೆ ಒಳಗಾಗಿದ್ದಾರೆ. I quote from the letter of the Chairman of New Mangalore Port addressed to Deputy Commissioner, Dakshina Kannada district. "Dear Shri Sudhir Krishna, this is in continuation of our discussions on the morning of 25th August 1985 with regard to the police action against three of my officers inside the security area by the Police officers, viz Sub-Inspector of Police and the Dy. Superintendent of Police who have entered into the Wharf and assaulted one of the Assistant Traffic Managers. Instead of helping the Administration in keeping up the law and order. If the officers of the Port are threatened or discouraged in such a provocative manner, I do not know how I could infuse confidence in my officers."

ಸನ್ಮಾನ್ಯ ಅಧ್ಯಕ್ಷರೇ ನವಮಂಗಳೂರು ಬಂದರು ಚೇರ್ಮನ್‌ರವರು ಈ ರೀತಿಯಾಗಿ ಒಂದು ಕಾಗದವನ್ನು ಬರೆಯುವಾಗ ಈ ವಿಷಯ ದೊಡ್ಡ ಗಂಭೀರವಾದ ವಿಷಯವೇ ಆಗಿರುತ್ತದೆ. ಅದನ್ನು ಹಾಗೆಯೇ ಬಿಡಲಿಕ್ಕೆ ಆಗುವುದಿಲ್ಲ. ಲೀಗಲ್ ಆಗಿ ಎನ್‌ಕ್ವಯರಿ ಆಗುವಂತೆ ಪೋಲೀಸ್ ಅಧಿಕಾರಿಗಳಿಂದ ಎನ್‌ಕ್ವಯರಿ ಮಾಡುವಂಥ ಪ್ರಶ್ನೆ ತರಬಾರದು. ಏತಕ್ಕೆಂದರೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಮೇಲೆ ಡಿಮಾರಲೈಸ್ ಆಗಿದೆ ಅವರು ಬರೆದಿರತಕ್ಕಂಥದ್ದು ಬಹಳ ಮೂಲಭೂತವಾದ ಪ್ರಶ್ನೆಯಾಗಿರುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕರ್ನಾಟಕದ ಪೋಲೀಸ್ ಅಧಿಕಾರಿಗಳು ಬಹಳ ಉತ್ತಮವಾದ ಪೋಲೀಸ್ ಅಧಿಕಾರಿಗಳೆಂದು ಬಹಳ ಹಿಂದೆ ಇತ್ತು. ಮೊನ್ನೆ ದಿವಸ ಒಂದು ಪತ್ರಿಕೆಯಲ್ಲೂ ಕೂಡ ಬಂದಿದೆ. ರಿಟೈರ್ಡ್ ಕಸ್ಟಮ್ ಅಧಿಕಾರಿಗಳ ಮನೆಯನ್ನು ರೈಡ್ ಮಾಡುವಾಗ, ಒಂದು ರೈಡ್ ಮಾಡುವಂಥ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಬಾರ್ಡರ್ ಸೆಕ್ಯೂರಿಟಿ ಫೋರ್ಸ್‌ನವರ ಸರ್ವೀಸನ್ನು ಬಳಕೆ ಮಾಡಬೇಕಾದ ಸಂದರ್ಭ ಬಂದಿತು. ಏತಕ್ಕೋಸ್ಕರವೆಂದರೆ ಈ ಅಧಿಕಾರಿ ವರ್ಗದವರನ್ನು ಉಪಯೋಗ ಮಾಡಿದರೆ ಸೆಕ್ಯೂರಿಟಿಯಲ್ಲಿ ಲೀಕ್‌ಔಟ್ ಆಗುತ್ತದೆ ಎನ್ನುವ ಸಂಶಯದಿಂದಾಗಿ ಈ ರೀತಿಯಾಗಿ ಮಾಡಲಾಯಿತು. ಅಂದರೆ ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಯನ್ನು ಹಿಡಿಯಬೇಕಾದರೆ ಇಂದು ಇದು ಒಂದು ಉದಾಹರಣೆಯಾಗಿದೆ ಅದೇ ರೀತಿಯಲ್ಲಿ ನವಮಂಗಳೂರು ಬಂದರು ಚೇರ್‌ಮನ್‌ನವರಿಗೂ ಆದಂಥ ಒಂದು ಉದಾಹರಣೆಯಾಗಿದೆ. ಇದನ್ನೆಲ್ಲಾ ಮಾನ್ಯ ರಾಚಯ್ಯನವರು ನೋಡಬೇಕು ಒಬ್ಬ ಪರಿಶಿಷ್ಟ ಜಾತಿಯ ಅಧಿಕಾರಿಯ ಬಗ್ಗೆ ಅವರ ಜೀವಕ್ಕೆ ಧಕ್ಕೆ ತರತಕ್ಕಂಥ ಬೆದರಿಕೆಯ ರಿಪೋರ್ಟ್ ಹೋಗಿದೆ. ಅದು ಕರ್ನಾಟಕ ಸರ್ಕಾರಕ್ಕೂ ಬಂದಿರುತ್ತದೆ. ಇದು ಒಂದು ಗುರುತರವಾದ ಪ್ರಶ್ನೆಯಾಗಿರುತ್ತದೆ. ಆದ್ದರಿಂದ ಇದರ ಬಗ್ಗೆ ಸಿ.ಬಿ.ಐ ಎನ್‌ಕ್ವಯರಿ ಮಾಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಕರ್ನಾಟಕದಲ್ಲಿ ಕೇಂದ್ರ ಬಂದರು, ಮತ್ತಿತರ ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಘ ಸಂಸ್ಥೆಗಳು ನೂರಾರು ಇರುತ್ತವೆ. ಕರ್ನಾಟಕದಲ್ಲಿ ಜನತಾ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ ಎಚ್.ಎಂ.ಎಸ್ ಕಟ್ಟುವುದಾಗಲಿ, ಸಿ.ಪಿ.ಐ. ಕಟ್ಟುವುದಾಗಲಿ, ಐ.ಎನ್.ಟಿ.ಯು.ಸಿ, ಕಟ್ಟುವುದಕ್ಕಾಗಲಿ ಅಡ್ಡಿ ಬಂದಿಲ್ಲ. ಪೋಲೀಸ್ ಅಧಿಕಾರಿಗಳನ್ನು ಎಂದೂ ಬಳಸಿಲ್ಲ. ಆದರೆ ಈವತ್ತು ನವಮಂಗಳೂರು ಬಂದರಿನಲ್ಲಿ ಎಚ್.ಎಂ.ಎಸ್ ಇರಲಿ, ಅಥವಾ ಐ.ಎನ್.ಟಿ.ಯು.ಸಿ ಯಾವುದೇ ಇರಲಿ, ನಮ್ಮ ಜನತಾ ಸರ್ಕಾರವನ್ನು ಕೆಳಕ್ಕೆ ಬೀಳಿಸುವುದಕ್ಕೆ ಆಗುವುದಿಲ್ಲ. ಎಚ್.ಎಂ.ಎಸ್. ನವರಿಗೆ ಬೈಬಲ ನೀಡುವುದಕ್ಕಾಗಿ ಅಲ್ಲಿ ಪೋಲೀಸ್ ನವರ ಸಹಾಯ ಪಡೆದಿದ್ದಾರೆ. ಎಂದು ಹೇಳುವುದರಲ್ಲಿ ಸ್ವಲ್ಪವೂ ಕೂಡ ಆಧಾರವಿಲ್ಲ. ಕರ್ನಾಟಕದ ಇತಿಹಾಸದಲ್ಲಿ ರಾಜಕೀಯದಲ್ಲಿ ಪೋಲೀಸ್ ಕಾರ್ಯ ಮಾಡಿದೆ ಎನ್ನುವ ಒಂದು ಮಾತನ್ನು ಮಾನ್ಯ ಮೊಯಿಲಿಯವರು ಬಹಳ ಚೆನ್ನಾಗಿ ಹೇಳಿದರು. ಕರ್ನಾಟಕದ ಪೋಲೀಸ್‌ನವರಿಗೆ ಉಜ್ವಲ ಪರಂಪರೆ ಇದೆ ಎಂದು ಮಾನ್ಯ ಮೊಯಿಲಿಯವರು ಈಗತಾನೇ ಹೇಳಿದರು. ಕರ್ನಾಟಕ ಪೋಲೀಸ್‌ನವರಲ್ಲಿ ಒಂದು ಉಜ್ವಲವಾದ ಪರಂಪರೆ ಇದೆ ಎಂದು ಮಾನ್ಯ ಮೊಯಿಲಿಯವರು ಪೀಠಿಕೆಯನ್ನು ಹಾಕಿದಾಗಲೇ ಇವರು ಯಾವುದೋ ಒಂದು ಸೂತ್ರದ ದಾರವನ್ನು ಹಿಡಿಯುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ಮಧ್ಯದಲ್ಲಿ ಪರಿಸ್ಥಿತಿ ಬದಲಾಗಿ ಯಾವುದೋ ಒಂದು ವಿಕೋಪಕ್ಕೆ ಹೋಯಿತು. ನಾನು ಇಷ್ಟು ಮಾತ್ರ ಹೇಳುತ್ತೇನೆ. ಯಾವುದೋ ರಾಜಕೀಯಕ್ಕೋಸ್ಕರವಾಗಿ ಅಲ್ಲಿಯ ಕಾರ್ಮಿಕರು ಏನು ಇರುತ್ತಾರೆ ಅವರನ್ನು ಬಲಿಕೊಡುವುದು ಬೇಡವೆಂದು ಪ್ರಪ್ರಥಮವಾಗಿ ಈ ಸಭೆಯಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿಗೆ ಸೇರಿದ ಆ ಅಧ್ಯಕ್ಷರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಸ್ನೇಹಿತರು ಹೇಳಿದಹಾಗೆ ಅವರಿಗೆ ಪ್ರಮೋಷನ್ ಕೊಡುವ ಬಗ್ಗೆ ನಾವು ಕೂಡ ಸಪೋರ್ಟ್ ಮಾಡುತ್ತೇನೆ. ಇನ್ನೂ ದೊಡ್ಡ ಕೆಲಸಕ್ಕೆ ಅವರು ಹೋಗಲಿ. ಅದಕ್ಕೆ ನಾವು ಸಪೋರ್ಟ್ ಮಾಡುತ್ತೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ ಅವರು ಪರಿಶಿಷ್ಟ ಜಾತಿಗೆ ಸೇರಿದವರು ಎನ್ನುವ ಕಾರಣಕ್ಕಾಗಿ ನಾವು ಅವರ ವಿರೋಧವಾಗಿದ್ದೇವೆ. ಎನ್ನುವ ಭಾವನೆಯಲ್ಲಿ ಹೇಳಿದರು. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅವರಿಗೆ ಇನ್ನೂ ದೊಡ್ಡ ಜಾಗವನ್ನು ಕೊಡಲಿ, ಅವರಮೇಲೆ ನಮಗೆ ಯಾವ ವಿಧವಾದ ವೈಯಕ್ತಿಕ ವಿರೋಧವಿಲ್ಲ. ಆದರೆ ನಿಮ್ಮ ಪಕ್ಷದವರು ಯಾವುದೋ ಒಂದು ನೆವ ತೆಗೆದುಕೊಂಡು ರಕ್ಷಣೆಯನ್ನು ಕೊಡುವುದಕ್ಕೆ ಹೋಗಬೇಡಿ. ಮೂಲ ಪ್ರಶ್ನೆ ಹೇಳುತ್ತಿದ್ದೇನೆ. ಸ್ವಾಮಿ ನಿಮ್ಮದೇ ಸರ್ಕಾರವಿರಲಿ, ಯಾರದೇ ಸರ್ಕಾರ ನಡೆಯುತ್ತಿರಲಿ, ಶ್ರೀಮಾನ್ ಮೊಯಿಲಿಯವರ ಮತ್ತು ಮಾನ್ಯ ಖರ್ಗೆಯವರ ಸರ್ಕಾರ ನಡೆಯುತ್ತಿರಲಿ, ರಾಜ್ಯ ಸರ್ಕಾರದಮೇಲೆ ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿ ಆಕ್ಷೇಪಣೆಯನ್ನು ಕಳುಹಿಸಿದರೆ ಯಾರು ಪ್ರಜಾ ಪ್ರಭುತ್ವದ ಮೂಲ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ, ಬ್ಯೂರೋಕ್ರಟಿಕ್ ಸಿಸ್ಟಮ್, ಒಪ್ಪಿಕೊಂಡಿದ್ದಾರೆ ಅಂಥವರೂ ಕೂಡ ಇದನ್ನು ವಿರೋಧ ಮಾಡುತ್ತಿದ್ದರೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದು ವೈಯಕ್ತಿಕವಾದ ಪ್ರಶ್ನೆಯಲ್ಲ ಇದು ರಾಜಕೀಯ ಮೂಲ ಸಿದ್ಧಾಂತಕ್ಕೆ ಕೊಡಲಿ ಪೆಟ್ಟನ್ನು ಕೊಡತಕ್ಕಂಥದ್ದಾಗಿರುತ್ತದೆ. ಈ ದೃಷ್ಟಿಯಿಂದ ನಾನು ಇಷ್ಟು ಮಾತ್ರ ಹೇಳುತ್ತಿದ್ದೇನೆ. ಮಾನ್ಯ ಶ್ರೀನಿವಾಸ್‌ರವರು ಒಂದು ಮಾತನ್ನು ಹೇಳಿದರು ಪೋಲೀಸ್‌ನವರು ರಕ್ಷಣೆ ಕೊಡಲಿಲ್ಲವೆಂದು. ಬೆಂಗಳೂರು ನಗರದಲ್ಲಿ ನಿಜಾಮುದ್ದೀನ್‌ರವರಿಗೂ ರಕ್ಷಣೆ ಸಿಕ್ಕಿಲ್ಲ. ದೊಡ್ಡ ಪೋಲೀಸ್ ಅಧಿಕಾರಿಗಳ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಇದರ ಬಗ್ಗೆ ತನಿಖೆ ಮಾಡಲು ಸಿ.ಬಿ.ಐ ಗೆ ಏತಕ್ಕೆ ಸ್ವಾಮಿ ಕೊಡಬೇಕು? ಶ್ರೀಮಾನ್ ಮೊಯಿಲಿಯವರೇ ಹೇಳಿರುವಂತೆ ಕರ್ನಾಟಕದ ಪೋಲೀಸ್‌ನವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಮತ್ತೆ ಶ್ರೀಮಾನ್ ರಾಚಯ್ಯನವರು ಒಳ್ಳೆಯ ಪ್ರಾಮಾಣಿಕ ಹೋಮ್ ಮಿನಿಸ್ಟರ್ ಆಗಿದ್ದಾರೆಂದು ಹೇಳಿರುತ್ತಾರೆ. ನಾವು ಏನು ಮಾಡುತ್ತಿದ್ದೇವೆಂದರೆ. We are discussing the subject on the basis of involvement of political system in democracy. A Pinch of salt is necessary for food, but too much of salt is bad and it spoils the food.

ಇವತ್ತು ಮಾನ್ಯ ರಾಚಯ್ಯನವರು ಬಹಳ ಒಳ್ಳೆಯವರು ಇದ್ದಾರೆ. ಆದರೆ ತನಿಖೆ ಮಾಡಿದರೆ ಕೆಟ್ಟದ್ದು ಆಗುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ಆ ಮಾತು ಈಗ ಬೇಡ. ಈ ವಿಷಯವನ್ನು ತಾವು ಸರ್ಕಾರಕ್ಕೆ ಬಿಡಿ. ಇವತ್ತು ಯಾರೇ ತಪ್ಪು ಮಾಡಿರಲಿ. ವಿಚಾರಣೆಯಾದ ಮೇಲೆ ತಪ್ಪು ಆದವರಿಗೆ

ಶಿಕ್ಷೆಯಾಗುತ್ತದೆ. ಇವತ್ತು ಆ ಬಂದರು, ನಮ್ಮ ಬಂದರು, ಕರ್ನಾಟಕ ರಾಜ್ಯದ ಬಂದರು ಅದು ಕರ್ನಾಟಕದ ಖನಿಜ. ಇದು ಚೆನ್ನಾಗಿ ಬೆಳೆಯಬೇಕು ಹಾಗೂ ಬಾಳಬೇಕು. ಈ ದೃಷ್ಟಿಯಿಂದ ನಾವು ಪರಸ್ಪರ ರಾಜಕೀಯ ಗುದ್ದಾಟವನ್ನು ಬಿಟ್ಟು ಅದನ್ನು ಉಳಿಸುವ ಬಗ್ಗೆ ಒಟ್ಟಿಗೆ ಕೆಲಸ ಮಾಡೋಣ. ಆ ಕೆಲಸ ಮಾಡುವುದಕ್ಕೆ, ತನಿಖೆ ಮಾಡುವುದಕ್ಕೆ ನಾವು ಪೂರ್ಣ ಸಹಕಾರ ಮಾಡೋಣವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಸದಸ್ಯರು, ನಿಯಮ ೩೩೪ರ ಕೆಳಗೆ ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಾಗಲೇ ನಾನು ಇದರ ಬಗ್ಗೆ ಧೀರ್ಘವಾಗಿ ಚರ್ಚೆಯಾಗಲಿ ಎಂದು ಹೇಳಿದ್ದರ ಉದ್ದೇಶ ಈ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬುದು ಆಗಿತ್ತು. ಆದರೆ ಇವತ್ತು ಈ ಒಂದು ಚರ್ಚೆಯಲ್ಲಿ ಬಂದ ಅಂಶಗಳನ್ನು ನೋಡಿದರೆ ಮುಖ್ಯವಾಗಿ ಇಲ್ಲಿ ಎರಡು ಸಂಘಗಳು ಇವೆ. ಅದು ಒಂದು ಐ.ಎನ್.ಟಿ.ಯು.ಸಿ. ಹಾಗೂ ಮತ್ತೊಂದು ಎಚ್.ಎಂ.ಎಸ್. ಇವರಿಬ್ಬರಲ್ಲಿ ಇರತಕ್ಕ ಕೆಲವು ತಿಕ್ಕಾಟ ಏನಿದೆಯೋ ಇದರಲ್ಲಿ ಒಬ್ಬರು ಅಲ್ಲಿನ ಅಧ್ಯಕ್ಷರನ್ನು ಉಪಯೋಗಿಸಿಕೊಂಡಿದ್ದಾರೆ. ಮತ್ತೊಬ್ಬರು ಬೇರೆಯವರನ್ನು ಉಪಯೋಗಿಸುವ ಪ್ರಯತ್ನ ಮಾಡಿದ್ದಾರೆ. ಈ ಒಂದು ನವಮಂಗಳೂರು ಬಂದರು ಏನಿದೆ ಇದನ್ನು ನಿರ್ಮಾಣ ಮಾಡುವ ಹಂತದಲ್ಲಿ ಇದು ನಮ್ಮಲ್ಲಿ ಆಗಬೇಕೆಂದು ಎಲ್ಲರೂ ಪ್ರಯತ್ನ ಮಾಡಿದ್ದಾರೆ. ಅಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡಬೇಕು ಮತ್ತು ಅದರ ಉಪಯೋಗ ಹೆಚ್ಚಾಗಿ ಕರ್ನಾಟಕ ರಾಜ್ಯಕ್ಕೆ ಆಗಬೇಕು ಎನ್ನುವುದರ ಬಗ್ಗೆ ಆಕಡೆಯವರಿಗಿಂತಾ ಈ ಕಡೆಯವರು ಏನೂ ಕಡಿಮೆ ಇಲ್ಲ. ಆದರೆ ಇವತ್ತು ೨ ಕಾರ್ಮಿಕ ಸಂಘಗಳಲ್ಲಿ ಉಂಟಾದ ಘರ್ಷಣೆ ಮತ್ತು ಒಬ್ಬ ಅಧಿಕಾರಿ ಕಳೆದ ಐದಾರು ವರ್ಷಗಳಿಂದ ಪುನಃಪುನಃ ಅಧಿಕಾರದಲ್ಲಿ ಮುಂದುವರೆದುಕೊಂಡು ಹೋಗುವುದಕ್ಕೋಸ್ಕರ ಉಪಯೋಗಿಸಿಕೊಂಡ ಒಂದು ಸಂದರ್ಭ. ಇದನ್ನೆಲ್ಲಾ ನೋಡಿ ಮುಖ್ಯಮಂತ್ರಿಗಳು ಒಂದು ಕಾಗದವನ್ನು ೧೯೮೮ರಲ್ಲಿ ಬರೆದಿದ್ದಾರೆ. ಇವರಿಗೆ ತಿಳಿದ ಕೆಲವಾರು ವಿಷಯಗಳನ್ನು ಗಮನಕ್ಕೆ ತಂದಾಗ, ಕರ್ನಾಟಕ ರಾಜ್ಯದ ಒಬ್ಬ ಮುಖ್ಯಮಂತ್ರಿಯಾಗಿ ಬಹುಶಃ ಇವರನ್ನು ಅಲ್ಲಿಂದ ಬದಲಾವಣೆ ಮಾಡುವುದು ಒಳ್ಳೆಯದು ಎಂದು ಇಂತಹ ಕಾರಣಗಳು ಎಂದು ಹೇಳಿ ಕಾರಣಗಳನ್ನು ಕೊಟ್ಟು ಬರೆದಿದ್ದಾರೆ. ಬಹುಶಃ ಇದು ಕೇಂದ್ರ ಸರ್ಕಾರದ ಒಂದು ಸಂಸ್ಥೆಯಾಗಿರುವುದರಿಂದ ಅವರು ಇದನ್ನು ಪರಿಶೀಲಿಸಿ ಎಂದು ಹೇಳಿದ್ದಾರೆ. ಆದರೆ ಈ ರಾಜ್ಯದಲ್ಲಿ ಆಡಳಿತವನ್ನು ಮತ್ತು ನ್ಯಾಯಪಾಲನೆಯನ್ನು ಮಾಡತಕ್ಕದ್ದು ಮತ್ತು ಇಲ್ಲಿನ ಜನರಿಗೆ ನೆಮ್ಮದಿಯನ್ನು ತರತಕ್ಕದ್ದು ಇವರ ಕರ್ತವ್ಯವಾಗಿದೆ. ಅವರು ಹೇಳಿದ ಹಾಗೆ ಇದು ಕರ್ನಾಟಕ ರಾಜ್ಯದ ಮಿತಿಗೆ ಒಳಪಟ್ಟಿದೆ. ರಾಜ್ಯದಲ್ಲಿ ಎಲ್ಲೇ ಗಲಾಟೆಯಾದರೆ ಅಥವಾ ಅಕೃತ್ಯಗಳು ನಡೆದಿದ್ದರೆ ಅದನ್ನು ಸರಿಪಡಿಸತಕ್ಕದ್ದು ಮತ್ತು ಬಂದೋಬಸ್ತು ಮಾಡತಕ್ಕದ್ದು ಕರ್ನಾಟಕದ ಪೋಲೀಸರಿಗೆ ಸಂಬಂಧಪಟ್ಟಿರತಕ್ಕ ವಿಷಯ. ಆದುದರಿಂದ ಅವರು ಒಳಗೆ ಹೋದರು, ಹೊರಗೆ ಹೋದರು ಎನ್ನುವುದಕ್ಕಿಂತಲೂ ಮುಖ್ಯವಾಗಿ ಎಲ್ಲಿ ಗಲಾಟೆಯಾಗುತ್ತದೆ ಅಲ್ಲಿ ಐ. ಪಿ. ಸಿ. ಪ್ರಕಾರ ಅಲ್ಲಿಗೆ ಹೋಗಿ ಸ್ಥಿತಿಯನ್ನು ತಹಬಂದಿಗೆ ತರುವುದು ರಾಜ್ಯದ ಪೋಲೀಸರ ಕೆಲಸವಾಗಿರುತ್ತದೆ. ಅಲ್ಲಿ ೬೦ ಜನರನ್ನು ಸಸ್ಪೆಂಡ್ ಮಾಡಿದ್ದು ಅವರನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೊರಗಡೆ ಗುಡಾರ ಹಾಕಿಕೊಂಡು ಅವರು ಅಲ್ಲಿ ಶಾಂತಿಯುತವಾಗಿ ಉಪವಾಸವ್ರತವನ್ನು ಮಾಡುತ್ತಿದ್ದಾರೆ. ಬಹುಶಃ ಯಾವ ವಿಧವಾದ ತೊಂದರೆ ಇಲ್ಲ. ಆದರೆ ಇಲ್ಲಿ ಹೇಳಿದ್ದನ್ನು ನೋಡಿದರೆ ಬಹುಶಃ ಒಂದು ಕಾರ್ಖಾನೆ ಮಾಡಿ ಅಲ್ಲಿ ಮ್ಯಾನುಫ್ಯಾಕ್ಚರ್ ಮಾಡಿ ಭಾಷಣ ಮಾಡಿದ ಹಾಗೆ ಇದು ಆಯಿತು. ಇದರಿಂದ ಏನಾಗುತ್ತದೆಂದರೆ, ಇವತ್ತು ಇದರಿಂದ ಸತ್ಯಾಂಶವನ್ನು ಕಂಡುಹಿಡಿದು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮೊಯ್ಲಿಯವರು ನವ ಮಂಗಳೂರು ಬಂದರು ಎರಡು ಕಣ್ಣು ಇದ್ದಹಾಗೆ, ಎರಡು ಕಿವಿ ಇದ್ದ ಹಾಗೆ ಎಂದು ಹೇಳಿದರು. ಇವತ್ತು ನಾವು ಅದನ್ನು ಉಳಿಸಿಕೊಳ್ಳುವುದಕ್ಕೆ ಕಾರ್ಮಿಕ ಸಂಘಗಳು ಯಾವ ರೀತಿ ಸಹಕಾರ ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ಇವತ್ತು ಕೇಂದ್ರದ ಕಾರ್ಮಿಕ ಕಮಿಷನರ್‌ರವರ ಮುಂದೆ ಈ ವಿಷಯ ಇದೆ. ಇವತ್ತು ಅಲ್ಲಿ ಅವರಿಗೆ ಬಹುಮತ ಇದೆಯೋ ಅಥವಾ ಇವರಿಗೆ ಬಹುಮತ ಇದೆಯೋ, ಆದರೆ ನಾವು ಆಡಳಿತ ನಡೆಸತಕ್ಕ ಕಾಲದಲ್ಲಿ ಈ ರೀತಿ ಘರ್ಷಣೆಯಾದರೆ, ತಿಕ್ಕಾಟವಾದರೆ, ಪೋಲೀಸರು ಪ್ರವೇಶ ಮಾಡಬೇಕಾಗುತ್ತದೆ. ಇವತ್ತು ಅಲ್ಲಿನ ಅಧ್ಯಕ್ಷರು ಏನೊಂದು ತಪ್ಪು ತಿಳುವಳಿಕೆಯಿಂದ ಕಾಗದ ಬರೆದಿದ್ದಾರೆಂದರೆ, ಒಬ್ಬರು ಪಿ.ಎಸ್.ಐ. ಹಾಗೂ ಒಬ್ಬರು ಡಿ.ವೈ.ಎಸ್.ಪಿ. ಅವರಿಂದ ಅವರಿಗೆ ಸರಿಯಾದ ರಕ್ಷಣೆ ಸಿಗದಿದ್ದ ಮೇಲೆ ಇವರೇ ಸರ್ಕಾರ ಇವರ ಮೇಲೆ ಯಾರೂ ಇಲ್ಲ ಎಂದು ತಿಳಿದು ಕಾಗದ ಬರೆದಿದ್ದಾರೆ. ಡಿ.ವೈ.ಎಸ್.ಪಿ. ಮೇಲೆ ಎಸ್.ಪಿ. ಅವರ ಮೇಲೆ

ಡಿ.ಐ.ಜಿ, ಅವರ ಮೇಲೆ ಅಡಿಷನಲ್ ಐ.ಜಿ. ಅವರ ಮೇಲೆ ಐ.ಜಿ ಅವರ ಮೇಲೆಡಿ.ಜಿ.ಪಿ. ಅವರ ಮೇಲೆ ಹೋಮ್ ಸೆಕ್ರೆಟರಿ,ನಂತರ ಮುಖ್ಯಮಂತ್ರಿಗಳು ಇದ್ದಾರೆ ಎಂಬುದನ್ನು ಮರೆತು ನೇರ ಅಲ್ಲಿಗೆ ಕಾಗದ ಬರೆದಿದ್ದಾರೆ. ಇವತ್ತು ಕರ್ನಾಟಕದಲ್ಲಿ ಒಂದು ಸರ್ಕಾರ ಇದೆ ಎಂಬುದನ್ನು ಮರೆತು,ಅದು ಸಹಕಾರ ಕೊಟ್ಟಿಲ್ಲ ಎಂದು ಹೇಳಿರತಕ್ಕದ್ದು ಮಿತಿಮೀರಿದ್ದು ಎಂದು ನಾನು ಅತ್ಯಂತ ನಮ್ರತೆಯಿಂದ ಹೇಳಬೇಕಾಗುತ್ತದೆ. ಅವರ ನಿಲುಮೆಗೆ ಮೀರಿದ ಮಾತು ಅದು ಆಗಿದೆ ಇವತ್ತು ಕೇಂದ್ರ ಸರ್ಕಾರದ ಅನೇಕ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿವೆ. ಅಲ್ಲೆಲ್ಲಾ ಸೆಂಟ್ರಲ್ ಸೆಕ್ಯುರಿಟಿ ಫೋರ್ಸಸ್ ಕೆಲಸ ಮಾಡುತ್ತಿದೆ. ಅವರು ನಮಗೆ ಸಹಾಯ ಬೇಕು ಎನ್ನುವ ಸಂದರ್ಭದಲ್ಲಿ ನಾವು ಸಹಾಯಕ್ಕೆ ಹೋಗುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ಅಲ್ಲಿ ಇರತಕ್ಕ ಒಬ್ಬ ಸೆಕ್ಯುರಿಟಿ ಅಧಿಕಾರಿ ಪತ್ರ ಬರೆದಿದ್ದಾರೆ. ಇಲ್ಲಿ ಗಲಾಟೆ ಆಗುವುದು ಇದೆ, ಆದ್ದರಿಂದ ತಾವು ಬಂದು ಸರಿಪಡಿಸಬೇಕೆಂದು ಹೇಳಿದ ಮೇಲೆ ಪೋಲೀಸಿನವರು ಅಲ್ಲಿಗೆ ಹೋಗಿದ್ದಾರೆ. ಆ ದೃಷ್ಟಿಯಲ್ಲಿ ಎಲ್ಲಿ ಕಂಪ್ಲೇಂಟ್ ಬರುತ್ತದೆಯೋ ಎಲ್ಲಿ ಗಲಾಟೆಯಾಗುತ್ತದೆಯೋ ಎಲ್ಲಿ ಶಾಂತಿ ಭಂಗ ಆಗುವ ಪರಿಸ್ಥಿತಿ ಇರುತ್ತದೆ ಅಲ್ಲಿಗೆ ಅವರು ಹೋಗಿ ಬಂದಿದ್ದಾರೆ. ಬಹುಶಃ ಅಲ್ಲಿ ಈ ರೀತಿ ಆಗಿದೆ ಎಂದು ಹೇಳಿ ಮಾನ್ಯ ಉಮರಬ್ಬನವರಾಗಲೀ, ಮಾನ್ಯ ಆಡ್ಯಂತಾಯನವರಾಗಲೀ, ಮಾನ್ಯ ವೀರಪ್ಪಮೊಯ್ಲಿಯವರಾಗಲೀ ನನಗಾದರೂ ಕಾಗದ ಬರೆದಿದ್ದರೆ, ಆಗ ನಿಮಗೆ ಕಾಗದ ಬರೆದಿದ್ದೆ ನೀವು ಏನೂ ಮಾಡಿಲ್ಲ ಎಂದಿದ್ದರೆ ಅದು ನನ್ನ ಕರ್ತವ್ಯಲೋಪವಾಗುತ್ತದೆ. ಆದರೆ ಏನೂ ಮಾಡಿಲ್ಲ. ಈಗ ಅವರು ನನ್ನದು ಕರ್ತವ್ಯ ಲೋಪ ಆಗಿದೆ ಎಂದರೆ ಹೇಗೆ ? ಇವತ್ತು ರಾಜ್ಯದಲ್ಲಿ ಒಂದೆರಡು ಮೂರು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಸರ್ಕಾರ ಇಲ್ಲ. ಮಿಕ್ಕೆಲ್ಲಾ ಕಡೆ ಕಾಂಗ್ರೆಸ್ ಸರ್ಕಾರ ಇದೆ. ಇವತ್ತು ಅಲ್ಲಿ ಯಾವ ರೀತಿ ಕಾನೂನು ಪಾಲನೆ ಆಗುತ್ತಿದೆ ಮತ್ತು ಇಲ್ಲಿ ಯಾವ ರೀತಿ ಇದೆ ಎಂಬುದನ್ನು ಅವರು ಅವರ ಆತ್ಮ ಒಪ್ಪುವ ಹಾಗೆ ಹೇಳಲಿ. ಇವತ್ತು ಎಷ್ಟು ಶಾಂತಿ ಭಂಗಗಳು ಆಗಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಕಡಿಮೆ ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆ ಎನ್ನುವ ಬಗ್ಗೆ ಅವರೇ ಹೇಳಲಿ ಕರ್ನಾಟಕ ರಾಜ್ಯದ ಪೋಲೀಸ್ ಅಧಿಕಾರಿಗಳು ಒಂದು ರೀತಿ ಮಾದರಿಯಾಗಿ ನಡೆದುಕೊಂಡು ಬಂದಿದ್ದಾರೆಂದು ಅವರ ಕಡೆಯವರೇ ಹೇಳಿದ್ದಾರೆ. ಬಹುಶಃ ಅವರಿಗೆ ಹೇಗಾಯಿತೋ ಹೇಳಿದ ಹಾಗೆ ಮಾಡಿಲ್ಲ ಎಂದು ಹೇಳಿ ಆರೋಪಣೆ ಮಾಡುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾರು ಹೇಳಿದ ಹಾಗೆ ಎಂದು ಹೇಳುತ್ತೀರಿ ? ಇವತ್ತು ವಿಷಯದ ಗಂಭೀರತೆಯನ್ನು ತಿಳಿದು ಮಾತನಾಡಬೇಕು.

ಶ್ರೀ ಬಿ. ರಾಚಯ್ಯ.—ನಾನು ಹೇಳುವುದನ್ನು ಪೂರ್ತಿ ಕೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾತನಾಡಿದವರು ನಾವು ಇಲ್ಲಿ. ಅವರು ಹೇಳಿದಹಾಗೆ ಮಾಡಲಿಲ್ಲ ಎಂದು ಹೇಳಿದರೆ ಸರಿಯಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಇವತ್ತು ಅಲ್ಲಿ ಎರಡು ಕಾರ್ಮಿಕ ಸಂಘಗಳು ಇವೆ. ಮತ್ತು ಅಲ್ಲಿ ಜನ ಸತ್ಯಾಗ್ರಹ ಹೂಡಿದ್ದಾರೆ. ಹಾಗೂ ಅವರು ಮತ್ತೆ ತಮ್ಮನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅವರು ವಾಪಸ್ ತೆಗೆದುಕೊಂಡಿಲ್ಲ. ಹಾಗೂ ಅಲ್ಲಿ ಎರಡು ಸಂಘಗಳು ಇದ್ದು ಈ ಜನ ಶಾಂತಿಯುತವಾಗಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಯಾರೇ ಶಾಂತಿಯುತವಾಗಿ ಸತ್ಯಾಗ್ರಹ ಮಾಡುತ್ತಿದ್ದರೆ. ಅಂತಹ ಸಂಘಗಳು ಇರತಕ್ಕಂತಹ ಟೆಂಟ್‌ಗಳನ್ನು ಕಿತ್ತು ಅವರನ್ನು ಎಬ್ಬಿಸುವುದಕ್ಕೆ ಆಗುತ್ತದೆಯೋ ? ಒಂದು ಸಂಘದವರು ಮತ್ತೊಂದು ಸಂಘದವರ ಮೇಲೆ ಈ ರೀತಿ ಮಾಡಿಸುತ್ತಿದ್ದಾರೆ. ನಾನು ಕೇಳುತ್ತಿದ್ದೇನೆ. ಇವತ್ತು ನಾವು ನೀವೂ ಎಲ್ಲಾ ಸೇರಿ ನವಮಂಗಳೂರು ಬಂದರನ್ನು ಉಳಿಸಿಕೊಳ್ಳಬೇಕು ತಮ್ಮಲ್ಲಿ ಆ ಭಾವನೆ ಬರಬೇಕು. ಮತ್ತೊಂದು ವಿಷಯ ಪ್ರಸ್ತಾಪ ಮಾಡಿದ್ದಾರೆ. ಪೋಲೀಸರು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳಿದ್ದಾರೆ. ಬಹುಶಃ ನಮ್ಮ ಎಸ್.ಪಿ., ಡಿ.ಐ.ಜಿ, ಡಿ.ಸಿ., ಅವರು ಹೋಗಿ ಅವರ ಜೊತೆಯಲ್ಲಿ ಚರ್ಚೆ ಮಾಡಿ ಮತ್ತು ಇಬ್ಬರಿಗೂ ಪಾಸ್‌ಗಳನ್ನು ಕೊಡತಕ್ಕದ್ದು ಮತ್ತು ಯಾರು ಲಿಸ್ಟ್‌ನಲ್ಲಿರತಕ್ಕಂಥ ವರ್ಕಸ್ ಇದ್ದಾರೆ ಅವರನ್ನು ತೆಗೆದುಕೊಂಡ ಮೇಲೆ, ಕ್ಯಾಷುಯಲ್ ಲೇಬರರ್ಸ್ ಯಾರಿದ್ದಾರೆ ಅವರನ್ನು ಆ ಮೇಲೆ ತೆಗೆದು ತೆಗೆದುಕೊಳ್ಳಬೇಕೆಂದು ಒಪ್ಪಂದ ಆಗಿದೆ ಎಂದು ನನಗೆ ವರದಿ ಇದೆ. ಅದನ್ನು ಉಲ್ಲಂಘನೆ ಮಾಡಿದುದರಿಂದ ಮತ್ತು ಅವರು ಕೆಲವೊಂದು ಜನರನ್ನು ಮಾತ್ರ ತೆಗೆದುಕೊಂಡು, ಕ್ಯಾಷ್ಯುಯಲ್ ಲೇಬರರ್ಸ್‌ನ್ನು ಹಾಗೆ ತೆಗೆದುಕೊಳ್ಳುತ್ತಿರುವುದರಿಂದ, ಲಿಸ್‌ನಲ್ಲಿರತಕ್ಕಂಥವರನ್ನು ತೆಗೆದುಕೊಳ್ಳದೇ ಇರುವುದರಿಂದ ಸತ್ಯಾಗ್ರಹ ಹೂಡುವುದಕ್ಕೆ ಕಾರಣ

ಾಯಿತು ಎಂದು ತಿಳಿದು ಬಂದಿದೆ. ಈ ಎಲ್ಲಾ ವಿಷಯವೂ ಕೂಡಾ ಕೇಂದ್ರ ಲೇಬರ್ ಕಮಿಷನರ್ ರವರ ಮುಂದಿದೆ. ಇದಕ್ಕೆ ಅವರು ಪರಿಹಾರ ಹುಡುಕುತ್ತಾರೆಂದು ನಂಬಿರುತ್ತೇನೆ. ಆದುದರಿಂದ ಚೀಫ್ ಮಿನಿಸ್ಟರ್ ಆಗಿರತಕ್ಕಂಥ ಹೆಗಡೆಯವರು ಅಲ್ಲಿಂದ ಅಧಿಕಾರಿಗಳನ್ನು ಓಡಿಸುವ ಉದ್ದೇಶದಿಂದ ಇದನ್ನು ಮಾಡಿದ್ದಾರೆ ಎಂದು ಒಂದು ರೀತಿಯಿಂದ ಆರೋಪವನ್ನು ಮಾನ್ಯ ಶ್ರೀನಿವಾಸ್‌ರವರು, ಅದೇ ರೀತಿಯಲ್ಲಿ ಮಾನ್ಯ ಮೊಯಿಲಿಯವರು ಮಾಡಿದ್ದಾರೆ. ಒಬ್ಬ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಕರ್ನಾಟಕದಲ್ಲಿ ನಡೆಯುತಕ್ಕಂಥ ಯಾವುದೇ ಕೇಂದ್ರ ಸರ್ಕಾರದ ಸಂಸ್ಥೆಯಾಗಿದ್ದರೂ ಕೂಡಾ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಅದರ ಮುಖ್ಯಮಂತ್ರಿಯಾಗಿ ಹೇಳತಕ್ಕ ಹಕ್ಕಿದೆ. ಆ ದೃಷ್ಟಿಯಿಂದ ತಾವು ಇವತ್ತು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಮತ್ತು ಪ್ರಧಾನಿಗಳಿಗೆ ಬರೆದಿದ್ದರೆ, ಬಹುಶಃ ಅದನ್ನು ವಿಚಾರ ಮಾಡಿ, ಅದು ಸರಿಯೋ ತಪ್ಪೋ ಎಂಬುದನ್ನು ವಿಚಾರ ಮಾಡತಕ್ಕಂಥ ಕೆಲಸ ಕೇಂದ್ರ ಸರಕಾರಕ್ಕೆ ಸೇರಿದ್ದು. ಮುಖ್ಯಮಂತ್ರಿಯಾಗಿ ಬರೆಯ ಕೂಡದು ಎಂದು ಹೇಳಿದರೆ, ಮುಖ್ಯಮಂತ್ರಿಗಳಾಗಿ ಬರೆಯತಕ್ಕಂಥ ಎಲ್ಲ ಕಾಗದಗಳನ್ನೂ ಈ ದೃಷ್ಟಿಯಿಂದ, ಎಷ್ಟೇ ಕಾಗದ ಬರೆದಿದ್ದರೂ ಇದೇ ಉದ್ದೇಶದಿಂದ ಎಂದು ಹೇಳಿದರೆ, ಒಬ್ಬ ಅಧಿಕಾರಿ ಆರು ವರ್ಷಗಳ ಕಾಲ ಒಂದೇ ಕಡೆ ಇದ್ದರೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಹೇಳಿದ್ದು ಸ್ವಂತ ಬುದ್ಧಿಯಿಂದ ಬರೆದರೋ, ಪ್ರಭಾವದಿಂದ ಬರೆದಿದ್ದಾರೊ ಎಂದು ಆ ರೀತಿ ಹೇಳಿದ್ದೇನೆ.

ಶ್ರೀ ಬಿ. ರಾಚಯ್ಯ.—ಬಹುಶಃ ಅವರಿಗೆ ಎಲ್ಲ ಸಂದರ್ಭದಲ್ಲೂ ಎರವಲು ಬುದ್ಧಿ ಎಂದು ಭಾವನೆ ಮಾಡಿಕೊಳ್ಳುವುದು ತಪ್ಪು. ಇವತ್ತು ನಾನು ಕೇಳುತ್ತಿದ್ದೇನೆ ಬಹುಶಃ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಯಾವುದು ತಪ್ಪು ಯಾವುದು ಸರಿಯಲ್ಲ ಎಂದು ತೀರ್ಮಾನ ತೆಗೆದುಕೊಳ್ಳುವ ಸ್ವಶಕ್ತಿ ಅವರಿಗಿಲ್ಲ ಎಂದು ಹೇಳಿದರೆ ನಾನು ಏನೂ ಹೇಳಲಾರೆ. ನಾನು ಕೇಳಿಕೊಳ್ಳುವುದು ಇಷ್ಟೆ. ಕಾರ್ಮಿಕ ಸಂಘಗಳ ಈ ಒಂದು ಘರ್ಷಣೆಯಿಂದ ನಮ್ಮ ಪೋಲೀಸರಿಗೆ ಜಾಸ್ತಿ ಕೆಲಸ ಕೊಡಬೇಡಿ ಎಂದು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ, ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪೋಲೀಸರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಹೇಳಿ ಇದನ್ನು ಸ್ವಲ್ಪ ಮೋಲ್ ಮೌಂಟನ್ ಮಾಡುವುದಕ್ಕೆ ಹೋಗಬೇಡಿ. ನೀವು ಸಹಕಾರ ನೀಡಿದರೆ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ಅಲ್ಲಿ ಯಾರೋ ಏನೋ ಹೇಳಿದರು ಎಂದು ದೊಡ್ಡದು ಮಾಡುವುದಕ್ಕೆ ಬದಲಿಗೆ ಕರ್ನಾಟಕ ರಾಜ್ಯದಲ್ಲಿ ಬೇರೆ ರಾಜ್ಯಗಳನ್ನು ಹೋಲಿಸಿ ನೋಡಿದಾಗ ಆಗಿರತಕ್ಕಂಥ ಅಪರಾಧಗಳ ಸಂಖ್ಯೆ ಯಾಲ್ಲಾಗಲೀ,......

ಶ್ರೀ ಎಂ. ವೀರಪ್ಪಮೊಯಿಲಿ.—ಪಣಂಬೂರಿನಲ್ಲಿ ಏನು ಆಯಿತು ಅದನ್ನು ಹೇಳಿ. ಎಲ್ಲಾ ಕಟ್ಟಿಕೊಂಡು ಏನು ಮಾಡಬೇಕು.

ಶ್ರೀ ಬಿ. ರಾಚಯ್ಯ.—ಪಣಂಬೂರಿನಲ್ಲಿ ಪೋಲೀಸರು ಅವರ ಕರ್ತವ್ಯವನ್ನು ಅವರು ಮಾಡಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಹಾಗಾದರೆ ಅವರಿಗೆ ಸರ್ಟಿಫಿಕೇಟ್ ಕೊಟ್ಟಿರಿ. ಈ ರೀತಿ ಹೇಳಿದ ಮೇಲೆ ಏನು....

ಶ್ರೀ ಬಿ. ರಾಚಯ್ಯ.—ಅವರು ಏನು ಮಾಡಬಹುದು ಆ ರೀತಿ ಅವರು ಕರ್ತವ್ಯ ಮಾಡಿದ್ದಾರೆ. ಕರ್ತವ್ಯ ನಿರ್ವಹಿಸತಕ್ಕ ಕಾಲದಲ್ಲಿ...

ಶ್ರೀ ಎಂ. ವೀರಪ್ಪಮೊಯಿಲಿ.—ಪೋಲೀಸರು ನಿಮ್ಮ ಮುಖಾಂತರ ಕರ್ತವ್ಯ ನಿಭಾಯಿಸಿದ್ದಾರೆ, ನೀವು ಅವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದೀರಿ. ಸರ್ಟಿಫಿಕೇಟ್ ಕೊಟ್ಟಂಥ ನೀವೂ ಶಾಮೀಲಾಗಿ ಮಾಡಿದ್ದೀರಿ. ಆ ಘಟನೆ ಹೇಗೆ ಆಯಿತು ಎನ್ನುವ ಅಂಶದ ಬಗ್ಗೆ ಮಾತನಾಡಿ. ಆದರೆ ಏನು ಘಟನೆ ನಡೆದಿದೆ ಅದರ ಬಗ್ಗೆ ಒಂದು ತನಿಖೆ ಮಾಡುತ್ತೇವೆ, ನ್ಯಾಯವಾಗಿ ಮಾಡುತ್ತೇವೆ ಎಂದು ಇಷ್ಟು ಹೇಳತಕ್ಕಂಥ ಕಳಕಳಿ ಇಲ್ಲದಂಥ ನಿಮ್ಮ ಹತ್ತಿರ ಏನು ಕೇಳುವುದು. ಕಿವಿ ಇದ್ದೂ ಕಿವುಡಾಗಿರುವ ಸರಕಾರದ ಹತ್ತಿರ ಕೇಳುವುದೂ ಏನೂ ಇಲ್ಲ. ರಾಜಕೀಯವಾಗಿ ಈ ರೀತಿ ಹೇಳಿದ ಮೇಲೆ ಏನು ಕೇಳುವುದಕ್ಕೆ ಇದೆ. ನ್ಯಾಯವಾಗಿ ಸರಿಯಾದ ರೀತಿಯಲ್ಲಿ ಪೋಲೀಸರು ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಹೇಳಿದ ಮೇಲೆ ಅದಕ್ಕೆ ಹೇಳುವುದು ಏನು. ಇಂತಹ ಸರ್ಟಿಫಿಕೇಟ್ ಕೊಡುವುದರಿಂದ ಅವರು ಇನ್ನೂ ಉತ್ತೇಜಿತರಾಗಿ ಶಾಂತಿಭಂಗ ಮಾಡುತ್ತಾರೆ. ಆದುದರಿಂದ ಸಿ.ಬಿ.ಐ. ಎನ್‌ಕ್ವೈರಿಗೆ ಧೈರ್ಯಮಾಡಿ. ನಿಮಗೆ ಧೈರ್ಯ

ಇದ್ದರೆ, ಕೆಚ್ಚದೆ ಇದ್ದರೆ, ನಿಷ್ಕಲ್ಮಷ ಹೃದಯ ಇದ್ದರೆ ಸಿ.ಬಿ.ಐ. ಎನ್‌ಕ್ವೈರಿಗೆ ಒಪ್ಪಿಕೊಳ್ಳಿ. ಧೈರ್ಯ ಇಲ್ಲದಿದ್ದರೆ ಹೆಂಬೇಡಿಗಳಾಗಿದ್ದರೆ ಒಪ್ಪಿಕೊಳ್ಳಬೇಡಿ. ನಮಗೆ ಉತ್ತರ ಬೇಕಾಗಿಲ್ಲ.

ಶ್ರೀ ಬಿ. ರಾಚಯ್ಯ.—ಇವರಿಂದ ನಾನು ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧಿಕಾರಿಗಳನ್ನು ಸಮರ್ಥನೆ ಮಾಡುವುದಕ್ಕೆ ಪಕ್ಷದ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಪೋಲೀಸ್ ಅಧಿಕಾರಿಗಳನ್ನು ಉಪಯೋಗ ಮಾಡಿದ್ದಾರೆ ಎಂದು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಅವರು ಸಿ.ಬಿ.ಐ. ಎನ್‌ಕ್ವೈರಿಗೆ ಒಪ್ಪುವುದಿಲ್ಲ ಎಂಬುದು ಅವರ ಉತ್ತರದಿಂದ ಸ್ಪಷ್ಟವಾಗಿದೆ. ಅಂತಹ ಉತ್ತರಗಳನ್ನು ಕೇಳುವುದಕ್ಕೆ ನಾವು ಇಲ್ಲಿ ಕುಳಿತುಕೊಳ್ಳುವುದಿಲ್ಲ. ನಾವು ವಾಕ್‌ಔಟ್ ಮಾಡುತ್ತೇವೆ. ಜವಾಬ್ದಾರಿಯುತವಾಗಿ ಧೈರ್ಯ ಇದ್ದರೆ ಸಿ.ಬಿ.ಐ. ಎನ್‌ಕ್ವೈರಿ ಎದುರಿಸಿ.

(ಶ್ರೀ ಎಂ. ವೀರಪ್ಪಮೊಯಿಲಿಯವರ ನೇತೃತ್ವದಲ್ಲಿ ಸಭೆಯಲ್ಲಿದ್ದ ಕಾಂಗ್ರೆಸ್–ಐ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಬಿ. ರಾಚಯ್ಯ.—ಸಿ.ಬಿ.ಐ. ಎನ್‌ಕ್ವೈರಿಯನ್ನು ಎಲ್ಲೆಲ್ಲಿ ಕೊಲೆ ಆಯಿತೊ ಅಲ್ಲೆ ಮಾಡಲಿಲ್ಲ. ಇಲ್ಲಿ ನಡೆದಿರತಕ್ಕಂಥ ವಿಷಯದಲ್ಲಿ ಏನು ತಿರುಳಿಲ್ಲ. ಇಲ್ಲಿ ಏನೂ ಇರಲಿಲ್ಲ. ಎಷ್ಟು ಗಂಟೆ ಮಾತನಾಡಿದ್ದಾರೆ. ಅಲ್ಲಿ ಒಬ್ಬ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ನ್ನು ವರ್ಗ ಮಾಡಿಸುವುದಕ್ಕೋಸ್ಕರ ಇಷ್ಟೆಲ್ಲಾ ದೊಡ್ಡದಾಗಿ ಸೃಷ್ಟಿ ಮಾಡುತ್ತಿದ್ದಾರೆ. ಇದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸರಿಯಾಗಿ ಕರ್ತವ್ಯ ಮಾಡತಕ್ಕ ಅಧಿಕಾರಿಯನ್ನು ರಕ್ಷಣೆ ಮಾಡುವುದಕ್ಕೆ ನಾನು ಇರುವುದು. ಇವರು ಹೇಳುವ ರೀತಿಯಲ್ಲಿ ಕುಣಿಯುವುದಕ್ಕೆ ಅಲ್ಲ. ಅವರ ಕರ್ತವ್ಯ ಅವರು ಮಾಡಿದ್ದಾರೆ. ಇನ್ನು ಮೇಲೆ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಕಾರ್ಮಿಕ ಸಂಘಗಳನ್ನು ಕಟ್ಟುವುದು ಬೇಕಾಗಿಲ್ಲ, ನಮ್ಮ ಕಡೆಯವರೇ ಇರಬಹುದು, ಅವರ ಕಡೆಯವರೇ ಇರಬಹುದು, ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಕರ್ನಾಟಕ ಸರ್ಕಾರ ಸಹಕಾರ ಮಾಡಲಿಲ್ಲ ಎಂದು ಬರೆದಿರತಕ್ಕ ಅಧಿಕಾರಿಯ ಉದ್ಧಟತನವನ್ನು ನಾನು ಪ್ರಶ್ನೆ ಮಾಡಬೇಕಾಗಿ ಬಂದಿದೆ. ಈ ದೃಷ್ಟಿಯಿಂದ ಇವತ್ತು ಹೇಳುತ್ತಿದ್ದೇನೆ ಕರ್ನಾಟಕ ಸರ್ಕಾರ ಸಹಕಾರ ನೀಡಲಿಲ್ಲ ಎಂದು ಬರೆದಿರತಕ್ಕದ್ದು ನೋವನ್ನು ಉಂಟುಮಾಡಿದೆ. ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್‌ರವರನ್ನು ಹೊಗಳಲಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಇಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಮಂತ್ರಿ ಹೇಗೆ ಆಗುತ್ತೇನೆ ? ನಾನು ಇಲ್ಲಿ ಇದ್ದೇನೆ ಎಂದು ತಿಳಿದಿದ್ದರೂ ಕೂಡಾ ಒಂದು ದಿವಸ ಕೂಡಾ ಫೋನ್ ಮಾಡಿ ಅವರು ವಿಷಯ ಹೇಳಲಿಲ್ಲ. ಆ ಸೌಜನ್ಯ ಕೂಡಾ ಅವರಿಗೆ ಇರಲಿಲ್ಲ. ಯುದ್ಧದಲ್ಲಿ ಕುಂತಿ ನೀನು ನನ್ನ ಮಗನೇ ಎಂದು ಹೇಳಿದ ಹಾಗೆ ಆಯಿತು. ಮಾನ್ಯ ಮೊಯಿಲಿಯವರು, ಮಾನ್ಯ ಶ್ರೀನಿವಾಸ್‌ರವರು, ಆ ಅಧಿಕಾರಿ ಶೆಡ್ಯೂಲ್ಡ್ ಕ್ಯಾಸ್ಟ್ ಆಗಿದ್ದರೂ ಅವರಿಗೆ ಏನೂ ಮಾಡಲಿಲ್ಲ ಎಂದು ಹೇಳಿದರು. ಇಲ್ಲಿ ನಾನು ಶೆಡ್ಯೂಲ್ಡ್ ಕ್ಯಾಸ್ಟ್ ಮಂತ್ರಿಯಾಗಿ ಶೆಡ್ಯೂಲ್ಡ್ ಕ್ಯಾಸ್ ಎಲ್ಲರನ್ನೂ ಸಂರಕ್ಷಣೆ ಮಾಡುವುದಕ್ಕೆ ಅಲ್ಲ. ಯಾರು ತಪ್ಪು ಮಾಡುತ್ತಾರೆ ಅವರನ್ನು ರಕ್ಷಣೆ ಮಾಡತಕ್ಕದ್ದು ನನ್ನ ಕರ್ತವ್ಯ ಅಲ್ಲ. ಈ ದೃಷ್ಟಿಯಲ್ಲಿ ನನ್ನ ಕರ್ತವ್ಯ ಮಾಡುತ್ತಿದ್ದೇನೆಯೇ ಹೊರತು ಕಾರ್ಮಿಕ ಸಂಘಗಳಿಗೋಸ್ಕರ ಅಧಿಕಾರವನ್ನು ಉಪಯೋಗಿಸಿಕೊಂಡು ಪ್ರತಿಯೊಂದು ಸಾರಿ ಎಕ್ಸ್‌ಟೆನ್‌ಷನ್ ಕೊಡಿಸಬೇಕೆಂದು ಹೇಳಿಕೊಂಡು ಬಂದಿರತಕ್ಕಂಥ ಜನ ಕಾರ್ಮಿಕರನ್ನು ಎಷ್ಟರಮಟ್ಟಿಗೆ ಉದ್ಧಾರ ಮಾಡುತ್ತೀರಿ ಎಂಬುದನ್ನು ನೋಡಬೇಕು. ಈ ದೃಷ್ಟಿಯಲ್ಲಿ ನಾನು ಕೇಳಿಕೊಳ್ಳುವುದು ನಡೆದಿರತಕ್ಕಂಥ ಘಟನೆ ಸಣ್ಣ ಘಟನೆ ಇಲ್ಲಿ ಯಾರು ಯಾರು ಹೊಡೆದಾಡಿದರು ಅವರ ಪಟ್ಟಿಯೆಲ್ಲಾ ನಾನು ಓದುತ್ತಾ ಕುಳಿತುಕೊಂಡರೆ ಮಾನ್ಯ ಸದಸ್ಯರೆಲ್ಲರಿಗೂ ತೊಂದರೆಯಾಗುತ್ತದೆ. ಯಾರು ಯಾರು ಹೇಗೆ ಕಸ್ಟಮ್ಸ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ, ಕಾಪಿಪೋಸಾದಲ್ಲಿ ಅರೆಸ್ಟ್ ಮಾಡಿದ್ದಾರೆ, ಎನ್ನುವ ಬಗ್ಗೆ ಎರಡೂ ಕಡೆಯವರ ಪಟ್ಟಿ ನನ್ನ ಹತ್ತಿರ ಇದೆ, ಅದನ್ನು ಓದಿದರೆ ಅದು ಬಹಳ ದೊಡ್ಡದಾಗಿರುತ್ತದೆ. ಅವರ ಬೆಂಬಲಿಗರು ಯಾರು ಏನು ಎಲ್ಲರದ್ದೂ ಕೂಡಾ ಪಟ್ಟಿ ಇದೆ. ಆ ಪಟ್ಟಿಯನ್ನು ನಾನು ಓದಬೇಕು, ಇಷ್ಟೆಲ್ಲಾ ಅವರು ಹೇಳಿದ ಮೇಲೆ ನಾನು ಓದಲೇ ಬೇಕಾಗುತ್ತದೆ. ಆದರೆ ಸಮಯ ಇಲ್ಲ. ಈ ಪಟ್ಟಿಯಲ್ಲಿ ನಾನು ನೋಡಿದೆ. ಇವುಗಳಲ್ಲಿ ಬಹುಶಃ ಎರಡೂ ಕಡೆಯವರು ಇದ್ದಾರೆ. ಹೆಚ್.ಎಂ.ಎಸ್.ನವರೂ ಇದ್ದಾರೆ, ಐ.ಎನ್.ಟಿ.ಯು.ಸಿ.ಯವರೂ ಇದ್ದಾರೆ. ಐ.ಎನ್.ಟಿ.ಯು.ಸಿ. ಯವರು ಎಂಟು ಜನ ಇದ್ದಾರೆ. ಹೆಚ್.ಎಂ.ಎಸ್.ನವರು ೬ ಜನ ಇದ್ದಾರೆ. ಇವರುಗಳಲ್ಲಿ ಯಾರು ಯಾರಿಗೆ ಕನ್‌ವಿಕ್ಟ್

ಆಗಿದೆ, ಯಾರು ಯಾರಿಗೆ ಶಿಕ್ಷೆ ಆಗಿದೆ ಇದನ್ನು ನೋಡುವಾಗ ಐ.ಎನ್.ಟಿ.ಯು.ಸಿ.ಯವರಲ್ಲೇ ಹೆಚ್ಚು ಜನ ಕನ್‌ವಿಕ್ಟ್ ಆಗಿರುವವರನ್ನು ನಾವು ನೋಡುತ್ತೇವೆ. ನಮ್ಮದೆಲ್ಲಾ ಸರಿಯಾಗಿದೆ, ಅವರದ್ದು ತಪ್ಪು ಎಂದು ಹೇಳತಕ್ಕದ್ದು ಸರಿಯಲ್ಲ. ಈ ಸಭೆಯು ಒಂದು ವೇಳೆಯನ್ನು ಎರಡೂ ಕಡೆಯಿಂದ ನಾವು ತೆಗೆದುಕೊಂಡಿದ್ದೇವೆ. ಬಹುಶಃ ನಾವು ಇದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ನನ್ನ ಮನಸ್ಸಿನ ನೋವನ್ನು ನಿಮಗೆ ಹೇಳಿಕೊಂಡು ಇವತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪೋಲೀಸರು ನವಮಂಗಳೂರು ಬಂದರಿನಲ್ಲಿ ತಮ್ಮ ಕರ್ತವ್ಯ ಮಾಡಿದ್ದಾರೆ. ಸಿ.ಬಿ.ಐ. ಎನ್‌ಕ್ವೈರಿ ಮಾಡತಕ್ಕಂಥ ಒಂದು ದೊಡ್ಡ ಘಟನೆ ನಡೆದಿಲ್ಲ ಎಂದು ಹೇಳಿ, ಮಂಗಳೂರಿನ ನವಮಂಗಳೂರು ಬಂದರು ಬೆಳೆಯುವುದಕ್ಕೆ, ಅಭಿವೃದ್ಧಿ ಪಡಿಸುವುದಕ್ಕೆ ಏನೇನು ಸೌಕರ್ಯ ಬೇಕೋ ಅವೆಲ್ಲವನ್ನೂ ಕೂಡಾ ಸರಕಾರ ಕೊಡುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಸಭೆಯು ಈಗ ಮುಕ್ತಾಯವಾಗುತ್ತದೆ. ಸಭೆಯನ್ನು ಸೋಮವಾರ ಬೆಳಿಗ್ಗೆ ೧೦-೦೦ ಗಂಟೆಗೆ ಮುಂದುವರಿಸಲಾಗುತ್ತದೆ.

(ಸಭೆಯು ರಾತ್ರಿ ೧೦-೦೦ ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ ೨ನೇ ಸೆಪ್ಟೆಂಬರ್ ೧೯೮೫ ರಂದು ಸೋಮವಾರ ಬೆಳಿಗ್ಗೆ ೧೦-೦೦ ಗಂಟೆಗೆ ಸೇರಲು ನಿರ್ಧರಿಸಿತು.)